# ಪ್ರಸಾದ

ಮಾಸಿಕ

ನವೆಂಬರ್ 2025

ಸಂಪುಟ 40 ಸಂಚಿಕೆ 11




ಜೆಎಸ್‌ಎಸ್ ಮಹಾವಿದ್ಯಾಪೀಠ, ಮೈಸೂರು



ಚೆನ್ನೈನ ಕೊಲ್ಲುಮೇಡುವಿನಲ್ಲಿ ಬಸವೇಶ್ವರ ಸೋಶಿಯಲ್ ಟ್ರಸ್ಟ್, ವೀರಶೈವ ಲಿಂಗಾಯತ ವೆಲ್‌ಫೇರ್ ಅಸೋಸಿಯೇಷನ್, ಶ್ರೀ ಕಾಶಿ ವಿಶ್ವನಾಥ–ವಿಶಾಲಾಕ್ಷಿ ಆಲಯ ಟ್ರಸ್ಟ್ ಹಾಗೂ ಚೆನ್ನೈ ಹೊರನಾಡು ಕನ್ನಡಿಗರ ಸಂಘದಿಂದ ನಿರ್ಮಿಸಿರುವ ಶ್ರೀ ಬಸವೇಶ್ವರರ ಪ್ರತಿಮೆ ಹಾಗೂ ಬಸವ ಮಂಟಪವನ್ನು ಪರಮಪೂಜ್ಯ ಜಗದ್ಗುರುಗಳವರ ದಿವ್ಯ ಸಾನ್ನಿಧ್ಯದಲ್ಲಿ ಲೋಕಾರ್ಪಣೆಗೊಳಿಸಲಾಯಿತು. ಶ್ರೀ ಶಿವಕುಮಾರ್ ದಳವಾಯಿ, ಶ್ರೀ ಎಸ್. ಪ್ರಕಾಶಂ, ಶ್ರೀ ನಾರಾಯಣ ಭಟ್, ಪ್ರೊ. ಎನ್. ರಾಮನ್, ಶ್ರೀ ಗೊಲ್ಲಹಳ್ಳಿ ಶಿವಪ್ರಸಾದ್, ಪ್ರೊ. ಎ.ಆರ್. ಶಿವಕುಮಾರ್, ಶ್ರೀ ಬಿ. ರಾಜೇಶ್, ಶ್ರೀಮತಿ ದಾಕ್ಷಾಯಿಣಿ ದಳವಾಯಿ, ಶ್ರೀಮತಿ ಪ್ರಭಾ ಮಂಜುನಾಥ್ ಹಾಗೂ ಶ್ರೀ ಗುರುಪ್ರಸಾದ್ ಮೊದಲಾದವರುಗಳಿದ್ದಾರೆ (16 ನವೆಂಬರ್ 2025)

# ಪ್ರಸಾದ

**ಸಂಪುಟ 40 : ಸಂಚಿಕೆ 11** **ನವೆಂಬರ್ 2025**

**ಡಾ. ಎಂ.ಎನ್. ನಂದೀಶ್ ಹಂಚೆ**
ಸಂಪಾದಕರು

**ಜೆಎಸ್‌ಎಸ್ ಮಹಾವಿದ್ಯಾಪೀಠ**
ಜಗದ್ಗುರು ಡಾ. ಶ್ರೀ ಶಿವರಾತ್ರಿ ರಾಜೇಂದ್ರ ವೃತ್ತ
ಮೈಸೂರು 570 004
ದೂರವಾಣಿ : 0821–2548212, Extn. 223



**ಸಂಸ್ಥಾಪಕರು**

ಶ್ರೀಮನ್ಮಹಾರಾಜ ರಾಜಗುರುತಿಲಕ

**ಪರಮಪೂಜ್ಯ ಜಗದ್ಗುರು ಡಾ. ಶ್ರೀ ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳವರು**

**ಅಧ್ಯಕ್ಷರು**

**ಪರಮಪೂಜ್ಯ ಜಗದ್ಗುರು ಶ್ರೀ ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮಿಗಳವರು**


**ಸಂಪಾದಕ ಸಲಹಾ ಸಮಿತಿ**

ಡಾ. ಶ್ರೀ ಶರತ್‌ಚಂದ್ರ ಸ್ವಾಮಿಗಳು
ಡಾ. ಸಿ.ಜಿ. ಬೆಟಸೂರಮಠ
ಶ್ರೀ ಎಸ್.ಪಿ. ಮಂಜುನಾಥ್
ಡಾ. ಎನ್.ಎಸ್. ತಾರಾನಾಥ
ಡಾ. ಬಿ.ವಿ. ವಸಂತಕುಮಾರ್
ಡಾ. ವೈ.ಸಿ. ಭಾನುಮತಿ
ಪ್ರೊ. ಮೊರಬದ ಮಲ್ಲಿಕಾರ್ಜುನ

**ಸಂಪಾದಕ ಸಮಿತಿ**

ಡಾ. ಎಂ.ಎನ್. ನಂದೀಶ್ ಹಂಚೆ (ಸಂಪಾದಕರು)
ಶ್ರೀ ಆರ್.ಎಸ್. ಪೂರ್ಣಾನಂದ
ಶ್ರೀ ಕುಮಾರಸ್ವಾಮಿ ವಿರಕ್ತಮಠ


---

ಸಾಹಿತ್ಯ, ಸಂಸ್ಕೃತಿ, ಕಲೆ, ಧರ್ಮ, ವಿಜ್ಞಾನ, ಶಿಕ್ಷಣ, ಆರೋಗ್ಯ ಮುಂತಾದ ವಿಷಯಗಳ ಬಗ್ಗೆ ವಿಚಾರಪೂರ್ಣ ಲೇಖನಗಳಿಗೆ ಸ್ವಾಗತವಿದೆ. ಬರಹಗಳಲ್ಲಿನ ಅಭಿಪ್ರಾಯಗಳು ಆಯಾ ಲೇಖಕರವು

---

**ಮುಖಪುಟ ಚಿತ್ರ**

ಪರಮಪೂಜ್ಯ ಜಗದ್ಗುರುಗಳವರ ದಿವ್ಯ ಸಾನ್ನಿಧ್ಯದಲ್ಲಿ ನಡೆದ ಜೆಎಸ್‌ಎಸ್ ಉನ್ನತ ಶಿಕ್ಷಣ ಮತ್ತು ಸಂಶೋಧನಾ ಅಕಾಡೆಮಿಯ 16ನೇ ಘಟಿಕೋತ್ಸವದಲ್ಲಿ ಉಪರಾಷ್ಟ್ರಪತಿಗಳಾದ ಸನ್ಮಾನ್ಯ ಶ್ರೀ ಸಿ.ಪಿ. ರಾಧಾಕೃಷ್ಣನ್‌ರವರು ಬಹುಮಾನ ವಿಜೇತ ಪದವೀಧರರಿಗೆ ಚಿನ್ನದ ಪದಕಗಳನ್ನು ವಿತರಿಸಿದರು. ಗೌ.ನ್ಯಾ. ಶ್ರೀ ಶಿವರಾಜ್ ಪಾಟೀಲ್, ರಾಜ್ಯಪಾಲರಾದ ಶ್ರೀ ಥಾವರ್ ಚಂದ್ ಗೆಹ್ಲೋಟ್ ಹಾಗೂ ಡಾ. ಬಿ ಸುರೇಶ್‌ರವರುಗಳಿದ್ದಾರೆ (9 ನವೆಂಬರ್ 2025)


**ದಶವಾರ್ಷಿಕ ಚಂದಾ : 500/- * ಬಿಡಿ ಪ್ರತಿ : 10/-**

# ಪರಿವಿಡಿ


| | |
|---|---|
| ಗುರುವಾಣಿ | 5 |
| ಸಂಪಾದಕೀಯ | 7 |
| ಭೂಮಾಚಿಂತನ<br>ಶ್ರೀ ಸಿದ್ಧೇಶ್ವರ ಸ್ವಾಮಿಗಳು<br>(ಪ್ರವಚನಸಾರ) | 9 |
| ಅಂತರಂಗದ ಮಾರ್ಗದರ್ಶಿಗಳು<br>ಶ್ರೀ ಚನ್ನಬಸವ ಸ್ವಾಮಿಗಳು | 15 |
| ಶಬರಶಂಕರ ವಿಲಾಸ ಟೀಕು : ದ್ವಿತೀಯಾಶ್ವಾಸ<br>ಸಿದ್ಧಾಂತಿ ಶಿವಶಂಕರಶಾಸ್ತ್ರಿಗಳು<br>(ವೀರಶೈವ ಟೀಕು ಸಾಹಿತ್ಯ ಸರಣಿ) | 17 |
| ಶೂನ್ಯಸಂಪಾದನೆಗಳು : ಮರುಚಿಂತನೆ ಮತ್ತು<br>ಶೂನ್ಯಸಂಪಾದನೆ ಮತ್ತು ಪರಿಷ್ಕಾರಗಳು<br>ಡಾ. ಬಿ. ನಂಜುಂಡಸ್ವಾಮಿ | 22 |
| ವಚನ ಧರ್ಮಸಾರ<br>ಡಾ. ಆರ್.ಬಿ. ಚಿಲುಮಿ | 30 |
| ವಿಶ್ವಗುರು ಬಸವಣ್ಣ ಮತ್ತು ಸೊಲ್ಲಾಪುರ ಶ್ರೀ ಸಿದ್ಧರಾಮೇಶ್ವರರು<br>ಧರ್ಮಣ್ಣ ಮ. ಕುಂಬಾರ | 39 |
| ಶಿವಸಿರಿ – ಕೃತಿ ಅವಲೋಕನ<br>ನಗರ್ಲೆ ಶಿವಕುಮಾರ | 48 |
| ವಾರ್ತಾವಿಹಾರ<br>ಕುಮಾರಸ್ವಾಮಿ ವಿರಕ್ತಮಠ | 51 |
| ಕೃತಿ–ಸ್ವೀಕೃತಿ | 63 |

## ಪ್ರಸಾದ

ಶಿವಕೃಪೆಯಿಂದ ಎನ್ನ ಪುಣ್ಯ ಹಣ್ಣಾದಂತೆ–
ಸರ್ವಾಂಗದಲ್ಲಿ ಪ್ರಸಾದಂಗಳ ನಾನು ಎಡೆಬಿಡುವಿಲ್ಲದೆ
ಧರಿಸಿದ್ದ ಸಂಭ್ರಮವ ನೋಡಾ ಎಲೆ ಅಮ್ಮ!

ಮುಕ್ತಿ ಪದವ ತೋರುವ ಪ್ರಸಾದವ
ಪಂಚ ಸ್ಥಾನದಲ್ಲಿ ಧರಿಸಿದೆ:
ಪ್ರಸಿದ್ಧ ಪ್ರಸಾದ
ಸಿದ್ಧ ಪ್ರಸಾದ
ಶುದ್ಧ ಪ್ರಸಾದ
ಆದಿ ಪ್ರಸಾದ
ಮಹಾ ಪ್ರಸಾದ ಎಂಬ
ಪಂಚ ಪ್ರಸಾದಂಗಳಂ ಪಂಚ ಸ್ಥಾನದಲ್ಲಿ ಧರಿಸಿದೆ:

ಪ್ರಸಿದ್ಧ ಪ್ರಸಾದವ–ಆಕಾಶದಲ್ಲಿ ಧರಿಸಿದೆ,
ಸಿದ್ಧ ಪ್ರಸಾದವ–ಬ್ರಹ್ಮರಂಧ್ರದಲ್ಲಿ ಧರಿಸಿದೆ,
ಶುದ್ಧ ಪ್ರಸಾದವ–ಶಿಖೆಯಲ್ಲಿ ಧರಿಸಿದೆ,
ಆಚಾರಾದಿ ಪ್ರಸಾದಮಂ –
ತತ್ತ್ವ ಎರಡರ ಮೇಲೆ ಧರಿಸಿದೆ
ಮಹಾಪ್ರಸಾದಮಂ ಪಶ್ಚಿಮದಲ್ಲಿ ಧರಿಸಿದೆ!

ಇಂತಪ್ಪ ಪರಬ್ರಹ್ಮವೆನಿಸುವ ಪ್ರಸಾದಂಗಳ ನಾನು
ದಿವಾರಾತ್ರಿಯೆನ್ನದೆ ಪೂಜೆಯ ಮಾಡಿದಲ್ಲಿ –
ಎನಗೆ ಪರಮಾರ್ಥದರಿವು ಕೈಸಾರಿತು!

ಈ ಪರಮಾರ್ಥದರಿವು ಕೈಸಾರಿದಲ್ಲಿಯೇ
ಎನ್ನ ತನು-ಮನ-ಧನಂಗಳು ಪದಾರ್ಥಂಗಳಾದವು.
ಆ ಪದಾರ್ಥಂಗಳ
ಏಕಚಿತ್ತ ಮನೋಭಾವದಲ್ಲಿ
ತೋಂಟದ ಸಿದ್ಧಲಿಂಗನೆಂಬ ನಿಷ್ಕಲ ಬ್ರಹ್ಮಕ್ಕೆ ಸಮರ್ಪಿಸಿದಲ್ಲಿಯೇ
ಎನಗೆ ಅನಿತ್ಯತೆ ಕೆಟ್ಟು
ನಿತ್ಯವೆಂಬುದು ನಿಜವಾಯಿತಯ್ಯ–
ಘನಲಿಂಗಿಯ ಮೋಹದ ಚೆನ್ನಮಲ್ಲಿಕಾರ್ಜುನ!

– ಘನಲಿಂಗಿದೇವರು

# ಗುರುವಾಣಿ

> ಮೌನಾನ್ಮೂಕಃ ಪ್ರವಚನ ಪಟುಃ ವಂಚಕೋ ಜಲ್ಪಕೋ ವಾ
> ಧೃಷ್ಟಃ ಪಾರ್ಶ್ವೇ ಭವತಿ ಚ ವಸನ್ ದೂರತೋಪ್ಯಪ್ರಗಲ್ಭಃ ।
> ಕ್ಷಾಂತ್ಯಾ ಭೀರುರ್ಯದಿ ನ ಸಹತೇ ಪ್ರಾಯಶೋ ನಾಭಿಜಾತಃ
> ಸೇವಾಧಮಃ ಪರಮಗಹನೋ ಯೋಗಿನಾಮಪ್ಯಗಮ್ಯಃ ॥

ಭರ್ತೃಹರಿಯ ನೀತಿಶತಕದ ಈ ಶ್ಲೋಕವು ಸೇವಾತತ್ಪರತೆಯಲ್ಲಿ ಎದುರಾಗುವ ಸವಾಲನ್ನು, ಕಠಿಣತೆಯನ್ನು ವಿಶದಪಡಿಸುತ್ತದೆ. ಸುಮ್ಮನಿದ್ದರೆ ಮೂಗ, ಮಾತನಾಡಿದರೆ ವಾಚಾಳಿ, ವಂಚಕ, ಪಕ್ಕದಲ್ಲಿ ನಿಂತರೆ ಧೃಷ್ಟ, ದೂರದಲ್ಲಿದ್ದರೆ ಮುಗ್ಧ, ಸಹಿಸಿಕೊಂಡರೆ ಭೀರು, ಸಹಿಸದೆ ಇದ್ದರೆ ಅಧಮಕುಲದವನು. ಈ ಸೇವಾಧರ್ಮವೇ ಹೀಗೆ ಬಹಳ ಕಠಿಣವಾದದ್ದು, ಯೋಗಿಗಳಿಗೂ ಸಹ ಸಾಧಿಸಲು ಕಠಿಣವಾದುದು. ಲೋಕ ಎಲ್ಲದಕ್ಕೂ ಹೀಗೆ ನೇತ್ಯಾತ್ಮಕವಾಗಿ ಪ್ರತಿಕ್ರಿಯಿಸುತ್ತದೆ ಎಂದ ಮೇಲೆ ಏನೂ ಮಾಡದೆ ಸುಮ್ಮನಿರುವುದೇ ಶ್ರೇಯಸ್ಕರವೆಂಬ ಭಾವನೆ ಮೂಡಬಹುದು. ಹೀಗೆ ಏನೂ ಮಾಡದಿದ್ದರೂ ಲೋಕ ಸುಮ್ಮನಿರುವುದಿಲ್ಲ, ಅದಕ್ಕೂ ಅದು ಪ್ರತಿಕ್ರಿಯಿಸಿಯೇ ತೀರುತ್ತದೆ. ಭರ್ತೃಹರಿಯ ಆಶಯವನ್ನು ಇಲ್ಲಿ ಸೂಕ್ಷ್ಮವಾಗಿ ಗಮನಿಸಬೇಕು. ಯೋಗಿಯಾದವರಿಗೂ ಅಪನಿಂದೆ ತಪ್ಪಿದ್ದಲ್ಲವೆನ್ನುವುದು ಶ್ಲೋಕದ ಕೊನೆಯ ಮಾತು. ಯೋಗಿಯಾದವರು ತ್ರಿಕಾಲವನ್ನು ಅರಿತವರು. ಲೌಕಿಕ ಬಂಧನವನ್ನು ಮೀರಿದವರು. ಅಮನಸ್ಕರು. ಅವರಿಗೆ ಯಾವ ವಸ್ತುಗಳ ಮೇಲೂ ಮೋಹವಿಲ್ಲ. ಅಷ್ಟೇ ಅಲ್ಲ, ಅವರಿಗೆ ಯಾವುದರ ಬಗೆಗೂ ನಿರ್ದಿಷ್ಟ ಪೂರ್ವಾಗ್ರಹವಿಲ್ಲ. ಕನಿಷ್ಠಪಕ್ಷ ಅವರಿಗೆ ತಮ್ಮದೇ ದೇಹದ ಮೇಲೂ ಪ್ರೀತಿ ಇರುವುದಿಲ್ಲ. ಇಂತಹ ಯೋಗಿಯು ಮಾಡುವ ಕಾರ್ಯವನ್ನೂ ಅನುಮಾನದಿಂದ ನೋಡುವುದು ಈ ಲೋಕದ ಜಾಯಮಾನ.

ಈ ದೋಷಕ್ಕೆ ಕಾರಣ ಮಾಡುವ ಕ್ರಿಯೆಯಲ್ಲ, ಅದು ಸಮಾಜದ ಎಂದಿನ ದೃಷ್ಟಿದೋಷ. ಲೋಕದೃಷ್ಟಿಯೇ ಹಾಗೆ. ಅದು ಅತ್ಯಂತ ಸೀಮಿತ ಪರಿಧಿಯನ್ನು ಹೊಂದಿದೆ. ಈ ದೃಷ್ಟಿದೋಷಕ್ಕೆ ಪೋಷಕವಾದದ್ದು ಅವರವರ ಮನಸ್ಸು. ಮನಸ್ಸಿನಂತೆ ಮಾರ್ಗ ಎಂಬ ಮಾತು ಹೀಗೆ ಬಳಕೆಯಲ್ಲಿ ಬಂದದ್ದು. ಈ ಹಿನ್ನೆಲೆಯಲ್ಲಿ ಲೋಕದೃಷ್ಟಿ ಏನೇ ಇರಲಿ, ಮಾಡಬೇಕಾದ ಕಾರ್ಯಗಳನ್ನು ಮಾಡುವುದೇ ನಿಯತಿ. ಇದು ಕಾಲದ, ಲೋಕದ, ವ್ಯಕ್ತಿಯ ನಿಯತಿ ಕೂಡ. ಈ ನಿಯತಿಯನ್ನು ಮೀರುವುದು ಯಾರಿಗೂ ಉಚಿತವಲ್ಲ.

ಈ ನಿಯತಿಚಕ್ರದಲ್ಲಿ ತೊಡಗುವ ಕ್ರಿಯೆ ಹೇಗಿರಬೇಕೆಂಬುದೇ ನಿಜವಾದ ಸವಾಲು. ವ್ಯಕ್ತಿಯು ಕ್ರಿಯೆಯಲ್ಲಿ ತೊಡಗಿರಬೇಕು, ಅದೇ ಸಮಯದಲ್ಲಿ ಹಾಗೆ ತೊಡಗಿರಲೂ ಬಾರದು. ಏಕೆಂದರೆ, ತಾನು ಮಾಡುವ ಪ್ರತಿಯೊಂದು ಕಾರ್ಯದಲ್ಲಿ, 'ತಾನು' ಅಥವಾ 'ನಾನು' ಇರಬಾರದು. ಎಂದರೆ, ನಾನು ಮಾಡುತ್ತಿದ್ದೇನೆ, ನನ್ನಿಂದ ಈ ಕಾರ್ಯವಾಯಿತು, ನಾನಿಲ್ಲದಿದ್ದರೆ ಇದು ಆಗುತ್ತಿರಲಿಲ್ಲ, ನನ್ನಿಂದಲೇ ಎಲ್ಲಾ, ನಾನೇ ಶ್ರೇಷ್ಠ ಎಂಬ ಭಾವ ವ್ಯಕ್ತಿಯಲ್ಲಿ ತಲೆದೋರಿದಾಗ ಅಂಥ ಭಾವಕ್ಕೆ ಅಡ್ಡಿ ಉಂಟಾದರೆ ಸಹಜವಾಗಿಯೇ ನೋವಾಗುತ್ತದೆ. ಆ ಭಾವ ಆವರಿಸಿದಾಗಲೇ ಹೊಸ ಹೊಸ ಕ್ರಿಯೆ, ಪ್ರತಿಕ್ರಿಯೆಗಳು ಮೂಡುತ್ತವೆ. ಆದುದರಿಂದ ಈ 'ತಾನು' ಅಥವಾ 'ನಾನು' ಎಂಬ ಭಾವವು ಕ್ರಿಯೆಯಲ್ಲಿ ಇರಬಾರದು. ತಾನೆಂಬ ಭಾವ ಮೂಡಿದಾಗ ಮನಸ್ಸು ಮತ್ತು ಕ್ರಿಯೆ ಎರಡೂ ಕಲುಷಿತವಾಗುತ್ತವೆ. ಕ್ರಿಯೆ ಇರಬೇಕು, ಭಾವ ಇರಬಾರದು. ಹಾಗಾದಾಗ ಕ್ರಿಯೆ ಕೇವಲ ಯಾಂತ್ರಿಕವಾಗುವುದಿಲ್ಲ, ಅಲ್ಲೊಂದು ನೇರ ದೃಷ್ಟಿ ಮೂಡಬಹುದು. ಕ್ರಿಯೆಯು ಯಾಂತ್ರಿಕವೇ ಆದರೂ ಅದು ಅಹಂಕಾರ ರಹಿತವೂ ಅಮನಸ್ಕವೂ ಆಗಿರಬೇಕು.

ಆದುದರಿಂದಲೇ ಬಸವಣ್ಣನವರು "ಮಾಡುವಂತಿರಬೇಕು ಮಾಡದಂತಿರಬೇಕು. ಮಾಡುವ ಮಾಟದೊಳಗೆ ತಾನಿಲ್ಲದಂತಿರಬೇಕು. ಕೂಡಲಸಂಗಮದೇವರ ನೆನೆವುತ್ತ ನೆನೆವುತ್ತ ನೆನೆಯದಂತಿರಬೇಕು" ಎನ್ನುತ್ತಾರೆ. ಮಾಡುವ ದಾನದಲ್ಲಿ ಕೂಡ ನಾನು ಎಂಬ ಭಾವವಿಲ್ಲದೆ ಮಾಡಬೇಕು. ಮಾಡುವವರ, ಮಾಡಿಸಿಕೊಂಬುವರ ನಡುವೆ ಯಾವ ಭೇದವೂ ಇರಬಾರದು. ಇದನ್ನೇ ಬಸವಣ್ಣನವರು "ಮಾಡುವಲ್ಲಿ ನೀಡುವಲ್ಲಿ ಹೇಳಿ ಮಾಡಿಸಿಕೊಂಬುದಲ್ಲದೆ, ಕೈ ಕಲಸಿದಡೆ ಬಾಯಿಗೆ ಹಂಗುಂಟೆ" ಎನ್ನುತ್ತಾರೆ. ಇದೆಂತಹ ಅದ್ಭುತ ರೂಪಕ! ಉಣ್ಣುವ ಪ್ರತಿಯೊಂದು ತುತ್ತನ್ನೂ ಬಾಯಿ ಅಗಿದು ಮೆದುಗೊಳಿಸಿ ಕರುಳು ಜೀರ್ಣಿಸಿಕೊಳ್ಳಲು ಸಹಕರಿಸುತ್ತದೆ. ಬಾಯಿ ಅಗಿಯುವುದಕ್ಕೆ ಮೊದಲು "ಕೈ" ಎಲ್ಲ ಪದಾರ್ಥವನ್ನೂ ಕಲಸಿ ಸಿದ್ಧಗೊಳಿಸುತ್ತದೆ. ಹೀಗೆ ಕೈ ಕಲಸಿದ ಮೇಲೆ ಬಾಯಿಗೆ ಕಲಸುವ ಯಾವ ಜವಾಬ್ದಾರಿಯೂ ಇಲ್ಲವೆಂದು ಅದು ತನ್ನ ಅಗಿಯುವ ಕ್ರಿಯೆಯನ್ನು ಮಾಡದೆ ಇದ್ದರೆ ಕೆಲಸ ಸಾಗದು. ಕಲಸುವುದನ್ನು ಕೈ ಮಾಡಿದೆಯಲ್ಲ ಎಂದುಕೊಂಡು ಬಾಯಿ ನಿಷ್ಕ್ರಿಯೆಯಾಗುವುದಿಲ್ಲ! ಅದು ತನ್ನ ಕರ್ತವ್ಯವನ್ನು ಸಹಜವಾಗಿಯೇ ಮಾಡುತ್ತದೆ, ಮಾಡಬೇಕು.

ಮಾಡುವ ಕಾರ್ಯಗಳ ಬಗ್ಗೆ ಜನರು ಏನಾದರೂ ಹೇಳಲಿ, ದೈವವೂ, ಆತ್ಮವೂ ಮೆಚ್ಚುವಂಥ ಲೋಕಸಂಗ್ರಹ ಕಾರ್ಯಗಳನ್ನು ಮಾಡುವುದೇ ನಿಜವಾದ ಧರ್ಮ.

**ಜಗದ್ಗುರು ಶ್ರೀ ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮಿಗಳು**

# ಸಂಪಾದಕೀಯ

ಸಂತೋಷಸ್ತ್ರಿಷು ಕರ್ತವ್ಯಃ ಸ್ವದಾರೇ ಭೋಜನೇ ಧನೇ ।
ತ್ರಿಷು ಚೈವ ನ ಕರ್ತವ್ಯೋಽಧ್ಯಯನೇ ಜಪದಾನಯೋಃ ॥

ಚಾಣಕ್ಯನೀತಿಯ ಏಳನೆಯ ಅಧ್ಯಾಯದ ನಾಲ್ಕನೆಯ ಶ್ಲೋಕದಲ್ಲಿ ಕೌಟಿಲ್ಯನು, "ಮೂರು ವಿಷಯಗಳಲ್ಲಿ ನಮಗೆ ತೃಪ್ತಿಯಿರಬೇಕು. ಹೆಂಡತಿ, ಹಣ ಮತ್ತು ಭೋಜನ. ಮೂರು ವಿಷಯಗಳಲ್ಲಿ ತೃಪ್ತಿ ಇರಬಾರದು. ಅಧ್ಯಯನ, ತಪಸ್ಸು ಮತ್ತು ದಾನ". ಉತ್ತಮ ನಾಗರಿಕನಿಗೆ ಇರಬೇಕಾದ ಸ್ವಭಾವವನ್ನು ಇಲ್ಲಿ ಹೇಳಲಾಗಿದೆ. ಶ್ರೇಷ್ಠ ನಾಗರಿಕನನ್ನು ಪ್ಲೇಟೋ 'ಐಡಿಯಲ್ ಮ್ಯಾನ್' ಎನ್ನುತ್ತಾನೆ. ಆತನ ಐಡಿಯಲ್ ಸ್ಟೇಟ್, ಅಂದರೆ, ಆದರ್ಶ ರಾಜ್ಯ ಸೃಷ್ಟಿಯಾಗಬೇಕಾದರೆ, ಅಲ್ಲಿ ಆದರ್ಶ ವ್ಯಕ್ತಿಗಳಿರಬೇಕು. ಆ ಜನಗಳ ವ್ಯಕ್ತಿತ್ವ ಚಲನಶೀಲತೆಯಿಂದ ಕೂಡಿರಬೇಕು ಎನ್ನುತ್ತಾನೆ. ಪ್ಲೇಟೋವಿನ ಮಾತಿನ ನೆರಳಿನಂತೆಯೇ ಕೌಟಿಲ್ಯನ ಅಭಿಪ್ರಾಯವೂ ಇದೆ. ಅದರರ್ಥ ಈ ಮಾತಿಗೆ ಪ್ಲೇಟೋ ಪ್ರೇರಣೆ ಎಂದೇನೂ ಅಲ್ಲ. ಗ್ರೀಕ್ ಮತ್ತು ಭಾರತ ದೂರದೂರದ ದೇಶಗಳಿರಬಹುದು. ಆದರೆ ಅವುಗಳ ನಡುವೆ ಸುಂದರ ಬದುಕಿನ ನಿರ್ಮಾಣದಲ್ಲಿರುವ ನೀತಿಯ ಆಲೋಚನೆಗಳ ಏಕತ್ವವನ್ನು ಗಮನಿಸಬಹುದು.

ಅಲ್ಲಮಪ್ರಭುದೇವರು ತಮ್ಮ ವಚನವೊಂದರಲ್ಲಿ "ಭೂಮಿ ನಿನ್ನದಲ್ಲ, ಹೇಮ ನಿನ್ನದಲ್ಲ, ಮಾನಿನಿ ನಿನ್ನವಳಲ್ಲ" ಎಂದ ಆಶಯವನ್ನೇ ಕೌಟಿಲ್ಯನ ಶ್ಲೋಕ ಲೌಕಿಕ ದೃಷ್ಟಿಯಿಂದ ವಿರಚಿಸಿದೆ. ಸಪ್ತವ್ಯಸನಗಳಲ್ಲಿ ಸಂಪತ್ತು, ಭೋಜನ ಮತ್ತು ಸ್ತ್ರೀಯನ್ನು ಗುರುತಿಸಲಾಗಿದೆ. ಗ್ರಹಸ್ಥನಾದವನು ಲೋಕದಲ್ಲಿ ಸಲ್ಲಬೇಕಾದರೆ ಆತ ತನ್ನ ಧರ್ಮಪತ್ನಿಯಲ್ಲಿಯೇ ತೃಪ್ತಿ ಹೊಂದಬೇಕು. ಇದರ ಹಿನ್ನೆಲೆಯಲ್ಲಿ "ಪರಸ್ತ್ರೀ ಕುತೂಹಲಾತ್" ಎಂಬ ಮಾತನ್ನು ನೋಡಬೇಕು. ಇದೊಂದು ಅನಗತ್ಯವೂ, ಪರಿಣಾಮದಲ್ಲಿ ಘೋರವೂ ಆಗುವ ಕುತೂಹಲ ಶ್ರೀರಾಮನ ಮುಂದೆ ಬಂದ ಶೂರ್ಪನಖಿ ತನ್ನನ್ನು ವರಿಸುವಂತೆ ಪರಿಪರಿಯಾಗಿ ನಿವೇದಿಸಿದಾಗ ಆತನು "ಪರಸ್ತ್ರೀಸ್ಪರ್ಶದ ಪಾತಕಕ್ಕಿಂತ ಸ್ವಧರ್ಮಪರಿತ್ಯಾಗದ ಪಾತಕವೇ ಉತ್ತಮ" ಎಂದ. ಆದರೆ ಇಂದ್ರ ಆಕಾಶದಲ್ಲಿ ಸಂಚರಿಸುತ್ತಿದ್ದಾಗ ಭೂಲೋಕದ ಉದ್ಯಾನವನದಲಿದ್ದ ಗೌತಮ ಮುನಿಯ ಹೆಂಡತಿ ಅಹಲ್ಯಾದೇವಿಯನ್ನು ಕಂಡು ಜಾರಿದ. "ದೇವರಾಜ ಕುತೂಹಲಾತ್". ದೇವರಾಜನು ಕುತೂಹಲವನ್ನು ಹೊಂದುತ್ತಾನೆ. ಇಲ್ಲಿ ಗಮನಿಸಬೇಕಾದ ಸಂಗತಿ ಎಂದರೆ,

ಹೀಗೆ ಕುತೂಹಲವನ್ನು ಹೊಂದುವಾಗ ಆತನ ಪಕ್ಕದಲ್ಲಿ ಹೆಂಡತಿ ಶಚೀದೇವಿ ಇದ್ದಾಳೆ. ಆದರೆ ಕಾಮಾಸಕ್ತನಾದವನಿಗೆ ಈ ನೈತಿಕತೆಯ ಎಲ್ಲೆ ಎಲ್ಲಿರಬೇಕು. ಏಕಪತ್ನೀ ವ್ರತಸ್ಥನಾದ ಶ್ರೀರಾಮ ಆದರ್ಶಪುರುಷನಾದ. ಆದರೆ ದಾರಿ ತಪ್ಪಿದ ಇಂದ್ರ ತನ್ನ ಸ್ಥಾನದ ಮಹತ್ವವನ್ನು ಕಳೆದುಕೊಂಡು ಅಕಾಲದಲ್ಲಿ ಕೋಳಿಯಾಗಿ ಕೂಗಿದ. ಸನಾತನ ಪ್ರತಿಮಾವಿಧಾನದಲ್ಲಿ ಕೋಳಿ ಎನ್ನುವುದು ಜ್ಞಾನದ ಅರಿವಿನ ಸಂಕೇತ. ಆದರೆ ಇಂದ್ರ ಕೋಳಿಯ ವೇಷ ಧರಿಸಿದನೇ ಹೊರತು, ಅದರ ಅಂತರಾರ್ಥವನ್ನು ಅರಿಯಲಿಲ್ಲ. ಎಂಥ ವ್ಯಂಗ್ಯ ! ಗೌತಮನ ಶಾಪದಿಂದ ಇಂದ್ರ ಸ್ಥಾನಭ್ರಷ್ಟನಾದ. ಕೊನೆಗೆ ಅಸಮಾಕ್ಷನನ್ನು ಕುರಿತು ತಪಸ್ಸು ಮಾಡಿ ಸಹಸ್ರಾಕ್ಷನಾದ. ಇಂದ್ರನ ದೇಹದ ಹುಣ್ಣುಗಳಲ್ಲೆಲ್ಲ ಕಣ್ಣುಗಳಾದವು. ಇದು ಒಂದು ಸಂಕೇತವೇ. ಕಾಣದೆ ಮಾಡಿದ ತಪ್ಪಿಗೆ ಕ್ಷಮೆ ಇದೆ. ಕಂಡೂ ಮಾಡಿದ ತಪ್ಪಿಗೆ ಕ್ಷಮೆ ಇರುವುದಿಲ್ಲ. ಇಂದ್ರ ಇದನ್ನು ಮುಂದೆ ಕಾಣದೇ ಅರಿಯದೆ ಮಾಡಿದ ತಪ್ಪು ಎನ್ನುವಂತಿಲ್ಲ. ಏಕೆಂದರೆ ಈಗ ಅವನ ಹಿಂದುಮುಂದೆಲ್ಲ ಕಣ್ಣುಗಳಿವೆಯಲ್ಲ!

ಸಂಪತ್ತು ಅಥವಾ ಹಣ ಗಳಿಕೆಯೂ ಹಾಗೆಯೇ, ಎಷ್ಟೇ ಗಳಿಸಿದರೂ ತೃಪ್ತಿಯಾಗುವುದಿಲ್ಲ. 'ಸಂಪತ್ತಿನ ಬೆನ್ನು ಹತ್ತಿದಡೆ ಆಪತ್ತು' ಎಂಬ ನೀತಿವಾಕ್ಯವಿದ್ದರೂ, ನಾವು ಅತ್ತ ಗಮನ ಕೊಡುವುದಿಲ್ಲ. ಅಂತೆಯೇ ಭೋಜನವೂ ಕೂಡ. ಈ ಹೆಣ್ಣು, ಹೊನ್ನು, ಆಹಾರವೆಂಬ ಕಾಮನೆಗಳು, ದೇಹ, ಮನಸ್ಸು, ಬುದ್ಧಿಯನ್ನು ವಿವಶಗೊಳಿಸುತ್ತವೆ. ಅವುಗಳನ್ನು ಎಷ್ಟೇ ಅನುಭವಿಸಿದರೂ ತೃಪ್ತಿಯಾಗುವುದಿಲ್ಲ. ಬದಲಿಗೆ ಅಧ್ಯಯನ, ತಪಸ್ಸು ಮತ್ತು ದಾನ ಈ ಮೂರು ಸಂಗತಿಗಳ ಬಗ್ಗೆ ಸದಾ ಅತೃಪ್ತಿ ಇರುವುದು ಶ್ರೇಯಸ್ಕರ. ಅಧ್ಯಯನಕ್ಕೆ ಕೊನೆ ಎಂಬುದೇ ಇಲ್ಲ. ಅಧ್ಯಯನದಿಂದ ತೃಪ್ತಿಯಾಯಿತು ಎಂದರೆ ಅದು ಅಜ್ಞಾನದ ಪ್ರಾರಂಭ. ತಪಸ್ಸು ಮತ್ತು ಅಧ್ಯಯನಗಳಿಗೆ ಒಂದು ವ್ಯತ್ಯಾಸವಿದೆ. ಅಧ್ಯಯನವು ಹೊರಗಿನ ಸಂಗತಿಗಳನ್ನು ಅರಿಯುವ ಸಾಧನವಾದರೆ, ತಪಸ್ಸು ಅಂತರಂಗವನ್ನು ಪ್ರವೇಶಿಸುವ ದ್ವಾರ. ಹೀಗೆ ಅಂತರಂಗದ ಬಹಿರಂಗದ ತಿಳುವಳಿಕೆ ಮೂಡಿದ ಮೇಲೆ ದಾನದ ಕ್ರಿಯೆ ತಾನಾಗಿಯೇ ನಡೆಯುತ್ತದೆ. ಅಲ್ಲಿ ಕೊಡುವವನೂ ಸಂತ, ತೆಗೆದುಕೊಳ್ಳುವವನೂ ಸಂತನೆ. ನಿಜವಾದ ದಾನವೆಂದರೆ 'ನೀಡುತ್ತಿದ್ದೇನೆ' ಎಂಬ ಭಾವ ಅಲ್ಲಿರಬಾರದು. ಆದುದರಿಂದಲೇ ಶರಣರು "ಮಾಡಿ ಮಾಡಿ ಕೆಟ್ಟರು ಮನವಿಲ್ಲದೆ, ನೀಡಿ ನೀಡಿ ಕೆಟ್ಟರು ನಿಜವಿಲ್ಲದೆ" ಎಂದದ್ದು. ನಮ್ಮ ಅಸ್ತಿತ್ವವೇ ಈ ಜಗತ್ತು ನಮಗೆ ನೀಡಿರುವ ದಾನ. ಕುಡಿಯುವ ನೀರು, ಸೇವಿಸುವ ಗಾಳಿ, ತಿನ್ನುವ ಆಹಾರ ಎಲ್ಲವೂ ಅವನ ದಾನವೇ. ದಾನಕ್ಕೆ ತೃಪ್ತಿ ಇರುವುದಿಲ್ಲ, ಇರಬಾರದು ಕೂಡ. ಭೂಮಿಗೆ ಬೆಳೆದು ಸಾಕಾಗುವುದಿಲ್ಲ; ಮರಕ್ಕೆ ಹಣ್ಣು ನೀಡಿ ತೃಪ್ತಿಯಾಗುವುದಿಲ್ಲ; ಹಾಗೆ ತೃಪ್ತಿಯಾಗಿಬಿಟ್ಟರೆ ನೀರಿಗೂ ಬಾಯಾರಿಕೆ ಉಂಟಾಗಿಬಿಡುತ್ತದೆ! ನೀರು ನೀರಡಿಸುತ್ತದೆ.

**ಡಾ. ಎಂ.ಎನ್. ನಂದೀಶ್ ಹಂಚೆ**

ಪ್ರವಚನಸಾರ

# ಭೂಮಾಚಿಂತನ

**ಶ್ರೀ ಸಿದ್ಧೇಶ್ವರ ಸ್ವಾಮಿಗಳು**

ವಸ್ತುವಿನ ಗುಣಲಕ್ಷಣಗಳನ್ನು ಮನಸ್ಸಿನಲ್ಲಿ ಚಿತ್ರಿಸಿಕೊಳ್ಳುವುದು, ಮನಸ್ಸನ್ನು ಆ ಲಕ್ಷಣಾರ್ಥದಲ್ಲಿ ಹರವಿಕೊಳ್ಳುವುದು ಚಿಂತನ. ಅದರಿಂದ ಮನಸ್ಸು ವಿಶಾಲವಾಗುತ್ತದೆ. ಮನಸ್ಸನ್ನು ಆನಂದವು ತುಂಬಿಕೊಳ್ಳುತ್ತದೆ. ಆದ್ದರಿಂದಲೇ ಸಂತರು, ಶರಣರು ಈ ಚಿಂತನೆಗೆ ಬಹಳಷ್ಟು ಮಹತ್ವ ಕೊಟ್ಟರು. ಭಗವಂತನನ್ನು ಹಗಲು ರಾತ್ರಿ ಶರಣರು ತಮ್ಮ ಅಂತರಂಗದಲ್ಲಿ ಬಹಿರಂಗದಲ್ಲಿ ಭಾವಿಸಿದ್ದರು. ಕಣ್ಣು ಬಿಟ್ಟು ನೋಡಿದಲ್ಲೆಲ್ಲಾ ಭಗವಂತನ ಅಸ್ತಿತ್ವವನ್ನು ಹೊಂದಿಸಿದರು. ಹೊರಗೆ ಜಗತ್ತಿನ ವೀಕ್ಷಣ: ಅಂತರಂಗದಲ್ಲಿ ಅನುಭವ. ಕಣ್ಣು ಯಾವುದನ್ನು ನೋಡಿ ಅರಳುತ್ತದೆಯೋ ಮನಸ್ಸು ಅದನ್ನು ತುಂಬಿಕೊಂಡು ಸುಖಿಸುತ್ತದೆ. ಹಾಗೆ ತುಂಬಿಕೊಂಡು ಸುಖಿಸುವುದೇ ಅನುಭಾವ!

ಮರುಳುಶಂಕರದೇವರನ್ನೇ ನೋಡಿ. ದೂರದ ದೇಶದಿಂದ ಬಂದವರು. ಅಲ್ಲಿಂದ ಬಂದು ಕಲ್ಯಾಣದೊಳಗೆ ನೆಲೆಸಿದರು. ಅನೇಕ ವರ್ಷಗಳ ಕಾಲ ಶರಣರ ಮಧ್ಯದಲ್ಲಿಯೇ ಓಡಾಡಿದರೂ ಯಾರಿಗೂ ಗೊತ್ತಾಗದಂತಿದ್ದರು. ಕಳ್ಳನಲ್ಲೂ ದೇವನನ್ನು ಗುರುತಿಸುವ ಬಸವಣ್ಣನಿಗೂ ಗೊತ್ತಾಗದಂತೆ ಇದ್ದರು! ಅಷ್ಟು ಆತ್ಮಾರಾಮರು! ಸ್ವಲೀಲಾನಂದಿಗಳು! ಮಹಾಪ್ರಸಾದಿಗಳು! ಅವರು ಕೇಳಿದುದೆಲ್ಲ ಪ್ರಸಾದ, ಲಿಂಗಪ್ರಸಾದ. ನೋಡಿದ್ದೆಲ್ಲ ಶಿವಲಿಂಗಪ್ರಸಾದ. ರುಚಿಸಿದುದೆಲ್ಲಾ ಗುರುಲಿಂಗಪ್ರಸಾದ. ಸುಗಂಧಿಸಿದುದೆಲ್ಲ ಆಚಾರಲಿಂಗಪ್ರಸಾದ.

ಗುರುಗಳ ಹತ್ತಿರ ಹೋಗುತ್ತೇವೆ. ಹಣ್ಣು ಕೊಡುತ್ತೇವೆ. ಅದನ್ನು ಅವರು ಸ್ಪರ್ಶಿಸಿ ಕೊಡುತ್ತಾರೆ. ಆಗ ಅದು ನಮಗೆ ಪ್ರಸಾದ. ಮೊದಲಿನಂತೆ ಕೇವಲ ಹಣ್ಣಲ್ಲ. ಅದರ ಬಗೆಗಿರುವ ನನ್ನದು ಎನ್ನುವ ಭಾವನೆ ಇಲ್ಲ ಈಗ. ಅದು ಗುರುವಿನದು, ದೇವನದು ಎಂಬ ಭಾವ. ಅದು ಸ್ವೀಕಾರಾರ್ಹ. ಭಾವ ಬದಲಾಗಿದೆ; ದೃಷ್ಟಿ ಬದಲಾಗಿದೆ. ಈಗ ಅದು ಕೇವಲ ವಸ್ತುವಲ್ಲ.

ಮರುಳುಶಂಕರದೇವರು ಮಹಾಪ್ರಸಾದಿ! ಎಲ್ಲವನ್ನೂ ದೇವನದೆಂಬ ನಿರ್ಮಲ ಭಾವದೃಷ್ಟಿಯಿಂದ ನೋಡಿದರು! ಅವರ ಇಂದ್ರಿಯ ಪವಿತ್ರ, ಮನಸ್ಸು ಪವಿತ್ರ, ಸಮಗ್ರ ಜೀವನವೇ ಪವಿತ್ರ.

ಜನ ಊಟ ಮಾಡಿ ಎಲೆ ಬಿಟ್ಟು ಹೋಗುತ್ತಾರೆ. ಎಲೆ ತೆಗೆದುಹಾಕುವ ಕೆಲಸ ಮರುಳುಶಂಕರದೇವರದು. ಪ್ರಸಾದನಿಲಯದಲ್ಲಿ ಶೇಷವನ್ನು ಸೇವಿಸಿ ದಿವ್ಯಪ್ರಸಾದಿಯಾಗಿದ್ದರು. ಅಲ್ಲಮಪ್ರಭುವಿನಂತಹ ಜಂಗಮಸಾಮ್ರಾಟ, ವಿಮಲಜ್ಞಾನಿ, ವೈರಾಗ್ಯಚಕ್ರವರ್ತಿ ವಂದಿಸಿದ ಮರುಳುಶಂಕರದೇವರಿಗೆ! ಅವರದು ಮಲಗಿದಾಗ, ಎದ್ದಾಗ, ನಡೆವಾಗ, ನುಡಿವಾಗ ಸದೈವ ದೇವ ಭಾವ! ನಮಗೆ ಸದಾ ಪ್ರಪಂಚಭಾವವಿರುವಂತೆ.

ಅಂತಹ ಬದುಕಿಗಾಗಿ ಭಗವತ್ ಚಿಂತನ. ಯಾವ ವಸ್ತು ಎಲ್ಲಾ ಕಡೆ ಇದೆಯೊ ಅಂತಹ ವಸ್ತುವನ್ನು ಚಿಂತಿಸುವುದು. ಅಲ್ಪಸ್ಥಲದಲ್ಲಿರುವ ವಸ್ತುವನ್ನು ಚಿಂತಿಸುವುದರಿಂದ ತೃಷ್ಣೆ ತಲೆದೋರುತ್ತದೆ. ಮನಸ್ಸು ಅಸಮಾಧಾನಗೊಳ್ಳುತ್ತದೆ. "ನಾಲ್ಪೇ ಸುಖಮಸ್ತಿ ಯೋ ವೈ ಭೂಮಾ ತತ್ ಸುಖಂ." ಅಲ್ಪದರಲ್ಲಿ ಸುಖವಿಲ್ಲ, ಭೂಮದಲ್ಲಿ ಸುಖ. ಹೀಗೆ ಸನತ್ಕುಮಾರ ನಾರದನಿಗೆ ಬೋಧಿಸಿದ.

ನಾರದ ಸುಖವನ್ನು ಬಯಸಿದ್ದ. ಸಮಾಧಾನವನ್ನು ಬಯಸಿದ್ದ. ಜಗತ್ತಿನ ಏನೆಲ್ಲವನ್ನು ಆತ ಕಂಡವ. ಸ್ವರ್ಗ, ಮರ್ತ್ಯ, ಪಾತಾಳಗಳಲ್ಲಿ ತಿರುಗಾಡಿದ. ಯಾವುದಕ್ಕೆ ಏನು ಕೊರತೆ ಇಲ್ಲದಂತಹ ಅನುಭವ. ಇಂತಹ ನಾರದನಿಗೆ ಸಮಾಧಾನ ಪಡೆಯಬೇಕಿತ್ತು. ಅದು ಕೈಲಾಸದಲ್ಲಿ ಸಿಕ್ಕಿರಲಿಲ್ಲ. ಭೂಲೋಕದಲ್ಲಿ, ಅಧೋಲೋಕದಲ್ಲಿ ಸಿಕ್ಕಿರಲಿಲ್ಲ. ನಾರದನೆಷ್ಟು ತಿರುಗಾಡಿದರೂ ಸಮಾಧಾನ ಎಲ್ಲೂ ಸಿಕ್ಕಿರಲಿಲ್ಲ. ಆಗ ಅವನಿಗೆ ಸನತ್ಕುಮಾರ ಹೇಳುತ್ತಾನೆ, "ನೀನು ಏನೇನು ನೋಡಿದೆಯೋ ಅದು ಅಲ್ಪ, ಬಹಳ ಸಣ್ಣದು. ಯಾವುದು ಸಣ್ಣದೋ ಅದನ್ನು ನಾವು ಸಂಗ್ರಹ ಮಾಡುವುದರಿಂದ ಸುಖ ಆಗುತ್ತದೆ! ಆದರೆ ಸಮಾಧಾನ ಆಗುವುದಿಲ್ಲ!" ಸಮಾಧಾನ ಆಗುವುದು ಬೇರೆ, ಸುಖ ಆಗುವುದು ಬೇರೆ. ತುರಿಕೆಯಾದಾಗ ತುರಿಸಿದರೆ ಉಂಟಾಗುವುದು ಸುಖ. ತುರಿಕೆಯಿಲ್ಲದಾಗ ಆರೋಗ್ಯವಿದೆ, ಸಮಾಧಾನವಿದೆ. ಸುಖದ ಕೆರೆಯುವಿಕೆ ದುಃಖದಲ್ಲಿ ಪರ್ಯಾವಸಾನ. ಸಮಾಧಾನ ಹಾಗಲ್ಲ, ಅದು ಸದಾ ಹಾಗೆಯೇ.

ನಾವು ಸಣ್ಣ ಸಣ್ಣ ವಸ್ತುವನ್ನು ಪಡೆದಾಗ ಒಂದಿಷ್ಟು ಸುಖವಾಗುತ್ತದೆ. ಈಗ ಸುಖವಾದುದು ಕೆಲಕಾಲದ ನಂತರ ದುಃಖವಾಗುತ್ತದೆ. ಯಾವ ಪ್ರಪಂಚ ಸುಖ ಎಂದು ತಿಳಿಯುತ್ತೇವೆಯೋ ಕೆಲವು ವರ್ಷಗಳ ನಂತರ ಅದೇ ಬೇಡವೆನಿಸುತ್ತದೆ. ಯಾವ ಮಡದಿಯ ಮುಖ ರಾಮನಿಗೆ ಮೊದಲು ಬೇಕಾಗಿತ್ತೋ, ನಂತರ ಅದೇ ಮುಖ ರಾಮನಿಗೆ ಬೇಡ ಅನ್ನಿಸಿತು. ಆದ್ದರಿಂದ ಸೀತಾದೇವಿಯನ್ನು ಅರಣ್ಯದಲ್ಲಿ ತ್ಯಜಿಸಿದ!

ಅದು ರಾಮನ ಕಥೆಯಲ್ಲ. ಅದು ನಮ್ಮೆಲ್ಲರ ಕಥೆ! ವಾಲ್ಮೀಕಿ ಸೂಚ್ಯವಾಗಿ ಕಥೆಯನ್ನು ರಚಿಸಿದ್ದಾನೆ. ರಾಮನದಲ್ಲ ಅದು. ನಮಗೂ ಹಾಗೆ ಅನ್ನಿಸುತ್ತದೆ.

ಮೊದಮೊದಲು ಬಹಳ ಹಿಡಿಸುತ್ತದೆ ಸಂಸಾರ. ನಂತರ ರಾಮಾಯಣ! ಬಳಿಕ ಸಂಸಾರ ಬೇಡವೆನಿಸುತ್ತದೆ. ಸಮಾಧಾನಕ್ಕಾಗಿ ಮನಸ್ಸು ಹಾತೊರೆಯುತ್ತದೆ. ಆ ಸಮಾಧಾನವು ಭೂಮಾ ಚಿಂತನೆಯಲ್ಲಿದೆ.

'ಭೂಮಾ' ಎಂದರೆ ಅನಂತ. ಯಾವುದರಲ್ಲಿ ಬೇರೆ ಏನನ್ನೂ ಬೇರಾಗಿ ಕೇಳಲಾಗುವುದಿಲ್ಲವೋ, ನೋಡಲಾಗುವುದಿಲ್ಲವೋ, ಚಿಂತಿಸಲಾಗುವುದಿಲ್ಲವೋ ಅದು ಭೂಮಾ. ಹಾಗಲ್ಲದುದು ಅಲ್ಪ. ಈ ಹೂ ಅಲ್ಪ. ಜಗತ್ತಿನ ಎಲ್ಲ ವಸ್ತುಗಳೂ ಅಲ್ಪ! ಭಿನ್ನತೆಗೆ ಅಲ್ಲಿ ಅವಕಾಶವಿದೆ. ಅವು ಒಂದು ಸ್ಥಾನದಲ್ಲಿವೆ; ಮತ್ತೊಂದು ಸ್ಥಾನದಲ್ಲಿ ಇಲ್ಲ; ಒಂದು ಕಾಲದಲ್ಲಿವೆ; ಇನ್ನೊಂದು ಕಾಲದಲ್ಲಿ ಇಲ್ಲ.

ಪರಮಾತ್ಮ ಹೇಗಿದ್ದಾನೆ? ವಸ್ತುವಿನಿಂದ ಪರಿಮಿತ ಅಲ್ಲ, ದೇಶದಿಂದ ಪರಿಮಿತ ಅಲ್ಲ, ಕಾಲದಿಂದ ಪರಿಮಿತ ಅಲ್ಲ. ಭಾವದಿಂದಲೂ ಪರಿಮಿತ ಅಲ್ಲ. ಅವನು ನಿಜವಾದ ಭೂಮಾ. ಸರ್ವವ್ಯಾಪಕ! ನಾವು ಪೂಜಿಸುವ ದೇವರು ಕಾಲ, ದೇಶ ಸೀಮಿತವಾಗಿದ್ದರೆ ಅದು ದೇವರೇ ಅಲ್ಲ! ಪರಮಾತ್ಮ ಅಲ್ಲ. ಈ ದೇಶ ಅವನನ್ನು ಕಟ್ಟಿಹಾಕಬಾರದು. ದೇಗುಲ ಭಗವಂತನನ್ನು ಕಟ್ಟಿಹಾಕಬಾರದು. ಹಾಗೆ ಕಟ್ಟಿಹಾಕಿತು ಎಂದರೆ ಭಗವಂತ ಅಲ್ಪನಾಗಿ ಬಿಡುತ್ತಾನೆ. ಭಾರತೀಯ ದೇವರು ಯೂರೋಪ್‌ನೊಳಗೆ ಹೋಗದು. ಯೂರೋಪ್‌ನ ದೇವರು ಭಾರತೀಯ ಗುಡಿಯೊಳಗೆ ಬರದು. ಬರಲು ಹೆದರುತ್ತದೆ. ಏಕೆ? ಈ ದೇವರೆಲ್ಲ 'ಅಲ್ಪ'! 'ಭೂಮಾ' ದೇವರಿಗೆ ಭಾರತವೇನು? ಯೂರೋಪ್ ಏನು?

ಒಂದು ದೇಶದಲ್ಲಿ ಇದ್ದು ಇನ್ನೊಂದು ದೇಶದಲ್ಲಿ ಇರದಿದ್ದರೆ ಅದು ಪರಿಮಿತ. ನಾರಾಯಣನ ಗುಡಿಯೊಳಗೆ 'ಶಿವ' ಇರುವುದಿಲ್ಲ ಎಂದು ಕೆಲವರು; ಶಿವನ ಗುಡಿಯೊಳಗೆ 'ನಾರಾಯಣ' ಇರುವುದಿಲ್ಲ ಎಂದು ಕೆಲವರು. ನಿಜವಾದ 'ಶಿವ', ನಾರಾಯಣ ಇಬ್ಬರೂ ಒಂದೇ. ಆತ ನಮ್ಮ ಅಲ್ಪತೆಯ ಮೂರ್ಖತನ ಕಂಡು ನಗುತ್ತಾನೆ. ಮನುಷ್ಯ ತನ್ನ ಅಲ್ಪತನವನ್ನು ದೇವರ ಮೇಲೆ ಹೇರುತ್ತಾನೆ. ತಿಳಿದ ಸಂತರು ಹಾಗಲ್ಲ. ಅವರು ಅವನಷ್ಟೇ ಅನಂತಭಾವಿಗಳು.

ಶ್ರೇಷ್ಠ ಸಂತರು, ಮಹಂತರು ಯಾವ ಜಾತಿಗೆ ಸಂಬಂಧಪಟ್ಟವರು? ಯಾವುದಾದರೂ ದೇಶಕ್ಕೆ ಸಂಬಂಧಪಟ್ಟವರೆ? ಯಾವುದಾದರೂ ಭಾಷೆಗೆ ಸಂಬಂಧಪಟ್ಟವರೆ? ಎಮ್ಮ ಶರಣರು ದೇಶ ಭಾಷಿಕರಲ್ಲ. ದೇಶಾಭಿ ಮಾನಿಗಳಲ್ಲ, ದೇಶಾಂತರ ಮಾಡುವರು. ಇಂತಹ ಶರಣರ ತಂದು ಮನೆಯೊಳಗೆ ಇಟ್ಟು ಕೀಲಿ ಹಾಕಿದ್ದೇವೆ, ಇವರು ನಮ್ಮವರು, ಅವರು ನಿಮ್ಮವರು ಎಂದು. 'ಜಗದಗಲ, ಮುಗಿಲಗಲ' ಎಂದು ಹೇಳಿಕೊಂಡ ಬಸವಣ್ಣನವರನ್ನು ನಮ್ಮ ಸಂಕುಚಿತ ಚೌಕಟ್ಟಿನಲ್ಲಿ ಬಂಧಿಸಿದ್ದೇವೆ. ಯಾವುದೇ ಶರಣರು ಸಣ್ಣವರಾಗಿರುವುದು ಹೇಗೆ

ಸಾಧ್ಯ? ಅವರು ಎಲ್ಲವನ್ನೂ ಮೀರಿರುತ್ತಾರೆ. ಯಾವುದರಲ್ಲೂ ಸಿಲುಕಿಕೊಂಡಿರುವುದಿಲ್ಲ.

ನಮಗೆ ಬಸವಣ್ಣ, ಶಂಕರ ಯಾಕೆ ಪ್ರಿಯ ಹೇಳಿ? ಯಾಕೆ ಅಂದರೆ ಎಲ್ಲವನ್ನೂ ಮೀರಿದ್ದಾರೆ ಅವರು. ಭೂಮಾವನ್ನರಿತವರು. ಅವರು ಯಾವ ಮಿತಿಯೊಳಗೂ ಸಿಕ್ಕಿಲ್ಲ. ಅಂತಹ ವಸ್ತುವನ್ನು ಅನುಭವಿಸಿದ್ದಾರೆ! ಎಂತಲೇ ಅಂಥವರಿಗೆ ಜಗತ್ತೆಲ್ಲಾ ತಲೆಬಾಗುತ್ತದೆ.

ಸಾಗರವನ್ನು ಕಂಡ ಬಳಿಕ, ಸಣ್ಣ ಪುಟ್ಟ ಕೊಳಗಳ ಬಗೆಗೆ ಅಭಿಮಾನ ಇರುವುದಿಲ್ಲ. ಬಳಸುವುದಿಲ್ಲವೆಂದಲ್ಲ, ಬಳಸುತ್ತಾನೆ. ಆದರೆ ಅಭಿಮಾನ ಉಳಿಯುವುದಿಲ್ಲ. ಕೊಳದ ನೀರನ್ನು ಬಳಸಿದರೂ ಅಭಿಮಾನವಿಲ್ಲ. ಏಕೆಂದರೆ ಸಾಗರದ ದರ್ಶನವಾಗಿರುತ್ತದೆ! ಹಾಗೆ ಭಗವಂತನನ್ನು ಇಷ್ಟಲಿಂಗ, ಇಷ್ಟದೇವ ಅಥವಾ ಮತ್ತೆ ಇನ್ನೇನಾಗಿಯಾದರೂ ಪೂಜಿಸಿ! ಅವುಗಳ ಅಭಿಮಾನ ಮಾತ್ರ ಬೇಡ.

ದೇವರು ಹಿಂದಕ್ಕೆ ಇದ್ದ. ಈಗಿಲ್ಲ! ಈತ ಜಾಗ್ರತ ದೇವರು. ಈತ ಅಜಾಗ್ರತ ದೇವರು, ಎನ್ನುತ್ತೇವೆ! ದೇವರು ಸಹಿತ ಜಾಗ್ರತ ಅಜಾಗ್ರತ! ನಮ್ಮದು ತಪ್ಪು ತಿಳುವಳಿಕೆ. ನಮ್ಮದು ಸಮಲ ದೃಷ್ಟಿ! ಏಕೆ ಹೀಗೆ? ನಾವು ಸತ್ಯದ ಚಿಂತನೆ ಮಾಡಿಲ್ಲ. ನಮ್ಮ ಬದುಕಿನಲ್ಲಿ ಕಾಣುವಂಥದು ಅವನಿಗೂ ಅನ್ವಯಿಸುವುದೆಂಬ ಕಲ್ಪನೆ! ನಮಗೆ ಮಿತಿ. ಅವನಿಗೂ ಮಿತಿ ಹಾಕುವ ಯತ್ನ!

ದೇವರ ವಿಷಯದಲ್ಲಿ ಭಿನ್ನವಾದ, ಭಗ್ನವಾದ, ಒಡೆದುಹೋದ, ಹೀಗೆಲ್ಲಾ ಭಾಷೆ ಬಳಸುತ್ತೇವೆ. ದೇವರೆಂದಾದರೂ ನಾಶವಾಗಬಹುದೆ? ಒಡೆವ ವಸ್ತುವಿನೊಳಗಿದ್ದು ಒಡೆದುಹೋಗಬಲ್ಲನೆ? ಹಿಂದಿದ್ದು ಇಂದು ಇಲ್ಲದಾಗಬಹುದೆ? ಎಲ್ಲ ನಮ್ಮ ಅಜ್ಞಾನ!

ದೇವನು ಹೇಗೆ ಕಾಲ ದೇಶ ಮಿತನಲ್ಲವೋ ಹಾಗೆ ವಸ್ತುಮಿತನೂ ಅಲ್ಲ. ಆತ ಈ ವಸ್ತುವಿನಲ್ಲಿದ್ದಾನೆ, ಈ ವಸ್ತುವಿನಲ್ಲಿ ಇಲ್ಲ ಎನ್ನುತ್ತೇವೆ. ಸುಂದರವಾಗಿ ಕೆತ್ತಿದ ಮೂರ್ತಿಯಲ್ಲಿ ದೇವರಿಲ್ಲ ಎಂದು ತಿಳಿದು ಅದರಲ್ಲಿ ಹಲವಾರು ಧಾರ್ಮಿಕ ಕ್ರಿಯೆಗಳಿಂದ ಪ್ರಾಣಪ್ರತಿಷ್ಠಾಪನೆ ಮಾಡುತ್ತೇವೆ. ಕಲ್ಲು ಕೆತ್ತುವ ಮೊದಲೂ ದೇವರು ಇತ್ತು. ಕಲ್ಲನ್ನು ಕೆತ್ತಿ ಸುಂದರ ಮಾಡಿದಾಗಲೂ ದೇವರು ಇತ್ತು. ಈಗ ಗುರುಗಳು ಹಸ್ತ ಇಟ್ಟ ಕೂಡಲೇ ದೇವರು ನಮ್ಮ ಭಾವದಲ್ಲಿ ಕಾಣತೊಡಗಿತಷ್ಟೇ. ಮೊದಲು ನೋಡಿದಾಗ ದೇವರು ಕಂಡಿರಲಿಲ್ಲ. ದೃಷ್ಟಿ ಬದಲಾಗಿತ್ತು! ಆ ವಸ್ತುವನ್ನು ಸುಂದರಗೊಳಿಸಿ ಇಟ್ಟಾಗಲೂ ದೇವರು ಕಂಡಿರಲಿಲ್ಲ. ಸಂತರು, ಮಹಂತರು ಸ್ಪರ್ಶ ಮಾಡಿದ ಕೂಡಲೇ ದೇವರು ಕಾಣಬಂದ ಎಂದು ಭಾವಿಸುತ್ತೇವೆ. ನಿಜವಾಗಿಯೂ ಆ ಕಲ್ಲಿನಲ್ಲಿ ದೇವರಿದ್ದ. ಈ ನಮ್ಮ ಕಣ್ಣಿನೊಳಗೆ ದೇವರಿರಲಿಲ್ಲ ಎನ್ನಿ! ಗುರುವಿನಿಂದ ಶಕ್ತಿಪಾತವಾದುದು ಕಲ್ಲೊಳಗಲ್ಲ, ನಮ್ಮ ಭಾವದೊಳಗೆ.

ಕೆಲವು ವಸ್ತುಗಳಲ್ಲಿ ದೇವರ ಅಂಶ ಹೆಚ್ಚು, ಕೆಲವು ವಸ್ತುಗಳಲ್ಲಿ ದೇವರ ಅಂಶ ಕಡಿಮೆ, ಇಂತಹ ಕಲ್ಪನೆ ಅತಾತ್ವಿಕ. ಎಲ್ಲಾ ವಸ್ತುಗಳಲ್ಲಿ ದೇವನಿದ್ದಾನೆ ಸಮನಾಗಿ. ಯಾವುದೇ ಸಂಖ್ಯೆ ತೆಗೆದುಕೊಳ್ಳಿ. ಪ್ರತಿಯೊಂದು ಸಂಖ್ಯೆಯಲ್ಲಿ 'ಒಂದು' ಇದೆ. + ೧ ಆದಾಗ ಎರಡು ಆಗುತ್ತದೆ. + ೧ ಆದಾಗ ೩ ಆಗುತ್ತದೆ. ಯಾವುದೇ ಸಂಖ್ಯೆ ಇರಲಿ. ಅದರಲ್ಲಿ ಒಂದು, ಒಂದು ಕಳೆದರೆ ಉಳಿಯುವುದು ಶೂನ್ಯ. ವಿಶ್ವದ ವಸ್ತುಗಳು ಸಂಖ್ಯೆಯಂತೆ. ಪ್ರತಿ ಸಂಖ್ಯೆಯ ಅಂತರಂಗದಲ್ಲಿ, ಆದ್ಯಂತದಲ್ಲಿ ಶೂನ್ಯವಿರುವಂತೆ ವಿಶ್ವದ ಅಂತರಂಗದಲ್ಲಿ, ಆದ್ಯಂತದಲ್ಲಿ ಪರಬ್ರಹ್ಮ. ಅದು ಭೂಮಾ. ಸಂಖ್ಯೆಯೇ ಅಂದರೆ ಒಂದು ಎನ್ನುವುದೇ 'ಅಲ್ಪ.' ಅದು ಮೂಲಪ್ರಕೃತಿ. ಸಂಖ್ಯೆಯು ಪರಿಮಿತ. ಶೂನ್ಯ 'ಅಪರಿಮಿತ'. ಹಾಗೆ ಜಗತ್ತು ಹಾಗೂ ಜಗತ್ತಿನ ವಸ್ತು ಪರಿಮಿತ. ದೇವನು ಅಪರಿಚ್ಛಿನ್ನ! ಅಪರಿಮಿತ!

'ಭಾವಪರಿಮಿತಿ' ಕೂಡ ದೇವನಿಗಿಲ್ಲ. ಯಾವುದೇ ಭಾವ ಮನಸ್ಸಿನ ಮಧ್ಯ ಮೂಡಿದರೂ ಆ ಭಾವದ ಅಂತರಂಗದಲ್ಲಿ ಅದೇ ವಸ್ತು ತುಂಬಿಕೊಂಡಿರುತ್ತದೆ. 'ಇಲ್ಲ' ಎನ್ನುವ ಭಾಷೆಯೊಳಗೆ ದೇವರು ಇದ್ದಾನೆ. 'ಇದೆ' ಎನ್ನುವ ಭಾವದೊಳಗೂ ದೇವರು ಇದ್ದಾನೆ. ಇಲ್ಲ ಎನ್ನುವಾಗಲೂ ಅಸ್ತಿತ್ವ ಇದೆ. ಇದೆ ಎನ್ನುವಾಗಲೂ ಅಸ್ತಿತ್ವ ಇದೆ. ಈ ಅಸ್ತಿತ್ವ 'ಇಲ್ಲ'ಕ್ಕೂ ಆಧಾರ, 'ಇದೆ'ಗೂ ಆಧಾರ. ಏಕೆಂದರೆ 'ಇಲ್ಲ' ಎನ್ನುವುದೂ ಒಂದು ಭಾವವೇ. 'ಇದೆ' ಎನ್ನುವುದೂ ಒಂದು ಭಾವವೇ. ಭಾವಕ್ಕೆ ಅಸ್ತಿತ್ವ ಇದೆ. ಆ ಅಸ್ತಿತ್ವವೇ ದೇವರು. ಯಾವುದು ಭಾವದಿಂದ ಮಿತವಾಗುತ್ತದೆ, ಅದು ದೇವರಲ್ಲ. ಪುರುಷ ಭಾವದಿಂದ ದೇವರು ಮಿತನಾದರೆ ಸ್ತ್ರೀ ದೇವರಲ್ಲ. ಸ್ತ್ರೀ ಭಾವದಿಂದ ದೇವರು ಮಿತನಾದರೆ ಪುರುಷನು ದೇವರಲ್ಲ. ನಿಜವಾದ ದೇವರು ಭಾವಮಿತನಲ್ಲ. ಸ್ತ್ರೀಭಾವನೆಗೂ ಆಧಾರ, ಪುರುಷಭಾವನೆಗೂ ಆಧಾರ. ಭಾವಪರಿಚ್ಛಿನ್ನತೆ ಅವನಲ್ಲಿಲ್ಲ.

ಇಂತು ನಾಲ್ಕು ಪರಿಚ್ಛಿನ್ನತೆಗಳನ್ನು ತೆಗೆದೊಗೆದ ಬಳಿಕ ಏನುಳಿದಿರುತ್ತದೆ ಅದು ದೇವರು! ನಾಲ್ಕನ್ನು ಹಾಕಿದಾಗ ಏನು ಕಾಣಿಸುತ್ತದೆ ಅದು ಜಗತ್ತು! ಇದು ಅಲ್ಪ. ಅದು 'ಭೂಮಾ'! ಈ 'ಅಲ್ಪ'ದ ಮಧ್ಯ ಇರುವ 'ಭೂಮಾ'ವನ್ನು ಚಿಂತಿಸಬೇಕು. ಬಂಧುಬಾಂಧವರ ಮಧ್ಯೆ ಬಾಳಬೇಕು. ವಸ್ತುಗಳ ಸಂಚಯದ ಮಧ್ಯೆ ಜೀವನವನ್ನು ಕಟ್ಟಿಕೊಳ್ಳಬೇಕು. ಆದರೆ ಅಂತರಂಗದ ತುಂಬಾ ಕಣ್ಣಿನಲ್ಲೆಲ್ಲಾ ಒಂದು ವಸ್ತು ಸ್ಪಷ್ಟವಾಗಿ ಇರಬೇಕು. ಅದು 'ಭೂಮಾ'! ಹೀಗೆ 'ಭೂಮಾ'ವನ್ನು ದೃಷ್ಟಿಯೊಳಗೆ ಇಟ್ಟುಕೊಳ್ಳುವುದಕ್ಕೆ ಭಗವತ್ ಚಿಂತನ ಎನ್ನಬೇಕು. ಹೀಗೆ ಚಿಂತನ ಮಾಡಿದರೆ ನಾನು ನೀವು ಬೇರೆ ಬೇರೆಯಾಗಿ ಕಾಣದು. ಜಾತಿಭೇದ, ಲಿಂಗಭೇದ ತೋರದು.

ನಾನು ಪುರುಷನೂ ಅಲ್ಲ, ಸ್ತ್ರೀಯೂ ಅಲ್ಲ. ನನ್ನಷ್ಟಕ್ಕೆ ನಾ ನನ್ನೊಳಗೆ ನಾ ನೋಡಿಬಿಟ್ಟರೆ ಅಲ್ಲಿ ಪುರುಷ ಇಲ್ಲ, ಸ್ತ್ರೀ ಇಲ್ಲ! ಯಾವಾಗ ದೇಹದ ಕಲ್ಪನೆ ಬಂತೋ

ಪುರುಷಭಾವ ಬಂತು, ಸ್ತ್ರೀಭಾವ ಬಂತು. ಆ ದೇಹದ ಕಲ್ಪನೆ ಬಿಟ್ಟು ಉಳಿದ 'ನಾ' ಅನ್ನುವುದಕ್ಕೆ ಲಿಂಗ ಇಲ್ಲ! ಸ್ತ್ರೀ ಇದ್ದರೂ ಸರಿ, ಪುರುಷ ಇದ್ದರೂ ಸರಿ. ಅದೆಲ್ಲಾ ವ್ಯಾವಹಾರಿಕ. ಪಾರಮಾರ್ಥಿಕವಲ್ಲ.

'ಭೂಮಾ' ಚಿಂತನೆ ಮಾಡಿದರೆ ನಾವು ನಿಶ್ಚಲರೂ ನಿಶ್ಚಿಂತರೂ ಆಗುತ್ತೇವೆ. ಕಂಡದ್ದಕ್ಕೆಲ್ಲಾ ಚಿಂತಿಸುವುದಿಲ್ಲ. ಆಗದುದಕ್ಕೆಲ್ಲ ತಲೆ ಕೆಡಿಸಿಕೊಳ್ಳುವುದಿಲ್ಲ. ಬಾಹ್ಯ ಜಗತ್ತಿನ ದ್ವಂದ್ವಗಳನ್ನು, ಸುಖ-ದುಃಖಗಳನ್ನು ಅನುಭವಿಸುತ್ತೇವೆ. ಆದರೆ ಅದೆಲ್ಲಾ ಮೇಲೆ ಮೇಲೆ. ಒಳಗೆಲ್ಲಾ ಪ್ರಶಾಂತ. ಹೊರಗೆ ಜಗತ್ತು. ಒಳಗೆ ದೇವರು!

ಸೌಂದರ್ಯಕ್ಕೆ ಆಳ ಇಲ್ಲ. ಮೇಲಿನ ಚರ್ಮದ ಹೊದಿಕೆ ತೆಗೆದರೆ ಆ ದೇಹ ಕಂಡು ಮರುಳಾಗುವವರು ಯಾರಿದ್ದಾರೆ? ಹಾಗೆ ಜಗತ್ತು. ಮೇಲೆ ಮೇಲೆ ಮಾತ್ರ. ಅದಕ್ಕೆ ಆಳವಾದ ಅಸ್ತಿತ್ವವಿಲ್ಲ. ನೋಡಲು ಮಾತ್ರ ಇದೆ. ಅದರ ಅಂತರಂಗದಲ್ಲಿ ಘನವಾಗಿರುವುದು 'ದೇವ'! ಅದನ್ನು ನೋಡಿದರೆ ಮರುಳಾಗುವ ಪ್ರಮೇಯವಿಲ್ಲ. ಅದನ್ನು ನೋಡಲು 'ಚಿಂತನ' ಅವಶ್ಯ.

ಯಾರ ಪ್ರಪಂಚ ಎಷ್ಟು ದೊಡ್ಡದಾಗಿ ಕಂಡರೂ ಅದಕ್ಕೆ ಆಳ ಇರುವುದಿಲ್ಲ. ಹೀಗೆ ತಿಳಿದುಕೊಂಡರೆ ಎಷ್ಟು ಆನಂದಪೂರ್ಣವಾಗುತ್ತದೆ! ರಾಜಮಹಾರಾಜರ ಪ್ರಪಂಚ ಭವ್ಯವಾಗಿ ಕಾಣುತ್ತದೆ. ಆದರೆ ಅವರ ಸಮೀಪ ಹೋದರೆ ಅದರ ಆಳ, ಅಲ್ಪತೆ ಗೊತ್ತಾಗುತ್ತದೆ. ಹೊರಗೆ ಹೊಳಪು! ಒಳಗೆಲ್ಲಾ ಚಿಂತೆ! ಎಷ್ಟು ರಾಜರು ಆತ್ಮಹತ್ಯೆ ಮಾಡಿಕೊಂಡಿಲ್ಲ? ಎಷ್ಟು ಸಿರಿವಂತರು ಹುಚ್ಚರಾಗಿಲ್ಲ? ಆದ್ದರಿಂದ ಹೊರವೈಭವ ಕಂಡು ಮರುಳಾಗಬಾರದು ಅಲ್ಲವೆ? ಪ್ರಾಪಂಚಿಕ ವೈಭವವೆಂದರೆ ತಗಣೆಗಳಿಂದ ತುಂಬಿದ 'ರಾಜಗದ್ದಿಗೆ'! ಕುಳಿತವನಿಗೆ ಅದರ ತಾಪ ತಿಳಿಯುತ್ತದೆ, ನೋಡುವವರಿಗೆ ಭವ್ಯವಾಗಿ ತೋರುತ್ತದೆ.

ಇದನ್ನು ಅರಿತರೆ ಜೀವನ ಆಪ್ಯಾಯಮಾನ. ದೂರದ ಗುಡ್ಡ ನೋಡಲು ಸುಂದರ. ನೋಡಿಯೇ ಹರ್ಷಿಸಬೇಕು! ತಾನಿರುವ ಗುಡ್ಡ ತ್ಯಜಿಸಿ ಮೃಗಜಲದ ಶೋಧ ಮಾಡಬೇಕಿಲ್ಲ. 'ಅಲ್ಪ'ವಾದುದೆಲ್ಲ ಅಷ್ಟೇ. ಸುಖ ದುಃಖ ಎರಡೂ ಅದರಲ್ಲಿವೆ. 'ಭೂಮಾ' ಚಿಂತಿಸಿ, ಭಾವಿಸಿ. ಅದು ಸತ್ಯ. ಸಮಾಧಾನವೀಯುತ್ತದೆ.

□

# ಅಂತರಂಗದ ಮಾರ್ಗದರ್ಶಿಗಳು

**ಶ್ರೀ ಚನ್ನಬಸವ ಸ್ವಾಮಿಗಳು**
ಶ್ರೀ ಕಂಬಳೀಶ್ವರ ಮಠ, ಸುಕ್ಷೇತ್ರ ಮಲ್ಲನಮೂಲೆ

ಸುತ್ತೂರು ಶ್ರೀಮಠ ಅನ್ನದಾಸೋಹ ಮತ್ತು ಜ್ಞಾನದಾಸೋಹಕ್ಕೆ ತನ್ನನ್ನು ತೊಡಗಿಸಿಕೊಳ್ಳುತ್ತಿದ್ದ ಆರಂಭದ ದಿನಗಳು. ಮೈಸೂರಿನ ಇಂದಿನ ಮಹಾತ್ಮ ಗಾಂಧಿ ರಸ್ತೆಯಲ್ಲಿರುವ ಕ್ಯಾತನಹಳ್ಳಿ ಸಾಹುಕಾರ್ ಸಿದ್ದಲಿಂಗಯ್ಯನವರ ಹಾಸ್ಟೆಲ್, ಶ್ರೀಮಠದ ದಾಸೋಹದ ಕೇಂದ್ರಸ್ಥಾನ. ಮತ್ತು 1951ನೇ ಇಸವಿ. ನಾನು ವಿದ್ಯಾಭ್ಯಾಸಕ್ಕಾಗಿ ಅಲ್ಲಿ ಆಶ್ರಯ ಪಡೆದಿದ್ದೆ. ಪರಮ ಪೂಜ್ಯ ಜಗದ್ಗುರುಗಳವರು ತಮ್ಮ ವಿದ್ಯಾಭ್ಯಾಸದ ಜೊತೆಗೆ ಹಾಸ್ಟೆಲಿನ ಉಸ್ತುವಾರಿಯನ್ನೂ ವಹಿಸಿಕೊಂಡಿದ್ದರು. ಸುತ್ತೂರು ಮಂತ್ರಮಹರ್ಷಿಗಳ ಕಾರ್ಯಕ್ಷೇತ್ರ ವಾಗಿದ್ದರೆ, ಶ್ರೀ ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳ ಕಾರ್ಯಕ್ಷೇತ್ರ ಹೆಚ್ಚಾಗಿ ಮೈಸೂರು ನಗರವಾಗಿತ್ತು. ಪೂಜ್ಯರು ಸದಾ ಹಸನ್ಮುಖಿಗಳು, ಮೃದುಭಾಷಿಗಳು. ಅವರಿಗೆ ಕೋಪ ಬರುತ್ತಿದ್ದುದು ಯಾರಾದರೂ ಧರ್ಮಕ್ಕೆ ವಿರುದ್ಧವಾಗಿ ನಡೆದುಕೊಂಡಾಗ ಮಾತ್ರ. ಆ ಕೋಪವೂ ಬಹಳ ಹೊತ್ತು ಇರುತ್ತಿರಲಿಲ್ಲ. ವಿದ್ಯಾರ್ಥಿನಿಲಯದ ನಿರ್ವಹಣೆಗೆ ಅವರು ಅಂದು ಬಹಳ ಕಷ್ಟಪಡುತ್ತಿದ್ದರು. ನಮಗೆ ಆಗ ಅಷ್ಟು ಅರ್ಥವಾಗುತ್ತಿರಲಿಲ್ಲ. ಆದರೆ ಅವರಿವರು ನಮ್ಮ ಮುಂದೆ ಮಾತನಾಡಿಕೊಳ್ಳುತ್ತಿದ್ದುದು ನಮಗೆ ಅಷ್ಟಿಷ್ಟು ತಿಳಿಯುತ್ತಿತ್ತು. ಕೆಲವರು ಆಗಾಗ ಅಂಗಡಿ ಬಾಕಿ ಕೇಳಿಕೊಂಡು ಬರುತ್ತಿದ್ದರು. ಒಮ್ಮೊಮ್ಮೆ ಅವರು ಬೇಸರ ಮಾಡಿ ಕೊಂಡು ಹಿಂತಿರುಗುತ್ತಿದ್ದುದೂ ಉಂಟು. ಆದರೆ ನಮಗೆ ಇವಾವುವು ಹೆಚ್ಚು ತಿಳಿಯುತ್ತಿರಲಿಲ್ಲ. ನಮ್ಮ ಶ್ರೀಮಠದ ಹಿರಿಯ ಗುರುಗಳ ಬಗ್ಗೆ ಶ್ರೀ ರಾಜೇಂದ್ರ ಸ್ವಾಮಿಗಳಿಗೆ ಅತೀವ ಪ್ರೀತಿ. ಅಷ್ಟೇ ಪ್ರೀತಿಯನ್ನು ನನ್ನ ಮೇಲೆಯೂ ತೋರಿಸುತ್ತಿದ್ದರು.

ಅವರು ಮೈಸೂರಿನಲ್ಲಿ ಇದ್ದಾಗ ಮಾತ್ರ ತಪ್ಪದೆ ವಿದ್ಯಾರ್ಥಿಗಳ ಊಟದ ಪಂಕ್ತಿಗೆ ಬರುತ್ತಿದ್ದರು. ಎಲ್ಲರೂ ಸಾಮೂಹಿಕವಾಗಿ ಪ್ರಾರ್ಥನೆ ಮಾಡುವುದನ್ನು ಗಮನಿಸುತ್ತ ಕುಳಿತಿರುತ್ತಿದ್ದರು. ಅನಂತರ ಪಂಕ್ತಿ ಪ್ರಾರಂಭವಾದಾಗ ತಮ್ಮ ಕೊಠಡಿಯಿಂದ ಮತ್ತೊಮ್ಮೆ ಬರುತ್ತಿದ್ದರು. ಜೊತೆಯಲ್ಲಿ ಕ್ಯಾತನಹಳ್ಳಿ ಶ್ರೀಗಳು ಇರುತ್ತಿದ್ದರು. ಆ ಸಂದರ್ಭದಲ್ಲಿ ಪೂಜ್ಯರು ತಮ್ಮ ಎರಡೂ ಕೈಗಳನ್ನು ಹಿಂದಕ್ಕೆ ಕಟ್ಟಿಕೊಂಡಿರುತ್ತಿದ್ದರು. ಯಾಕೆ ಹೀಗೆ ಎಂದು ನನಗೆ ತಕ್ಷಣ ತಿಳಿಯಲಿಲ್ಲ. ಅನಂತರ ನಿಧಾನವಾಗಿ ಅರ್ಥವಾಯಿತು. ಪ್ರತಿಯೊಬ್ಬರ ಬಳಿಯೂ ಬಂದು ಅವರು ಶರ್ಟಿನ ಒಳಗೆ ಕೈ ಹಾಕಿ ಪರೀಕ್ಷಿಸುತ್ತಿದ್ದರು; ಇಲ್ಲವೇ ಶರ್ಟನ್ನು

ಮೇಲಕ್ಕೆ ಎತ್ತುವಂತೆ ಸೂಚಿಸುತ್ತಿದ್ದರು. ಅವರು ಇಷ್ಟಲಿಂಗವನ್ನು ಹಾಕಿ ಕೊಂಡಿದ್ದರೆ ಬದುಕಿಕೊಂಡರು. ಇಲ್ಲದಿದ್ದರೆ ಹಿಂದಕ್ಕೆ ಕಟ್ಟಿಕೊಂಡಿದ್ದ ಕೈ ಮುಂದಕ್ಕೆ ಬರುತ್ತಿತ್ತು. ಬೆತ್ತದ ಏಟು ತಪ್ಪಿದ್ದಲ್ಲ. ತ್ರಿಪುಂಡ್ರಧಾರಣೆಯ ಬಗ್ಗೆ ಇಷ್ಟಲಿಂಗದ ಬಗ್ಗೆ ಪೂಜ್ಯರು ತುಂಬಾ ಕಟ್ಟುನಿಟ್ಟು. ಹೀಗೆ ಎಲ್ಲರ ತಪಾಸಣೆಯೂ ನಡೆದ ನಂತರ ಪ್ರಸಾದ ಸ್ವೀಕರಿಸಬೇಕಾಗುತ್ತಿತ್ತು. ಅನಂತರ ಸಮಯ ಸಿಕ್ಕಿದಾಗಲೆಲ್ಲ ಅವರು ವಿದ್ಯಾರ್ಥಿಗಳನ್ನು ಉದ್ದೇಶಿಸಿ ವೀರಶೈವ ಧರ್ಮ ಸಂಸ್ಕೃತಿಯ ಬಗ್ಗೆ ಬೋಧನೆ ಮಾಡುತ್ತಿದ್ದರು. ಪೂಜ್ಯರು ಹೊಸ ಸಯ್ಯಾಜಿರಾವ್ ರಸ್ತೆಯಲ್ಲಿರುವ 'ನಿರಂಜನ ನಿಲಯ' ಎನ್ನುವಲ್ಲಿ ಹೆಚ್ಚು ವಾಸಿಸುತ್ತಿದ್ದರು. ನನ್ನನ್ನು ಆಗಾಗ ಅಲ್ಲಿಗೆ ಕರೆಸಿಕೊಂಡು ನಮ್ಮ ಹಿರಿಯ ಗುರುಗಳ ಬಗ್ಗೆ ಕೇಳುತ್ತಿದ್ದುದರ ಜೊತೆಗೆ ನನ್ನ ವಿದ್ಯಾಭ್ಯಾಸದ ಕುಂದುಕೊರತೆಗಳ ಬಗ್ಗೆಯೂ ವಿಚಾರಿಸಿಕೊಳ್ಳುತ್ತಿದ್ದರು. ನಂಜನಗೂಡಿನ ಸುತ್ತಮುತ್ತ ಧಾನ್ಯದ ಭಿಕ್ಷೆಗೆ ಹೊರಡುವಾಗಲೆಲ್ಲಾ ಪೂಜ್ಯರು ಮಲ್ಲನಮೂಲೆಯ ಕಂಬಳೀಶ್ವರ ಮಠದಲ್ಲಿ ಪೂಜಾನುಷ್ಠಾನಗಳನ್ನು ಮುಗಿಸಿಕೊಂಡೇ ಹೊರಡುತ್ತಿದ್ದುದು. ನಮಗೆ ಈಗಲೂ ಕಣ್ಣಿನಲ್ಲಿ ಅಚ್ಚೊತ್ತಿದಂತೆ ಇದೆ. ಆ ದಿನಗಳಲ್ಲಿ ಸುತ್ತೂರಿಗೆ ನಂಜನಗೂಡು ಮಾರ್ಗವಾಗಿಯೇ ಹೋಗಬೇಕಾಗಿತ್ತು. ಬೇರೆಯ ಮಾರ್ಗವಿರಲಿಲ್ಲ. ಹಾಗೆ ಹೋಗುವಾಗೆಲ್ಲಾ ಹೆದ್ದಾರಿಯಲ್ಲೇ ಇರುವ ಕಂಬಳೀಶ್ವರ ಮಠದ ಮುಂದೆ ನಿಂತು ಒಮ್ಮೆ ಮಠವನ್ನು ಅವಲೋಕಿಸಿಯೇ ಮುಂದಕ್ಕೆ ಹೋಗುತ್ತಿದ್ದರು. ಹಿರಿಯ ಗುರುಗಳು ಗದ್ದುಗೆಯಲ್ಲಿ ಇದ್ದರೆ ಅವರನ್ನು ಭೇಟಿ ಮಾಡಿ ಮುನ್ನಡೆಯುತ್ತಿದ್ದರು.

1986ನೇ ಇಸವಿಯಲ್ಲಿ ನಮ್ಮ ಗುರುಗಳ ಗದ್ದುಗೆಯ ಮೇಲೆ ಗೋಪುರವನ್ನು ನಿರ್ಮಿಸಿ ಕಳಸ ಪ್ರತಿಷ್ಠಾಪನೆಯನ್ನು ಮಾಡಲಾಯಿತು. ಅದೊಂದು ಅದ್ಧೂರಿಯಾದ ಸಮಾರಂಭ. ಆದ್ಯಂತವಾಗಿ ಆ ಸಮಾರಂಭಕ್ಕೆ ಮಾರ್ಗದರ್ಶನ ಮಾಡಿದವರು ಶ್ರೀ ರಾಜೇಂದ್ರ ಸ್ವಾಮಿಗಳು. ಸಮಾರಂಭಕ್ಕೆ ಪೂರ್ವದ ಒಂದು ತಿಂಗಳು ನಿತ್ಯವೂ ಸಂಜೆ ಗದ್ದುಗೆಯ ಬಳಿ ಆಗಮಿಸಿ ಸಲಹೆ ಸೂಚನೆಗಳನ್ನು ಕೊಟ್ಟ ರೀತಿಯನ್ನು ನಾವು ಎಂದಿಗೂ ಮರೆಯುವಂತಿಲ್ಲ. ಅಂದಿನ ಸಮಾರಂಭಕ್ಕೆ ನಾಡಿನ ಹಿರಿಯ ಸ್ವಾಮಿಗಳು ಮತ್ತು ಉಪರಾಷ್ಟ್ರಪತಿ ಶ್ರೀ ಬಿ.ಡಿ. ಜತ್ತಿಯವರು ಆಗಮಿಸಲು ಕಾರಣರಾದವರು ಪರಮಪೂಜ್ಯ ಶ್ರೀ ಶ್ರೀಗಳವರು. ಪೂಜ್ಯರಿಂದ ಅನೇಕ ರೀತಿಯ ಮಾರ್ಗದರ್ಶನಗಳನ್ನು ಪಡೆದಿರುವುದು ನಮ್ಮ ಪುಣ್ಯವೆಂದೇ ಭಾವಿಸಿದ್ದೇವೆ. ಮೈಸೂರಿನಲ್ಲಿ ನಡೆಯುತ್ತಿದ್ದ ಜಯಂತಿ ಉತ್ಸವಗಳಲ್ಲಿ ಅನ್ನದಾಸೋಹದ ಜವಾಬ್ದಾರಿಯನ್ನು ನನಗೆ ವಹಿಸುತ್ತಿದ್ದರು. ಅವರಲ್ಲಿ ಅದಾವ ಶಕ್ತಿ ಅಡಗಿತ್ತೋ ಏನೋ, ಎಂತಹ ಒರಟು ಮನುಷ್ಯನೂ ಅವರ ಮುಂದೆ ನಿಂತ ತಕ್ಷಣ ಮೃದುವಾಗಿಬಿಡುತ್ತಿದ್ದ. ಸಮಸ್ಯೆಯ ಬೆಟ್ಟವೇ ನಮ್ಮ ಮೇಲೆ ಇದ್ದರೂ, ಅವರ ದೃಷ್ಟಿಮಾತ್ರದಿಂದ ಅದು ಹಗುರವಾಗಿ ಬಿಡುತ್ತಿತ್ತು. ಅವರ ಭೌತಿಕ ಕಾಯ ಇಂದು ನಮ್ಮ ಮುಂದೆ ಇಲ್ಲದಿದ್ದರೂ, ಅವರ ದಿವ್ಯ ಚೇತನ ನಮಗೆ ಇಂದೂ ಮಾರ್ಗದರ್ಶಕವಾಗಿದೆ ಎನ್ನುವುದು ನಮ್ಮ ಯಾವತ್ತೂ ನಂಬುಗೆಯಾಗಿದೆ.

**ಕೃಪೆ : 'ಘನ–ಮನ' (ಜೆಎಸ್‌ಎಸ್ ಗ್ರಂಥಮಾಲೆ ಪ್ರಕಟಣೆ)**

# ಶಬರಶಂಕರ ವಿಲಾಸ ಟೀಕು : ದ್ವಿತೀಯಾಶ್ವಾಸ

ಸಿದ್ಧಾಂತಿ ಶಿವಶಂಕರ ಶಾಸ್ತ್ರಿಗಳು

(ಮುಂದುವರಿದಿದೆ)

ಮ ॥ ಪುಲಿ ಕೃಷ್ಣಾಜಿನಮಂ ಸೆಲಂದಿ ಪೊಸ ನೂಲಿಂ ನೇಯ್ದ ಪೊಂಬಟ್ಟೆಯಂ ॥
ವಿಲಸದ್ಭೂರುಹ ರಾಜವಲ್ಕಲಮನೀಗುಂ ತಾಪಸರ್ಗಲ್ಲಿ ಕಂ ॥
ದಲಸನ್ಮೂಲಮನೊಟ್ಟುಗುಂ ಮೃಗಕುಲಂ ಶೃಂಗಂಗಳಿಂ ಮೀಂಟಿ ತಂ ॥
ದೆಲರ್ಗೊಂಪನಮರ್ಚುಗುಂ ಕರಡಿ ತಾಂ ತರ್ಕುಂ ಸಮಿದ್ವೃಂದಮಂ ॥ ೭೩ ॥

**ಟೀಕೆ ॥** ಅಲ್ಲಿ ತಾಪಸರ್ಗೆ, ಪುಲಿ – ಹುಲಿಯು, ಕೃಷ್ಣಾಜಿನಮಂ – ಜಿಂಕೆತೊಗಲನ್ನು, ಸೆಲಂದಿ – ಊಸರವಳ್ಳಿಯು, ಅಥವಾ ಊರ್ಣನಾಭಿಯೆಂಬ ಜೇಡರಹುಳುವು, ಪೊಸ ನೂಲಿಂ – ಹೊಸ ನೂಲಿನಿದಂ, ನೆಯ್ದ ಪೊಂಬಟ್ಟೆಯಂ – ಹೊಂಬಣ್ಣದ ವಸ್ತ್ರವನ್ನು, ವಿಲಸತ್ – ಬೆಳಗುವ, ಭೂರುಹರಾಜ – ಮರಗಳ ಸಾಲೂ, ವಲ್ಕಲಮಂ – ನಾರಿನ ವಸ್ತ್ರವನ್ನು, ಈಗುಂ – ಕೊಡುವದು, ಮೃಗಕುಲಂ ಮೃಗಗಳ ಗುಂಪು, ಶೃಂಗಗಳಿಂ – ಕೊಂಬುಗಳಿಂದ, ಮೀಂಟಿ – ಅಗೆದೆತ್ತಿ ತಂದ, ಕಂದಮೂಲಮಂ – ಗಡ್ಡೆಗಳನ್ನು ಬೇರುಗಳನ್ನು, ಒಟ್ಟುಗುಂ – ಗುಡ್ಡೆ ಹಾಕುವದು, ಎಲರ್ – ಗಾಳಿಯು, ಒಳ್ಗಂಪಂ – ಒಳ್ಳೆಯ ಪರಿಮಳವನ್ನು, ಅಮರ್ಚು ಗುಂ – ಅಣಿ ಮಾಡುವದು, ಕರಡಿಯು ತಾಂ – ತಾನಾಗಿ, ಸಮಿದ್ವೃಂದಮಂ – ಸಣ್ಣ ಸೌದೆಗಳ ಗುಂಪನ್ನು, ತರ್ಕುಂ – ತರುವದು.

**ತಾ ॥** ಹುಲಿಗಳು ಜಿಂಕೆಗಳನ್ನು ಸುಲಿತಂದು ಚರ್ಮವಂ ಬಿಟ್ಟು ಪೋಗೆ ಅದು ಋಷಿಗಳಿಗೆ ಜಪಾಸನವಾಗುವದು. ಹುಳಗಳು ನೂತು ನೆಯ್ದ ಹೆಣಿಗೆಯೇ ವಸ್ತ್ರವಾಗುವದು. ಭೂರ್ಜಾದಿ ವೃಕ್ಷಗಳಿಂ ಕಿಹಿದ ಪಟ್ಟಗಳು ನಾರುಸೀರೆಗಳಾಗುವವು. ಸಾರಂಗ ಮೊದಲಾದ ಮೃಗಗಳು ಕೋಳ್ಕುಟ್ಟಿ ಮೀಂಟಿ ಕೆಡಹಿದ ಗಡ್ಡೆ ಗೆಣಸುಗಳೇ ಆಹಾರವಾಗುವದು. ಗಾಳಿಯಿಂದ ಸುವಾಸನೆ ಬರುವುದು, ಕರಡಿಗಳು ಕಚ್ಚಿತಂದ ಅರಳಿಯ ಕಡ್ಡಿಗಳೇ ಹೋಮ ಸಮಿತ್ತುಗಳಾಗುವವು. ಈ ಮೇರೆ ದೈವನ್ಯಸ್ತಭರರಾದ ಋಷಿಗಳಿಗೆ ದೈವಪ್ರೇರಿತಗಳಾದ ಅರಣ್ಯಕಜಂತುಗಳು ಅಧಿಕವಾಗಿ ಸೇವಕರಂತಾಗುವವು.

ಚ ॥ ಫಣಿಮಣಿ ದೀಪಮಂ ಬೆಳಗಿ ದೀಪದ ಕಂಭದ ಮಾಳ್ಕೆಯಿಂ ಲಸ ।
ತ್ಫಣಿತತಿ ಸಾರ್ದು ನಿಲ್ಗುಮಿರುಳಪ್ಪುದುಮೊಲ್ದು ಕುಟಜಂಗಳಲ್ಲಿ ಮ ॥
ನ್ನಣೆಗೊಳೆವೋದುಗುಂಗಿಳಿಪುರಾಣಮನಲ್ಲಿಯ ದಿವ್ಯಧೇನುಗಳ್ ।
ಪ್ರಣಯದೆ ತನ್ಮಖಾಹುತಿಗೆ ಬೇಳ್ಪ ಸುಧಾರಸಮೀವುದಾಗಳುಂ ॥

**ಟೀಕೆ ॥** ಲಸತ್ಫಣಿತತಿ – ಶೋಭಿಸುವ ನಾಗರ ಗುಂಪು, ಇರುಳಪ್ಪುದುಂ – ಕತ್ತಲೆಯಾಗುತಲೂ, ಫಣಿಮಣಿದೀಪಮಂ – ಹೆಡೆಯ ರನ್ನದ ದೀವಿಗೆಯನ್ನು, ಬೆಳಗಿ – ಪ್ರಕಾಶಕವಪ್ಪಂತೆ ತೋರಿ, ದೀಪದ – ಕಂಭದ, ಮಾಳ್ಕೆಯಿಂ – ಬಗೆಯಿಂದ, ಸಾರ್ದು – ಹತ್ತಿರಕ್ಕೆ ಬಂದು, ನಿಲ್ಗುಂ – ನಿಲ್ಲುವ, ಗಿಳಿ – ಶುಕವು, ಒಲ್ದು – ಒಪ್ಪಿ, ಕುಟಜಂಗಳಲ್ಲಿ – ಪರ್ಣಶಾಲೆಗಳಲ್ಲಿ, ಮನ್ನಣೆಗೊಳೆ – ಮೆಚ್ಚಿಕೆಗೊಳ್ಳುವಂತೆ, ಪುರಾಣಮಂ ಓದು ಗುಂ – ಶಿವಕಥೆಯಂ ಪಠಿಸುವದು, ಅಲ್ಲಿ ದಿವ್ಯವಾದ, ಧೇನುಗಳ್ – ಆಕಳುಗಳು, ಪ್ರಣಯದೆ – ಸ್ನೇಹದಿಂದ, ತನ್ಮಖಾಹುತಿಗೆ – ಅವರ ಯಜ್ಞದ ಹೋಮಕ್ಕೆ, ಬೇಳ್ಪ – ಹಾಕುವ, ಸುಧಾರಸಂ – ಹಾಲನ್ನು, ಆಗಳುಂ – ಯಾವ ಹೋಮಸಮಯದಲ್ಲಿಯೂ, ಈವುದು – ಕರೆಯುವುದು.

**ತಾ ॥** ಕತ್ತಲೆಯಲ್ಲಿ ಪರ್ಣಶಾಲೆಯೊಳಗೆ ಹಾವು ಬಂದು ಹೆಡೆ ಬಿಚ್ಚಿಕೊಂಡು ಎದ್ದಿರಲು ಅದರ ಶಿರೋರತ್ನವು ಕುಂಭದ ಮೇಲೆ ದೀವಿಗೆ ಬೆಳಗುವ ಹಾಗೆ ಪ್ರಕಾಶಿಸುವುದು. ಗಿಳಿಗಳು ಪುರಾಣ ಹೇಳುವುದು, ಆಕಳು ತಾವಾಗೆ ಬಂದು ಹೋಮದ ಸಮಯಕ್ಕೆ ಹಾಲುಕೊಡುವುದು, ಹೀಗೆ ದೈವಾನುಕೂಲವುಳ್ಳವರಿಗೆ ಎಲ್ಲವೂ ಅನುಕೂಲವೆ.

ಕಂ॥ ಬಡವಾದೊಡಲತಿವೃದ್ಧರ ।
ಗಡಣಕೆ ಬೆನ್ನಿತ್ತು ಪೊತ್ತು ಕೇಸರಿಗಳ ಸಂ ॥
ಗಡಮೆಯ್ದು ಗುಮಾ ನದಿಯಿ ।
ರ್ಪಡೆಯೆತ್ತಲ್ಕೊಂಡು ಪೋಪುದಂಚೆಗಳವರಂ ॥ ೭೫ ॥

**ಟೀಕೆ ॥** ಬಡವಾದ – ಸಣ್ಣಗಾದ, ಒಡಲ – ಮೈಯುಳ್ಳ, ಅತಿವೃದ್ಧರ – ಕಡುಮುದುಕರ, ಗಡಣಕೆ – ಗುಂಪಿಗೆ, ಬೆನ್ನಿತ್ತು – ಹೆಗಲು ಕೊಟ್ಟು, ಪೊತ್ತು – ಹೊತ್ತುಕೊಂಡು, ಕೇಸರಿಗಳ – ಸಿಂಹಗಳ, ಸಂಗಡಂ – ಸಂಗವು, ಎಯ್ದುಗುಂ – ಹೋಗುವುದು, ಅಂಚೆಗಳ್ – ಹಂಸಗಳು, ಆಹಾರವಿಲ್ಲದೆ ಶುಷ್ಕರಾಗಿರುವ ಮುನಿಗಳನ್ನು, ಸ್ನಾನಾರ್ಥವಾಗಿ, ಆ ನದಿಯಿರ್ಪಡೆಯ ಅತ್ತಲ್ – ಹೊಳೆಯಿರುವ ಬಳಿಯ ಕಡೆಗೆ ಕೊಂಡುಪೋಪುದು – ತೆಗದುಕೊಂಡು ಹೋಗುವುದು.

**ತಾ ॥** ಮೃಗಶ್ರೇಷ್ಠಗಳಾದ ಸಿಂಹಗಳೂ, ಶ್ರೇಷ್ಠಗಳಾದ ಹಂಸಗಳೂ ಮುನಿಗಳಿಗೆ ವಾಹನಗಳಾಗುವವು ॥ ೭೫ ॥

ಮ॥ ಸ್ರ॥ ಶುಕ ಮಾರ್ಕಂಡೇಯ ಬೋಧಾಯನ ಕಪಿಲ ಕಣಾದಾಕ್ಷಪಾದಾತ್ರಿಮೈ
ತ್ರೇಯಕ ಕಣ್ವಾಗಸ್ತ್ಯ ಪಾರಾಶರ ಭೃಗು ಸನಕಾತ್ರೇಯ ವಾಲ್ಮೀಕಿಗಳ್ಶೌ ॥
ನಕ ವಿಶ್ವಾಮಿತ್ರ ಧೌಮ್ಯ ಚ್ಯವನ ದಮನ ಶಾತಾತಪರ್ ಪೂರ್ಣಭದ್ರಾ ।
ದ್ಯಾಕರಿರ್ದರ್ತಪೋನಂದನದೊಳಘಹರಧ್ಯಾನಸಾಂದ್ರರ್ ಮುನೀಂದ್ರರ್ ॥

**ಟೀಕೆ ॥** ಶುಕ – ವ್ಯಾಸಪುತ್ರನಾದ ಶಿವಯೋಗಿ, ಮಾರ್ಕಂಡೇಯ – ಮೃಕಂಡು ಪುತ್ರನಾದ ಚಿರಂಜೀವಿ, ಬೋಧಾಯನ – ವ್ಯಾಸಶಿಷ್ಯನಾದ, ಸ್ಮೃತಿಕರ್ತ ಕಪಿಲ,

ಸಾಂಖ್ಯಶಾಸ್ತ್ರಕರ್ತನಾದ ವಿಷ್ಣುವಿನ ಅಂಶದ ಮುನಿ ಕಣಾದ, ವೈಶೇಷಿಕ ಶಾಸ್ತ್ರಕರ್ತನಾದ ಮುನಿ ಅಕ್ಷಪಾದ, ಕಾಲಿನಲ್ಲಿ ಕಣ್ಣುಳ್ಳ ಗೌತಮನು, ಅತ್ರಿ – ತ್ರಿಮೂರ್ತಿಗಳ ಅವತಾರಿಗಳಿಗೆ ತಂದೆಯಾದ ಮುನಿ, ಮೈತ್ರೇಯಕ – ಮಿತ್ರೆಯೆಂಬವಳ ಮಗನು, ಕಣ್ವ – ಯಾಜ್ಞವಲ್ಕ್ಯಶಿಷ್ಯನು, ಅಗಸ್ತ್ಯ – ಕಡಲಂ ಕುಡಿದ ಶಿವಯೋಗಿ, ಪಾರಾಶರಿ ಪರಾಶರಪುತ್ರನಾದ ವ್ಯಾಸನು, ಭೃಗು – ಬ್ರಹ್ಮನ ಮಗ, ಸನಕ – ಬ್ರಹ್ಮಮಾನಸಪುತ್ರನು, ಆತ್ರೇಯ – ಅತ್ರಿಪುತ್ರನಾದ ದೂರ್ವಾಸನು, ವಾಲ್ಮೀಕಿ – ರಾಮಾಯಣವಂ ಮಾಡಿದವನು, ಶೌನಕ – ಪುರಾಣಶ್ರೋತೃಮುಖ್ಯನು, ವಿಶ್ವಾಮಿತ್ರ – ಕೌಶಿಕ ಮುನಿ, ಧೌಮ್ಯ – ಪಾಂಡವರಪುರೋಹಿತನಾ, ಚ್ಯವನನು – ದಮನನು, ಶಾತಾತಪನು ಪೂರ್ಣಚಂದ್ರನು ಮುಂತಾದವರು ಪ್ರಸಿದ್ಧ ಮುನಿಗಳು, ಅಘಹರಂ – ಪಾಪವನ್ನು ಪರಿಹರಿಸುವ ಶಿವನ, ಧ್ಯಾನ – ಭಾವನೆಯಿಂದ, ಸಾಂದ್ರರ್ – ನಿಬಿಡರಾದ, ಮುನೀಂದ್ರರ್, ತತ್ಪೋನಂದನದೊಳು – ಆ ತಪೋವನದಲ್ಲಿ, ಇರ್ದರ್ – ಇದ್ದರು.

ಚ ॥ ತೊಳಪ ಕಿರೀಟಮುಜ್ವಳ ಮೃದುಸ್ಮಿತ ವಕ್ತ್ರಮನೂನಕಾಂತಿ ಸಂ ।
ಗಳಿಸಿದ ಕಾಯಮಾಂತ ಶರಚಾಪಮಡಾಯುಧಮಾಳ್ದ ಬೆನ್ನ ಬ ॥
ತ್ತಳಿಕೆ ನವೀನತಾಪಸಗುಣಂ ಮೆರೆವುತ್ತಿರೆ ಬಂದಲ್ಲಿಗ ।
ಚ್ಚರಿಯದ ಜವದವನಂ ಮಿಸುಪಸುಂದರನೋರ್ವನಪೂರ್ವ ವಿಭ್ರಮಂ ॥ ೭೭ ॥

**ಟೀಕೆ ॥** ತೊಳಪ – ಬೆಳಗುವ ಕಿರೀಟವೂ, ಉಜ್ವಲ – ಶೋಭಿಸುವ, ಮೃದುಸ್ಮಿತ – ಕಿರುನಗೆಯುಳ್ಳ, ವಕ್ತ್ರಂ – ಮುಖವೂ, ಕಾಂತಿ – ಹೊಳಪು, ಸಂಗಳಿಸಿದ – ಉಂಟಾದ, ಕಾಯಂ – ಮೈಯಂ, ಆಂತ – ಧರಿಸಿದ – ಶರಚಾಪಂ – ಅಂಬುಕೋಶವು, ಅಡಾಯುಧಂ – ಗುರಾಣಿಯನ್ನು, ಆಳ್ದ – ಹೊತ್ತಿರುವ, ಬೆನ್ನಿನ ಬತ್ತಳಿಕೆ – ಅಂಬಿನ ಹೊದರೂ, ನವೀನತಾಪಸಗುಣಂ – ಹೊಸತಾದಮ ನಿಧರ್ಮವೂ ಮೆರೆವುತ್ತಿರೆ, ಅಚ್ಚರಿಯ, ಜವ್ವನಂ ಆಶ್ಚರ್ಯದ ಯೌವನವು ಮಿಸುಪ – ಮೆರೆಯುವ – ಅಪೂರ್ವವಿಭ್ರಮಂ – ಪೂರ್ವದೊಳಗೆ ನೋಡಲ್ಪಡದ ವಿಲಾಸವುಳ್ಳ, ಓರ್ವ ಸುಂದರಂ – ಒಬ್ಬ ಚಲುವನು, ಅಲ್ಲಿಗೆ ಬಂದಂ.

**ತಾ ॥** ಆ ತಪೋವನಕ್ಕೆ ಪ್ರಕಾಶಿಸುವ ಮೈಯುಳ್ಳ ಕಿರೀಟ ಧನುರ್ಬಾಣ ಖೇಡ್ಯನಿಷಂಗ ಗಳಂ ಧರಿಸಿದ ಕಿರಿನಗೆಯುಳ್ಳ ಹೊಸಪ್ರಾಯದ ವಿಲಾಸಗಾರನಾದ ಚಲುವನೋರ್ವನು ಹೊಸತಾಗಿ ಋಷಿವೇಷ ಹಾಕಿಕೊಂಡು ಅಲ್ಲಿಗೆ ಬಂದನು ॥ ೭೭ ॥

**ವ ॥** ಅಂತೇಳ್ತಂದು ಗಿರಿಕಂದರದ ತತ್ತಪೋವನಮಕಂಪೊಕ್ಕು ॥ ೭ ॥

**ಟೀಕ ॥** ಅಂತು – ಹಾಗೆ – ಏಲ್ತಂದು – ಬಂದು, ಗಿರಿಕಂದರದ – ಬೆಟ್ಟದ ತಪ್ಪಲಿನ, ತತ್ – ಆ ತಪೋವನವಂ, ಪೊಕ್ಕು – ಪ್ರವೇಶಿಸಿ ॥ ೭ ॥

ಮ॥ ಸ್ರ॥ ತತವಿಧ್ಯುಕ್ತಪ್ರಕಾರಂ ಮಿಗೆ ಸದಮಳತೀರ್ಥಾಂಬುವಿಂ ಮಿಂದು ಶೈವ ।
ವ್ರತಮಂ ಕೈಕೊಂಡು ತಾಳ್ದುಂ ಸೂಸಿತಭಸಿತ ರುದ್ರಾಕ್ಷಮಾಲಾಳಿಯಂ ॥
ವಿಶ್ರುತಸನ್ಮಂತ್ರದಿಂ ಮಂಗಳಮಯ ತನು ತಾನಾದನತ್ಯಂತಶಾಂತಿ ।
ಸ್ಥಿತಿಜತತ್ತ ಚಿತ್ತವಂ ತನ್ಮುನಿ ಶಿವಪದಸದ್ಭಕ್ತಿಸಂಪತ್ಪ್ರಯುಕ್ತಂ ॥

**ಟೀಕ ॥** ತತ – ವಿಸ್ತಾರವಾದ, ವಿಧ್ಯುಕ್ತ – ಧರ್ಮಶಾಸ್ತ್ರದಲ್ಲಿ ಹೇಳಲ್ಪಟ್ಟ, ಪ್ರಕಾರಂ – ಆಚಾರದ ಬಗೆಯುಂ, ಮಿಗೆ – ಅತಿಶಯವಾಗಲು, ಸತ್– ಶುದ್ಧವಾದ, ಅಮಳ – ನಿರ್ಮಳನಾದ, ತೀರ್ಥಾಂಬುವಿಂ – ಪುಣ್ಯಜಲದಿಂದ, ಮಿಂದು – ಸ್ನಾನಮಾಡಿ, ಶೈವವ್ರತಮಂ – ಶಿವದೀಕ್ಷೆಯನ್ನು, ಕೈಕೊಂಡು – ಪಡೆದು, ಸಮೀಚೀನವಾಗಿಯೂ, ಸಿತ – ಬಿಳುಪಾಗಿಯೂ ಇರುವ, ರುದ್ರಾಕ್ಷಿಮಣಿಗಣ ಮಾಲಾಳಿಯಂ – ರುದ್ರಾಕ್ಷ ಸರಗಳ ಗುಂಪನ್ನು, ತಾಳ್ದುಂ – ಧರಿಸುವವನು, ವಿಶ್ರುತಜ – ಪ್ರಸಿದ್ಧವಾದ, ತತ್ತನ್ಮಂತ್ರದಿಂ ಆಯಾ ವೇದವಾಕ್ಯಗಳಿಂದ, ಮಂಗಳಮಯ – ಶಿವಪ್ರಚುರವಾದ, ತನು – ಮೈಯುಳ್ಳವನು, ತಾನ್, ಆದನು. ಅತ್ಯಂತ – ಬಹಳ, ಶಾಂತಿಸ್ಥಿತಿಗೆ – ಸಮಾಧಾನಮಾಗಿರುವದಕ್ಕೆ, ಚಿತ್ತವಂಮನಸ್ಸನ್ನು, ಇತ್ತಂ – ಕೊಟ್ಟನು, ತನ್ಮುನಿ – ಆ ಮುನಿಯು, ಶಿವಪದ – ಶಿವಚರಣದಲ್ಲಿ ಸದ್ಭಕ್ತಿ, ಸಮೀಚೀನವಾದ ಜನವೆಂಬ ಸಂಪತ್ – ಭಾಗ್ಯದೊಡನೆ ಪ್ರಯುಕ್ತಂ – ಕೂಡಿದವನು.

**ತಾ ॥** ಆ ಮುನಿಯು ಶಿವಭಕ್ತಿಯುಳ್ಳವನಾಗಿ ತೀರ್ಥೋದಕದಲ್ಲಿ ಸ್ನಾನ ಮಾಡಿ ಶಿವಗೊಂಡು ಭಸ್ಮರುದ್ರಾಕ್ಷಗಳಂ ಧರಿಸಿ ಶಿವಮಂತ್ರಧ್ಯಾನದಿಂದ ಮಂಗಳಮೂರ್ತಿಯಾಗಿ ಶಾಂತಚಿತ್ತನಾಗಿರುವನು, ಯಥಾವಸ್ಥಿತಿ ಕಥನವು. ಇದನ್ನು ನೈಜಾಲಂಕಾರವೆನ್ನುವರ್ ॥ ೭೮ ॥

**ವ ॥** ಆಗಳಿಂತೆಸೆದಲ್ಲಿ ಪೆಸರ್ವೆತ್ತು ಮಿಸುವ ಸರಸಸರೋವರದ ಪರಿಸರದ ಸುರನಿಕರದಮುಖವಿದಾರಿತ ಸಾರಸಹಕಾರ ಖರ್ಜೂರ ಕದಳಿ ಜಂಬೂದ್ರಾಕ್ಷಾದಿ ಪರಿಪಕ್ವ ಫಳಕುಳಕ್ಷರಿತ ಮಧುರತರವಿಸರ ಪ್ರವಾಹದ ಪರಿಕಾಲ್ಗಳಿಂ ಬಳಸಿದ ಪರಮ ಕೈವಲ್ಯಕಲ್ಪತರು ವೆಂಬಂತೆಸೆದು ನಳಿನಳೀಕೆವೆತ್ತ ವಿಮಳಕೋಮಳದಳತ್ರಯ ವಿಳಸಿತಸರಳಶಾಖಾನಿಕಾಯ ಕಲಿತಬಿಲ್ವವೃಕ್ಷದ ಕೆಳಗೆ ನಿಲದುಂ ತಪಸ್ಸಮುಚಿತಸ್ಥಳಮಿದಪ್ಪುದಿಲ್ಲಿಯೇ ನಿಲ್ಲೆಂಬ ಗಗನ ಗಂಭೀರವಾಣಿಯಂ ಕೇಳ್ದು ಮಹೋತ್ಸವಂ ತಾಳ್ದು ತದ್ವೃಕ್ಷಮೂಲಮನಾಶ್ರಯಿಸಿನಿಂದ ॥

**ಟೀಕ ॥** ಆಗಳ್ – ತತ್ಕಾಲದಲ್ಲಿ, ಇಂತು – ಪೂರ್ವೋಕ್ತ ರೀತಿಯಿಂದ, ಎಸೆದು – ಶೋಭಿಸಿ, ಅಲ್ಲಿ – ಆ ವನದೊಳಗೆ, ಪೆಸರ್ವೆತ್ತು – ಪ್ರಖ್ಯಾತಿವಡೆದು, ಮಿಸುಪ – ಪ್ರಕಾಶಿಸುವ, ಸರಸ – ನೀರಿನಿಂದ ಕೂಡಿದ, ಸರೋವರದ – ಶ್ರೇಷ್ಠವಾದ ಕೊಳದ ಪರಿಸರದ ಬಳಿಯ, ಶುಕನಿಕರ – ಗಿಳಿವಿಂಡಿನ, ಮುಖ – ಕೊಕ್ಕಿನಿಂದ, ವಿದಾರಿತ – ಸೀಳಲ್ಪಟ್ಟ, ಸಾರಸ್ಥಿರಾಂಶವುಳ್ಳ, ಸಹಕಾರ – ಸೀಮಾವು, ಖರ್ಜೂರ – ಉತ್ತುತ್ತೆ, ಕದಳಿ – ಬಾಳೆ, ಜಂಬು ನೇರಳೆ, ದ್ರಾಕ್ಷಾ – ದ್ರಾಕ್ಷೆ, ಆದಿ – ಮೊದಲಾದ, ಪರಿಪಕ್ವ – ಮಾಗಿದ, ಫಲ – ಹಂಣುಗಳ, ಕುಲ – ಗುಂಪಿನಿಂದ – ಕ್ಷರಿತ – ಸೋರಿದ, ಮಧುತರ – ಬಹಳ ಸೀಯಾದ,

ರಸ – ದ್ರವದ, ವಿಸರ – ಸಮೂಹದ ಪ್ರವಾಹದಿ, ಹೊಳೆಯ ಪರಿಕಾಲ್ಗಳಿಂ – ಹರಿಯುವ ಹೊನಲುಗಳಿಂದ, ಬಳಸಿದ – ಸುತ್ತಿಕೊಂಡ, ಪರಮ – ಉತ್ಕೃಷ್ಟವಾದ, ಕೈವಲ್ಯ – ಒಂದೇ ಆದ ಅಥವಾ ಮೋಕ್ಷಪ್ರದವಾದ, ಕಲ್ಪತರುವು – ಸುರುದ್ರುಮದ, ಎಂಬಂತೆ ಎಸೆದು, ನಳಿನಳಿಕೆವೆತ್ತ – ಪ್ರಕಾಶವಂ ಪಡೆದ, ವಿಮಳ– ನಿರ್ದುಷ್ಟವಾದ, ಕೋಮಳ – ಮೃದುವಾದ, ದಳತ್ರಯ – ಮೂರೆಸಳ್ಗಳಿಂದ, ವಿಳಸಿತ – ವಿಲಾಸಗೊಂಡ, ಸರಳ – ನೆಟ್ಟಗಿರುವ, ಶಾಖಾ – ಕೊಂಬೆಗಳ, ನಿಕಾಯ – ಗುಂಪಿನಿಂದ, ಅಡಿಯಲ್ಲಿ, ನಿಲ್ವುದುಂ – ನಿಲ್ಲುತ್ತಲೂ, ಇದು – ಈ ತಾವು, ತಪಸ್ಸಮುಚಿತಸ್ಥಿಲಂ – ತಪಸ್ಸಿಗೆ ಯೋಗ್ಯವಾದ ಸ್ಥಲವು, ಅಪ್ಪುದು – ಆಗುವದು, ಇಲ್ಲಿಯೆ ನಿಲ್ಲು ಎಂಬ, ಗಗನ – ಆಕಾಶದ ಗಂಭೀರವಾಣಿಯಂ – ತಾತ್ಪರ್ಯಗರ್ಭವಾದ ಮಾತನ್ನು, ಕೇಳ್ದು, ಮಹೋತ್ಸವಂ – ಹೆಚ್ಚು ಸಂತೋಷವನ್ನು, ತಾಲವೃಕ್ಷಮೂಲಮಂ – ಆ ಗಿಡದಡಿಯನ್ನು ಆಶ್ರಯಿಸಿ ಸೇರಿ ನಿಂದು ॥ ೮ ॥

ಚಂ॥ ಅರೆಮುಗುಳ್ದಕ್ಷಿಗಳ್ಮಿಡುಕುಗುಂದದ ಚಂದುಟಿ ನಿಶ್ಚಲಾಂಗಮು ।
ರ್ವರೆಯೊಳೆ ತಳ್ತ ಕಾಲ್ದುದಿ ಸಮುಧೃತಬಾಹುಗೆ ಬದ್ಧ ಚಾಪ ಭಾ ॥
ಸುರತರ ಖಡ್ಗಮಗ್ಗದ ಕಠಾರಿಯಡಾಯುಧಮಾಳ್ದ । ಬೆನ್ನ ವಿ ।
ಸ್ಫುರಿತ ನಿಷಂಗಮೊಪ್ಪಿ ಪೊಸ ವೇಷದ ತಾಪಸನೊಪ್ಪಿ ತೋರಿದಂ ॥ ೭೯ ॥

**ಟೀಕ ॥** ಅರೆಮುಗುಳ್ದ – ಅರ್ಧ ಮುಚ್ಚಿಕೊಂಡ, ಅಕ್ಷಿಗಳ್ – ಕಣ್ಣುಗಳು ಮಿಡುಕು – ಚಲನವು, ಕುಂದದ – ಕಡೆಮೆಯಾಗದ, ಚಂದುಟಿ – ಕೆಂಪುತುಟಿಯು, ನಿಶ್ಚಲಾಂಗಂ – ಕದಲದ ಮೈ, ಉರ್ವರೆಯೊಳೆ – ನೆಲದಲ್ಲಿಯೆ, ತಳ್ತ – ವೂರಿದ, ಕಾಲ್ದುದಿ – ಕಾಲಿನ ಕೊನೆಯು, ಸಮುಧೃತಬಾಹುಗೆ – ಎತ್ತಿದ ತೋಳಿಗೆ, ಬದ್ಧ – ಕಟ್ಟಲ್ಪಟ್ಟ, ಚಾಪ – ಬಿಲ್ಲು, ಭಾಸುರತರ – ಬಹಳ ಬೆಳಗುವ, ಖಡ್ಗಂ – ಕತ್ತಿ, ಅಗ್ಗದ – ಪಟುವಾದ, ಕಠಾರಿ – ಬಾಕು, ಅಡಾಯುಧಂ – ಗುರಾಣಿಯನ್ನು, ಆಳ್ದ – ಪಡೆದ, ಬೆನ್ನ – ಹೆಗಲಿನಲ್ಲಿರುವ, ವಿಸ್ಫುರಿತ – ಬೆಳಗುವ, ನಿಷಂಗಂ – ಅಂಬಿನ ಹೊದರು, ಒಪ್ಪಿ – ಹೊಂದಿಕೆಯಾಗಿ ಪೊಸ ವೇಷದ – ನೂತನಾಲಂಕಾರದ ತಾಪಸಂ – ಋಷಿಯು, ಒಪ್ಪಿ – ಚನ್ನಾಗಿ, ತೋರಿದಂ – ಕಾಣಿಸಿದನು ॥

**ತಾ ॥** ಬಂದ ಆ ಮುನಿಯು ಲಕ್ಷ್ಯಾನುಸಂಧಾನುದಿಂದ ಅರೆಗಣ್ಮುಚ್ಚಿಕೊಂಡು ಮಂತ್ರಜಪದಿಂದ ಚಂದುಟಿಯಂ ಕದಲಿಸುತ್ತ ಮೈಯ್ಯಂ ಕದಲಿಸದೆ ಕಾಲ್ದುದಿಯಂ ನೆಲಕೂರಿಕೊಂಡು ಊರ್ಧ್ವಬಾಹುವಾಗಿ ಧನುರ್ಬಾಣಾಧ್ಯಾಯುಧಂಗಳಿಂ ಕೂಡಿ ಋಷಿಲಕ್ಷಣವು ವೀರಲಕ್ಷಣವು ಉಳ್ಳವನಾಗಿ ತೋರಿದನು ॥

(ಮುಂದುವರಿಯುವುದು)

# ಶೂನ್ಯಸಂಪಾದನೆಗಳು : ಮರುಚಿಂತನೆ ಮತ್ತು ಶೂನ್ಯಸಂಪಾದನೆ ಮತ್ತು ಪರಿಷ್ಕಾರಗಳು

ಡಾ. ಬಿ. ನಂಜುಂಡಸ್ವಾಮಿ

(ಮುಂದುವರಿದಿದೆ)

'ಕಿನ್ನರ ಬೊಮ್ಮಿತಂದೆಗಳು ಕಂಡು ಹರಿಷಿಸಿ (ಪರುಷಿಸಿ, ಸ್ಪರ್ಶಿಸಿ ಅಥವಾ ಪರೀಕ್ಷಿಸಿ) ನೋಡಲು ಅಂತರಂಗದ ಜ್ಞಾನಾಗ್ನಿಯೊಳ್ ಕಾಮನಂ ಸುಟ್ಟು ಭಸ್ಮವಂ ಮಾಡಿ' ಎಂಬುದನ್ನು ಮೊದಲ ಬಾರಿಗೆ ಒಂದು ಪುಟ್ಟ ಪ್ರಸಂಗವಾಗಿ ರೂಪಿಸಿದವನು ಹಲಗೆಯಾರ್ಯ. ಇದಕ್ಕಾಗಿ ಈತ ಕಿನ್ನರಿ ಬೊಮ್ಮಯ್ಯಗಳ ವಚನಗಳನ್ನು ಹಾಗೆಯೇ ಅಕ್ಕಮಹಾದೇವಿಯ ಆರು ವಚನಗಳನ್ನು ಬಳಸಿಕೊಂಡಿದ್ದಾನೆ. ಆರಂಭದಲ್ಲಿ ಮಹಾದೇವಯ್ಯನ ಗದ್ಯಕ್ಕೆ ತನ್ನ ಗದ್ಯವೊಂದಿಷ್ಟನ್ನು ಸೇರಿಸಿದ್ದಾನೆ. ಅದು ಹೀಗಿದೆ, ಕಲ್ಯಾಣದ ಹೊರವಲಯಕ್ಕೆ ತನ್ನ ಲೀಲಾವಿನೋದದಿಂ ಕಿನ್ನರ ಬ್ರಹ್ಮಯ್ಯಗಳು ಬಂದಿರಲಾ ಕಾಲದಲ್ಲಿ ಅಕ್ಕಗಳ ದಿಗಂಬರ ವೇಷವಂ ನಿರ್ವಾಣದ ನಿಲುಕಡೆಯಂ ದಿವ್ಯಸ್ವರೂಪಿನ ಲಾವಣ್ಯಮಂ ಕಂಡು ಕಿನ್ನರ ಬೊಮ್ಮಣ್ಣಗಳು ಈಕೆ ಲಿಂಗಾನುಭಾವಸಂಪನ್ನೆಯಾದರೆ ಗುರು ತಾಯೆಂದು ಶರಣೆಂಬೆನು, ಅಲ್ಲಾ ದೇಹಲಜ್ಜಾಭಿಮಾನವುಳ್ಳಡೆ ಸ್ತ್ರೀಯಾಗಿ ಕೈವಿಡಿವೆನು ಎಂದು ತನ್ನ ತಾ ನಿಶ್ಚೈಸಿ ಆ ಮಹಾದೇವಿಯಕ್ಕಗಳ ಒರೆದೊರೆದು ನೋಡುವ ಪ್ರಸ್ತಾಪದ ವಚನ ಎಂದು ಹನ್ನೊಂದು ಸಾಲಿನ ವಚನ ಬಳಸಿದ್ದಾನೆ. ಅವುಗಳಲ್ಲಿ ಮೊದಲ ನಾಲ್ಕು ಸಾಲುಗಳನ್ನು ಗೂಳೂರು ಸಿದ್ಧವೀರಣ್ಣ ಬಳಸಿಕೊಂಡಿದ್ದಾನೆ. ಸಿದ್ಧಲಿಂಗ ಯತಿಯಲ್ಲಿ ಈ ವಚನವೇ ಇಲ್ಲ. ಅದರ ಸಾರವನ್ನು ಗಮನಿಸಿ ಕಾಯದಲ್ಲಿ ಕಳವಳವೋ ಪ್ರಾಣದಲ್ಲಿ ಮಾಯೆಯೋ ಇರುವಾಗ ಹೀಗೆ ಬೆತ್ತಲಾಗುವುದು ಯಾವುದಕ್ಕೆ? ನನ್ನ ಇಷ್ಟದೈವವಾದ ಮಹಾಗುರು ತ್ರಿಪುರಾಂತಕನು ನಿನ್ನನ್ನು ಸಂಸಾರಿಯೆಂದುಕೊಳ್ಳುತ್ತಾನೆಯೇ ಹೊರತು ನೀನು ಸಜ್ಜನಳೆಂದು ಸ್ವೀಕರಿಸುವುದಿಲ್ಲ – ಇಷ್ಟು ಭಾಗವನ್ನಷ್ಟೆ ಸಿದ್ಧವೀರಣ್ಣ ಬಳಸಿಕೊಂಡ. ಆದರೆ ಹಲಗೆಯಾರ್ಯನಲ್ಲಿ ಈ ವಚನಭಾಗದಲ್ಲಿ ಮುಂದುವರೆಯುವುದು ಹೀಗೆ :

"ನಿನ್ನ ಸುಂದರವಾದ ರೂಪವನ್ನು ಕಂಡು ನನ್ನ ಕಣ್ಣುಗಳು ಅಲ್ಲೇ ನಾಟಿಹೋಗಿವೆ. ನಿನ್ನ ಲಾವಣ್ಯಶ್ರೀಯನ್ನು ಕಂಡು ಮನಸ್ಸು ಪೂರಾ ಸೋತುಹೋಗಿದೆ. ನಿನ್ನನ್ನು ಪ್ರೌಢಿಮೆಯಿಂದ ಸೇರಬೇಕೆಂಬುದು ನನ್ನ ಬಯಕೆ. ನೀನಂತೂ ನನಗೆ ಯಾವ ವೈರಾಗ್ಯ

ಭಾವವೂ ಇಲ್ಲದ ಬಟ್ಟಬರಿಯ ಹೆಂಗುಸಾಗಿಯೇ ಕಾಣುತ್ತಿದ್ದೀಯೆ. ನನ್ನ ಇಷ್ಟದೈವ ನನಗೊಡ್ಡಿದ ಮಾಯೆ ನೀನು ಎಂದು ತಿಳಿದು ನಿನ್ನನ್ನು ಸಮಸುಖಕೂಟದಲ್ಲಿ ಸೇರಿ ಗೆಲ್ಲಬೇಕೆಂದಿದ್ದೇನೆ. ನಿನ್ನ ಕೈವಿಡಿದು ಮದುವೆಯಾಗುವೆ.

ಈ ವಚನವಾಗುತ್ತಲೆ ಅದಕ್ಕೆ ಪ್ರತಿಕ್ರಿಯಿಸಿದ್ದು ಹೀಗೆ (ಅದು ಮೂರು ವಚನಗಳಲ್ಲಿದೆ).

ನೋಡುವುದಕ್ಕೆ ನಾನು ಚೆಲುವಾಗಿ ಕಾಣಿಸಿದ್ದೇನೆ ನಿಮಗೆ. ಆದ್ದರಿಂದಲೇ ನಾಚಿಕೆಯಿಲ್ಲದೆ ನನ್ನಲ್ಲಿಗೆ ಬಂದಿದ್ದೀರಿ. ನೀವು ಕೇಳಿಸಿಕೊಂಡ ಮಾತುಗಳು ನಿಮಗೆ ಪ್ರಿಯವಾಗಿ ಕಂಡು ನನ್ನ ಮೇಲೆ ಹುಚ್ಚಾಗಿ ಬಂದಿದ್ದೀರಿ. ನಾನೊಬ್ಬಳು ಸುಂದರವಾದ ಹೆಣ್ಣೆಂದು ಬಂದಿದ್ದೀರಿ. ಆದರೆ ನೀವು ದುಡುಕಿದ್ದೀರಿ. ನೀವೇನನ್ನು ನನ್ನಲ್ಲಿ ಬಯಸಿ ಬಂದಿದ್ದೀರೋ ಅದು ಮೂತ್ರ ಹಾಗೂ ಬಿಂದು ಸ್ರವಿಸುವ ನಾಳವೆಂದು ನೀವರಿಯಿರಿ. ಬುದ್ಧಿಗೇಡಿತನದಿಂದ ಪರಮಾರ್ಥಸುಖವನ್ನು ಧಿಕ್ಕರಿಸಿ ಏನು ಮಾಡುತ್ತಿದ್ದೇನೆಂಬುದನ್ನು ಅರಿಯದೆ, ನರಕ ಕಾರಣವಾದೀತು ಎಂಬುದನ್ನು ಅರಿಯದೆ ಹೇಸಿಗೆ ಬಿಟ್ಟು ಬಂದಿದ್ದೀರಿ. ಮಲ್ಲಿಕಾರ್ಜುನ ನನ್ನು ಬಿಟ್ಟು ಉಳಿದವರೆಲ್ಲ ನನಗೆ ಸಹೋದರರೆಂಬುದನ್ನು ನೀವು ತಿಳಿದುಕೊಳ್ಳಬೇಕು. ನಿಮ್ಮ ಕಣ್ಣಿಗೆ ತುಂಬಿದ ಮೊಲೆಗಳು ಆಕರ್ಷಕವಾಗಿ ಕಾಣುತ್ತವೆ. ಯೌವನದ ಚೆಲುವು ಆಕರ್ಷಿಸುತ್ತಿದೆ. ಆದರೆ ಅಣ್ಣಾ, ನಾನು ನೀವು ತಿಳಿದಂಥ ಹೆಣ್ಣಲ್ಲ! ಸೂಳೆಯೂ ಅಲ್ಲ. ಹಾಗಾದರೆ ನನ್ನ ಕಂಡು ಏನೆಂದುಕೊಂಡು ನನ್ನಲ್ಲಿಗೆ ಬಂದಿರಿ? ಚೆನ್ನಮಲ್ಲಿಕಾರ್ಜುನನನ್ನು ಬಿಟ್ಟರೆ ಉಳಿದವರೆಲ್ಲ ನನಗೆ ಸೋದರರು. ನಾನು ನಿಜವಾಗಿ ಪುಣ್ಯವಂತೆ, ಭಾಗ್ಯವಂತೆಯೂ ಆದವಳು. ಏಕೆಂದರೆ ಕಿನ್ನರನಂಥ ಸೋದರ ನನಗಿದ್ದಾನೆ. ಏಳೇಳು ಜನ್ಮಗಳಲ್ಲಿ ನನ್ನ ಬಳಗದವರು ಎಂದರೆ ಶಿವಭಕ್ತರೆ! ನನ್ನ ಗಂಡ ಆ ಚೆನ್ನಮಲ್ಲಿಕಾರ್ಜುನ ಒಬ್ಬನೆ."

ಹೀಗೆಂದು ಆಕೆ ನುಡಿದರೂ ಅವಳ ಸೌಂದರ್ಯಕ್ಕೆ ಮೋಹಗೊಂಡ ಕಿನ್ನರ ನಿನ್ನ ಮಾತಿಗೆ ನಾನು ಮೋಸ ಹೋಗುವವನಲ್ಲ. ನಿನ್ನನ್ನು ನಾನು ಬಿಡುವುದಿಲ್ಲ ಎಂದು ಮೇಲೆಬಿದ್ದು ಹಿಡಿದುಕೊಳ್ಳಲು ಹೋದನು. ಅಕ್ಕನಿಗೆ ದಿಗಿಲೇನೂ ಆಗಲಿಲ್ಲ. ನೀನು ಹಾಗೆಯೇ ಮುಂದುವರಿಯುವುದಾದರೆ ನನ್ನ ದೇಹವನ್ನೆ ನಿನಗೊಪ್ಪಿಸುವೆನು. ನಿನ್ನ ಮನ ಬಂದಂತೆ ಮಾಡು ಎಂದು ನಿಂತಳು. ಆತ ಆಗ ಸರ್ವಾಂಗ ಸ್ಥಾನ ಮಾನಗಳನ್ನು ಸ್ಪರುಷಿಸಿ ನೋಡಿದ. ಅಲ್ಲೆಲ್ಲೂ ದೇಹಾಭಿಮಾನಗಳಿರಲಿಲ್ಲ. ಅವನನ್ನು ಕಂಡು ಅಲ್ಲಿಗೆ ನಿಲ್ಲಬಹುದಾಗಿತ್ತು. ಆದರೆ ಆತ ಅವಳ ಯೋನಿಯಲ್ಲಿ ಬೆರಳನಿಟ್ಟು ಪರೀಕ್ಷಿಸಲು ಯತ್ನಿಸಿದನು (ಈ ಭಾಗ ಅಗತ್ಯವಿತ್ತೆ? ವಾಚ್ಯವಾಗಿ ಬಿಡಲಿಲ್ಲವೇ). ಆಗ ಅಲ್ಲಿ ಚಿದ್ಭಸ್ಮ ಉದುರಿತು. ಆಗ ನಡುಗಿ ಭೀತವಾಗಿ ತನ್ನ ಮನವನ್ನು ತಾನೆ ಸಂತೈಸಿಕೊಂಡು ಅಕ್ಕನ ಸರ್ವಾಂಗವೂ ಶಿವಮಯವಾಗಿದೆಯೆಂದೂ ಉದ್ಗರಿಸಿದ ವಚನಸಾರ ಹೀಗಿದೆ.

"ತಲೆಯನ್ನು ನೇವರಿಸಿ ನೋಡಿದರೆ ಅಲ್ಲಿ ಶಿವನ ಉಳುವೆಯೇ ಕಾಣುತ್ತದೆ. ಮುಖಕಮಲವನ್ನು ನೋಡಿದರೆ ಅಲ್ಲಿ ಶಿವನ ಮೂರ್ತಿಯೇ ಸ್ಥಿತವಾಗಿದೆ. ಕೊರಳನ್ನು

ಮುಟ್ಟಿದರೆ ನೀಲಕಂಠನ ಕೊರಳಿನ ಸ್ಪರ್ಶಾನುಭವ ತಾನೇ ತಾನಾಗುತ್ತಿದೆ. ತೋಳುಗಳನ್ನು ಮುಟ್ಟಿದರೆ ಶಿವನ ಅಪ್ಪುಗೆಯೇ ಇದೆ. ಅವಳ ಮೊಲೆಗಳನ್ನು ಮುಟ್ಟಿದರೆ ಇಷ್ಟಲಿಂಗ ಸ್ಪರ್ಶವಾದಂತೆ ಇದೆ. ಹೊಟ್ಟೆಯನ್ನು ಮುಟ್ಟಿದರೆ ಅಲ್ಲಿ ಬ್ರಹ್ಮಾಂಡವೇ ಇದೆ. ಗುಹ್ಯವನ್ನು ಮುಟ್ಟಿದರೆ ಅಲ್ಲೇನಿದೆ? ಕಾಮನೇ ಸುಟ್ಟು ಬೂದಿಯಾಗಿದ್ದಾನೆ. ನನ್ನ ಇಷ್ಟದೈವವೇ ನಾನು ಮಹಾದೇವಿಯಕ್ಕನ ಯೋಗ್ಯತೆಯ ಮಹತ್ತನ್ನು ಅರಿಯದ ಕೆಟ್ಟ ಆಸೆಯಿಂದ ಹಾಳಾದೆನು ಎಂದು ಬಿನ್ನವಿಸಲು ಅಕ್ಕ ಹೇಳಿದ್ದು ಹೀಗೆ;

ಶಿವ ಕಾಮನನ್ನು ಸುಟ್ಟು ಬೂದಿಯನ್ನು ಮೈತುಂಬ ಬಳಿದುಕೊಂಡು ಅವನನ್ನು ಮನಸಿಜನಾಗಿ ಮಾತ್ರ ಉಳಿಸಿದ. ನಾನಾದರೋ ಆ ಮನಸಿಜನನ್ನೂ ಸುಟ್ಟ ಬೂದಿಯಿದು – ಎಂದು ಆ ಬೂದಿಯನ್ನು ತೋರಿ ಹೇಳಿದ ಅಕ್ಕಮಹಾದೇವಿಯ ವಚನಸಾರ :

> ಶರೀರದ ತೊಡಕುಗಳನ್ನು ನಾನು ಲಿಂಗಮುಖದಿಂದ ಗೆದ್ದೆ
> ಮನಸ್ಸಿನ ತೊಡಕುಗಳನ್ನೆಲ್ಲ ಶಿವಜ್ಞಾನದ ಬೆಳಕಿನಲ್ಲಿ ಗೆದ್ದೆ
> ಜೀವದ ತೊಡಕುಗಳನ್ನು ಶಿವಜ್ಞಾನದಿಂದ ಗೆದ್ದೆ
> ಇಂದ್ರಿಯಗಳ ಕತ್ತಲನ್ನು ಬೆಳಕನ್ನು ಉಟ್ಟು (ಬೆಳಕಾಗಿ)
> ಯವ್ವನದಂತೆ ಭಾಸವಾಗುವ ನನ್ನ ಹೊರಮೈಯ ಹೊಳವು
> ನಿಮ್ಮ ಕಣ್ಣಿಗೆ ಈಗ ಕಾಮನನ್ನು ಸುಟ್ಟ ಬೂದಿಯಾಗಿದೆ ನೋಡಿ.
> ನನ್ನ ಚೆನ್ನಮಲ್ಲಿಕಾರ್ಜುನ ಕಾಮವನ್ನು ಸುಟ್ಟು ಮನಸಿಜ
> (ಮನ್ಮಥ)ನಾಗಿ ಉಳಿಸಿದ್ದರೆ ನಾನು ಆ ಮನ್ಮಥನ ಹಣೆಬರಹವನ್ನು
> ತೊಡೆದುಬಿಟ್ಟಿರುವೆನು.

ಈ ವಚನವನ್ನು ಗುಮ್ಮಳಾಪುರದ ಸಿದ್ಧಲಿಂಗ ಯತಿ ಹಾಗೂ ಗೂಳೂರು ಸಿದ್ಧವೀರಣ್ಣನವರೂ ಉಳಿಸಿಕೊಂಡಿದ್ದಾರೆ. ಆದರೆ ಇದಕ್ಕೆ ಹಿಂದೆ ಬಂದ ವಚನ (ಮಸ್ತಕನ ಮುಟ್ಟಿ ನೋಡಿದಡೆ...) ಹಲಗೆಯಾರ್ಯನಲ್ಲಿ ಮಾತ್ರವೇ ಇದೆ.

ಇಂತು ಮಹಾದೇವಿಯಕ್ಕಗಳ ಕಾಮನ ಸುಟ್ಟು ಭಸ್ಮನ ಗುಹ್ಯಸ್ಥಾನದಲ್ಲಿ ಸುರಿದು ತೋಱಲು.... ಎಂಬ ಭಾಗದಲ್ಲಿಗೆ ವಾಸ್ತವವಾಗಿ ಈ ಪ್ರಸಂಗ ಮುಗಿಯಬೇಕಿತ್ತು. ಆದರೆ ಮುಂದೆ ಕಿನ್ನರಯ್ಯನ ನಾಲ್ಕು ವಚನಗಳು ಮತ್ತೆ ಎರಡು ವಚನಗಳಿವೆ. ಈ ವಚನಗಳು ಸಂಪೂರ್ಣವಾಗಿ ಹಲಗೆಯಾರ್ಯನವೇ; ಉಳಿದ ಇಬ್ಬರಲ್ಲಿಯೂ ಈ ವಚನಗಳಿಲ್ಲ. ಕಿನ್ನರಯ್ಯನ ಮೂರು ವಚನಗಳು ಹಲಗೆಯಾರ್ಯ ಚಿತ್ರಿಸುವ ಕಿನ್ನರನ ಪಾತ್ರಕ್ಕೆ ಮೆರಗು ತರುವಂಥವು. ಆತನೇನೋ ಅಕ್ಕನನ್ನು ಕಂಡು ಸವಾಲೊಂದನ್ನು ತನ್ನ ಮುಂದಿರಿಸಿಕೊಂಡು ಬಿಟ್ಟ. ಅವಳು ನಿಜವಾಗಿಯೂ ವಿರಾಗಿಣಿಯಲ್ಲದಿದ್ದರೆ ಮದುವೆಯಾಗುವೆ, ಒಂದು ಪಕ್ಷ ಅವಳು ನಿಜವಾಗಿಯೇ ವಿರಾಗಿಣಿಯಾಗಿದ್ದರೆ ತಾಯಿಯೆಂದು ಗೌರವಿಸುವೆ ಎಂದಿದ್ದನಲ್ಲವೆ!

ಅಕ್ಕನ ವೈರಾಗ್ಯದ ಹಿರಿಮೆಯನ್ನು ಕಂಡ ಆತನ ಪ್ರತಿಕ್ರಿಯೆ ಮುಂದಿನ ಮೂರು ವಚನಗಳಲ್ಲಿದೆ.

ನನ್ನ ಇಂದ್ರಿಯಗಳು ವಿಷಮಯವಾಗಿಬಿಟ್ಟವಲ್ಲದೆ
ನನ್ನ ಚಟಗಳು ನನಗೆ ಹಗೆಗಳಾಗಿ ಹೋದವು.
ನನ್ನ ಕೆಟ್ಟಾಸೆ ನನ್ನ ಎದೆಯ ಗಾಯವಾಯಿತು.
ನನ್ನ ಕೋಪ ನನಗೇ ಬರಸಿಡಿಲಾಯಿತು.
ನನ್ನ ಸುಳ್ಳು ನನ್ನನ್ನೇ ಅಲಗಿನಂತೆ ಇರಿಯುತ್ತಿದೆ.
ನನ್ನ ಇಷ್ಟಲಿಂಗವೇ, ನೀನು ನನ್ನನ್ನು ಕೊಲ್ಲು!
ಸುಳ್ಳಿನ ಖಡ್ಗಕ್ಕೆ ನನ್ನ ಒಡಲು ಗುರಿಯಾಯಿತು.
ವಿಷದ ಬೆಂಕಿಗೆ ನನ್ನ ದೇಹವೆಂಬ ಕಾಡು ಸಿಕ್ಕಿಬಿದ್ದಿತು.
ನನ್ನಲ್ಲಿ ತಾಪ ಉಂಟಾಗಿಸಿತು, ಶಮದಮಾದಿಗಳೆಲ್ಲ ದೂರವಾದವು.
ಶರಣರು ನನ್ನೊಡೆಯರು ಎಂಬುದು ನನ್ನ ಲಕ್ಷ್ಯಕ್ಕೆ ಬರದೆ
ನಾನು ಹಾಳಾದೆನು. ಈ ದೇಹವೆಂಬುದು ನಿಮಗೆರಗಲಿಲ್ಲ
ಆದ್ದರಿಂದಲೇ ಅದರೊಳಗೆ ಏನೇನೋ ಹುಟ್ಟಿಬಿಟ್ಟಿತು.
ಏನೇನೊ ಭ್ರಮಗಳು ಕಾಡಿದವು ನೋಡುನೋಡುತ್ತಿದ್ದಂತೆ
ಎಲ್ಲ ಭ್ರಮೆಗಳು ಬಯಲಾದವು.
ಎಲ್ಲ ವಿಕಾರಗಳು ಮೈತುಂಬಿಕೊಂಡು ಬಂದವಲ್ಲ
ಎಂದು ಇಷ್ಟಲಿಂಗದಲ್ಲಿ ಮೊರೆಯಿಟ್ಟ.

ಈ ಮೂರು ವಚನಗಳು ಅದಕ್ಕೆ ಹಿಂದೆ ಕಿನ್ನರಯ್ಯನಲ್ಲಿದ್ದ ಸಮಾನಗುಣಗಳನ್ನು ಚಿತ್ರಿಸುವಾಗ, 'ಯೋನಿಯೊಳಂಗುಲಿ ಪ್ರವೇಶಮಂಮಾಡಿ' ಎಂಬ ಅಭಿವ್ಯಕ್ತಿಯನ್ನು ನಿವಾರಿಸಿಬಿಟ್ಟಿದ್ದರೆ ಈ ಪ್ರಸಂಗ ನಿಜವಾಗಿ ಹನ್ನೆರಡನೇ ಶತಮಾನದ ಒಬ್ಬ ಮಹಿಳೆ ಏಕಾಂಗಿಯಾಗಿ, ಅದೂ ಬತ್ತಲೆಯಾಗಿ, ಹೋದಾಗ ಅಂಥವರಿಗೆದುರಾಗುವ ಆತಂಕದ ಒಂದು ಚಿತ್ರವನ್ನು ನಮ್ಮೆದುರು ನಿಲ್ಲಿಸುತ್ತಿತ್ತು; ಇಷ್ಟಾದರೂ ಅದನ್ನೆದುರಿಸಿದ ಅಕ್ಕನ ನಿಲುವು ಹಲಗೆಯಾರ್ಯನಲ್ಲಿ ಹೆಮ್ಮೆ ಪಡುವಂಥದ್ದೇ ಆಗಿದೆ ಎಂಬುದನ್ನು ಮರೆಯಲು ಸಾಧ್ಯವೇ! ಇಷ್ಟೆಲ್ಲ ಪಶ್ಚಾತ್ತಾಪಕ್ಕೊಳಗಾದ ಕಿನ್ನರಯ್ಯನನ್ನು ಅಕ್ಕ ಸಂತೈಸಿದ ರೀತಿ ಗಮನಿಸಿ:

ಕಿನ್ನರಣ್ಣನವರೇ ನೀವೇನೂ ಹುಚ್ಚರಲ್ಲಾ!
ಇದು ನನಗಾಗಲಿ, ನಿಮಗಾಗಲಿ ಸಾಧ್ಯವೆ?
ಹದಿನಾಲ್ಕು ಲೋಕಗಳನ್ನೂ ಆವರಿಸಿದ ಕಾಮನ
ಬಾಣ ನನ್ನ ಮತ್ತೆ ನಿಮ್ಮನ್ನು ಬಿಟ್ಟಿತ್ತೇನು?

ಕುದುರೆ ಒಮ್ಮೆ ಮುಗ್ಗರಿಸಿದರೆ ಅದನ್ನು ಅಲ್ಲಿಯೆ ನಾಶ ಮಾಡುತ್ತಾರೆಯೇ? ಮುಂದೆ ಯುದ್ಧದಲ್ಲಿ ಅದರ ಸತ್ವಪರೀಕ್ಷೆ ಆಗಬೇಕಲ್ಲವೆ? ನೀವೂ ಅಷ್ಟೆ, ನಿಮ್ಮನ್ನು ಸಂತೈಸಿಕೊಳ್ಳಿ. ಕಾಮನೆಂಬ ಶತ್ರುವಿಗೆ ಹೆದರಿ ಬೆನ್ನುಕೊಟ್ಟು ಓಡಿಹೋಗಬೇಡಿ, ದೃಢವಾಗಿರಿ ಎಂದು ಸಂತೈಸಿದ ರೀತಿ ಸಹಜವಾದುದೇ. ಆದ್ದರಿಂದಲೇ ಈಗ ಹಲಗೆಯಾರ್ಯನ ಕಿನ್ನರನ ಪ್ರತಿಕ್ರಿಯೆ ಅವನ ಸಂಸ್ಕಾರಕ್ಕೆ ಉದಾಹರಣೆಯಾಗುವಂತೆ ಇದೆ.

ತಾಯಿ, ನೀನು ನಿಜವಾಗಿ ನನ್ನ ತಾಯಿ, ನಿನಗೆ ನಾನು ಶರಣು ಮಾಡುವೆನು! ನೀನು ಕರುಣೆಯ ಸಾಗರದ ನಿಧಿ ಆದವಳು. ದಯೆಯ ಆಕರವಾದವಳು! ನಿನ್ನ ಇಷ್ಟದೈವ ನನಗೊಡ್ಡಿದ ಪರೀಕ್ಷೆಯನ್ನು ಗೆಲ್ಲಲು ನೆರವಾದಿರಿ. ನನ್ನ ಬದುಕಿನ ಒಂದು ದೊಡ್ಡ ತೊಡಕು ಇದಾಗಿದೆ! ಇದನ್ನು ಗೆದ್ದು ಬಂದದ್ದು – ನಿಜವಾಗಿ ಹುಲಿಯ ಬಾಯಿಗೆ ಸಿಕ್ಕಿದವನು ಬದುಕುವಂಥ ಪವಾಡವೇ ಎಂದು ಶರಣಾದನು.

ಹೌದು, ಇದು ನಿಜ.

ಈಗ ಕಿನ್ನರಯ್ಯನ ಕಾಮಭಾವನೆಗಳು ಕರಗಿಹೋಗಿವೆ. ಇಂದ್ರಿಯಗಳು ಚಾಪಲ್ಯವನ್ನು ನೀಗಿಕೊಂಡಿವೆ. ನನ್ನ ನೀಚ ಭಾವನೆಗಳೆಲ್ಲ ಸತ್ತುಹೋದವು. ಹೃದಯದ ಕಸಕಲ್ಮಶಗಳು ತೊಳೆದುಹೋದವು ಮಹಾದೇವಿಯಕ್ಕನ ಕೃಪೆಯಿಂದ ಹಿಂದಿನ ಹುಟ್ಟು ಹೋಗಿ ಹೊಸ ಹುಟ್ಟು ಪಡೆದು ಶರಣನಾದೆನು ಎಂದು ತನ್ನ ಧನ್ಯತೆಯನ್ನು ಸೂಚಿಸಿದನು. ಹಲಗೆಯಾರ್ಯನು ಈ ಘಟನೆಯನ್ನು ಹೊಸದಾಗಿ ಸೇರಿಸಿ ವ್ಯಕ್ತಿಚಾಪಲ್ಯಕ್ಕೆ ಒಳಗಾಗುವ ಬಿಕ್ಕಟ್ಟನ್ನೂ, ಅಂಥ ಬಿಕ್ಕಟ್ಟನ್ನು ಗೆದ್ದ ವ್ಯಕ್ತಿಯ ಹೃದಯದಲ್ಲಿ ಪಶ್ಚಾತ್ತಾಪವಾಗುವ ತಳಮಳವನ್ನೂ ಸಹಜವೆಂಬಂತೆ ಚಿತ್ರಿಸಿದ್ದಾನೆ.

ಮಹದೇವಿಯಕ್ಕನ ಪಾತ್ರವನ್ನಂತೂ ಅಸಾಧಾರಣವಾಗಿಸಿದ್ದಾನೆ. ತುಂಬು ಜವ್ವನದಲ್ಲಿದ್ದರೂ ಯವ್ವನದ ಸೊಕ್ಕು, ಭ್ರಮೆ, ಕಾಮಾಸಕ್ತಿಗಳನ್ನು ಗೆದ್ದ ಸ್ಥಿತಿಯನ್ನು, ಅದಕ್ಕೂ ಮಿಗಿಲಾಗಿ ಎಂಥ ಚಪಲಚನ್ನಿಗನನ್ನೂ ತನ್ನ ಶರೀರದ ಮೇಲಿನ ನಿಯಂತ್ರಣ, ಇಂದ್ರಿಯಗಳ ಮೇಲಿನ ಪ್ರಭುತ್ವ, ಚೆನ್ನಮಲ್ಲಿಕಾರ್ಜುನನಲ್ಲಿರುವ ಅಚಲ ಪ್ರೇಮಗಳಿಂದ ಗೆಲ್ಲಬಲ್ಲ ಅವಳಲ್ಲಿ, ವಯಸ್ಸಿಗೆ ಮೀರಿದ ಕ್ಷಮಾಗುಣ ಹಾಗೂ ಮಾತೃವಾತ್ಸಲ್ಯದ ಪ್ರೇಮಧಾರೆಗಳು ಅಕ್ಕನ ಪಾತ್ರವನ್ನು ಅಸೀಮವಾಗಿಸುತ್ತವೆ. ಆದ್ದರಿಂದಲೆ ಈ ಪ್ರಸಂಗದಿಂದ ಸಿದ್ಧವೀರಣ್ಣ ಕೂಡ ಪ್ರಭಾವಿತನಾಗಿದ್ದಾನೆ. ಅತ್ಯಂತ ಸೊಗಸಾದ ಹಲಗೆಯಾರ್ಯನ ವಚನದ ಮೊದಲ ಸಾಲುಗಳನ್ನು, ಅನಂತರ ಕಿನ್ನರಯ್ಯನ ಮನಃಪರಿವರ್ತನೆಗೆ ಕಾರಣವಾದ 'ಎನ್ನಂತೆ ಪುಣ್ಯಗೆಯ್ದವರುಂಟೆ....?' ಎಂಬ ವಚನವನ್ನು, ಈ ಎಲ್ಲಕ್ಕೂ ಕಲಶವಿಟ್ಟಂತಿರುವ "ಅಂಗದ ಭಂಗವ ಲಿಂಗಮುಖದಲ್ಲಿ ಗೆಲಿದೆ" ಎಂಬ ವಚನವನ್ನು ಬಳಸಿಕೊಂಡ ರೀತಿ ಅಕ್ಕನ ಪ್ರಸಂಗವನ್ನು ಸುಂದರವಾಗಿಸಿದೆ ಮಾತ್ರವಲ್ಲ, ಅದು ಹಲಗೆಯಾರ್ಯನ ಕೃತಿಯಿಂದ ಸಿದ್ಧಲಿಂಗಯತಿ ಹಾಗೂ ಸಿದ್ಧವೀರಣ್ಣ ಇಬ್ಬರೂ ಪ್ರಭಾವಿತರಾಗಿರುವುದನ್ನು ಕೂಡ ಸೂಚಿಸುತ್ತದೆ. ಈ ಪ್ರಸಂಗದಲ್ಲಿ ಇನ್ನೂ ಹಲವಾರು ವಚನಗಳಿವೆ. ಹಲಗೆಯಾರ್ಯನಿಂದ ಸಿದ್ಧವೀರಣ್ಣ 15 ವಚನಗಳನ್ನು ಬಳಸಿಕೊಂಡಿದ್ದಾನೆ. ಹಲಗೆಯಾರ್ಯನನ್ನೇ ಗೂಳೂರು ಸಿದ್ಧವೀರಣ್ಣನೂ ತನ್ನ ಪರಿಷ್ಕರಣಕ್ಕೆ ಬಳಸಿಕೊಂಡಿರುವು ದೆಂಬುದನ್ನು ಸೂಚಿಸುತ್ತದೆ. ಅಷ್ಟೇ ಅಲ್ಲ, ಸಿದ್ಧವೀರಣ್ಣ ಹಲಗೆಯಾರ್ಯನ ಕೃತಿಯನ್ನು ಆಧಾರವಾಗಿಸಿಕೊಳ್ಳದಿದ್ದರೆ ಸಿದ್ಧಲಿಂಗ ಯತಿಯನ್ನು ತನ್ನ ಕೃತಿ ಪರಿಷ್ಕರಣಕ್ಕೆ ಆಧಾರವೆಂದಿರು ವುದನ್ನು ಗಮನಿಸಿದರೆ

ಈ ಮೇಲಿನ ಎಲ್ಲ ವಚನಗಳೂ ಆತನಲ್ಲಿಲ್ಲ ಎಂಬುದು ಹಲಗೆಯಾರ್ಯನಿಂದಲೆ ಬಂದುವೆಂಬುದನ್ನು ಖಚಿತಪಡಿಸುತ್ತವೆ. ಇಷ್ಟಲ್ಲದೆ ಹಲಗೆಯಾರ್ಯನಿಂದ ಸಿದ್ಧಲಿಂಗ ಯತಿ ಬಳಸಿಕೊಂಡಿರುವ ಹಲವಾರು ವಚನಗಳೂ ಇವೆ.

ಅಷ್ಟೆಲ್ಲ ವಚನಗಳನ್ನು ಉಲ್ಲೇಖಿಸಿರುವುದು ಹಲಗೆಯಾರ್ಯನ ಶೂನ್ಯಸಂಪಾದನೆ ಅನಂತರ ಬಂದ ಸಿದ್ಧಲಿಂಗ ಯತಿ ಹಾಗೂ ಸಿದ್ಧವೀರಣ್ಣರ ಪರಿಷ್ಕರಣದ ಕೃತಿಗಳಿಗೂ ಇರುವ ಸಂಬಂಧ ಋಣಗಳನ್ನು ಸೂಚಿಸುತ್ತದೆ. ಮೊದಲ ಬಾರಿಗೆ ಕಲ್ಯಾಣವನ್ನು ಬಿಟ್ಟ ಅಕ್ಕ ಶ್ರೀಶೈಲ ಮಲ್ಲಿಕಾರ್ಜುನನಲ್ಲಿ ಒಂದಾಗುವವರೆಗೆ ಆ ಪ್ರಸಂಗವನ್ನು ವಿಸ್ತರಿಸಿದವನು ಹಲಗೆಯಾರ್ಯ. ಗುಮ್ಮಳಾಪುರದ ಸಿದ್ಧಲಿಂಗಯತಿ ಹಾಗೂ ಗೂಳೂರು ಸಿದ್ಧವೀರಣ್ಣರಲ್ಲೂ ಈ ಪ್ರಸಂಗ ಹಲಗೆಯಾರ್ಯನನ್ನೇ ಅನುಸರಿಸಿದೆಯೆಂಬುದನ್ನು ತಿಳಿದಾಗ ಕೆಂಚವೀರಣ್ಣನ ಪರಿಷ್ಕರಣವೂ ಒಂದಿತ್ತು ಎಂಬುದನ್ನು ಹೇಗೆ ನಂಬುವುದು? ಸಾಲದುದಕ್ಕೆ ಕೆಂಚವೀರಣ್ಣ ತನ್ನ ಕೃತಿಯ 1700 ವಚನಗಳಲ್ಲಿ ಹೇಳಿರುವುದು ಕೇವಲ ಸಿದ್ಧರಾಮನ ದೀಕ್ಷೆಯೊಂದೇ ಅಲ್ಲವೆ?

ಮಹಾದೇವಿಯಕ್ಕನ ಪ್ರಸಂಗದ ಕೊನೆಗೆ ಹಲಗೆಯಾರ್ಯ ಕರ್ಮಸಂಪಾದನೆ, ಜ್ಞಾನಸಂಪಾದನೆ ಹಾಗೂ ಮಿಶ್ರಾರ್ಪಣಗಳ ಶುದ್ಧ ತಾತ್ವಿಕಾಂಶಗಳ ವಿಸ್ತಾರವಾದ ಗದ್ಯಭಾಗಗಳು ಇವೆ. ಬಹುಶಃ ಹಲಗೆಯಾರ್ಯ ಶಿವಗಣಪ್ರಸಾದಿಯ ಕೃತಿಯ ಕೊನೆಗೆ ಇರುವ "ಇದು ಪರಮಗುರು ವೀರಶೈವ ಸಿದ್ಧಾಂತ ತತ್ತ್ವಜ್ಞಾನ" ಎಂಬ ಮಾತುಗಳಿಂದ ಪ್ರಭಾವಿತನಾಗಿ ಈ ವೀರಶೈವ ಧರ್ಮಾಚಾರ ಸಂಹಿತೆಗೆ ಸಂಬಂಧಿಸಿದ ವಿವರಗಳನ್ನು ಸೇರಿಸಿರಬೇಕು. ಹಲಗೆಯಾರ್ಯ ಮಹತ್ವದ ಒಂದು ಹೊಸ ಪ್ರಸಂಗವನ್ನೂ ಸೇರಿಸಿದ್ದಾನೆ. ಅದು ನುಲಿಯ ಚಂದಯ್ಯನ ಪ್ರಸಂಗ. ಈ ಪ್ರಸಂಗದ ವಿಸ್ತಾರವಾದ ಪರಿಚಯವನ್ನು ಪ್ರೊ. ಜಿ.ಎಸ್. ಸಿದ್ಧಲಿಂಗಯ್ಯನವರು ಮಾಡಿಕೊಟ್ಟಿದ್ದಾರೆ. ಲೇಖನವಿಸ್ತಾರದ ದೃಷ್ಟಿಯಿಂದ ಇಲ್ಲಿ ನುಲಿಯ ಚಂದಯ್ಯನ ಪ್ರಸಂಗದ ಬಗ್ಗೆ ವಿವರಣೆ ನೀಡಿಲ್ಲ. ದಯಮಾಡಿ ಮೂಲ ಕೃತಿಯನ್ನೇ ಓದಬೇಕು ಎಂಬ ನಮ್ರ ವಿನಂತಿ.

ಪ್ರೊ. ಜಿ.ಎಸ್. ಸಿದ್ಧಲಿಂಗಯ್ಯನವರು ಶಿವಗಣಪ್ರಸಾದಿ ಮಹಾದೇವಯ್ಯನ ಶೂನ್ಯಸಂಪಾದನೆಯಿಂದ ಪ್ರೇರಣೆ ಪಡೆದು, ಮೂರು ಪರಿಷ್ಕರಣಗಳು ಯಾವ ರೀತಿ ಬದಲಾವಣೆ ಹೊಂದಿದೆ, ಯಾವ ಯಾವ ಪರಿಷ್ಕರಣಗಳಲ್ಲಿ ಯಾವ ಪ್ರಸಂಗ ವಿಸ್ತಾರವಾಯಿತು, ಹೊಸದಾಗಿ ಸೇರಿತು ಆಯಿತು ಮುಂತಾದ ಎಲ್ಲಾ ವಿಷಯಗಳನ್ನು ವಿವರವಾಗಿ, ಒಂದರನಂತರ ಒಂದನ್ನು, ನಿರೂಪಿಸಿದ್ದಾರೆ. ಈ ಚರ್ಚೆಯಿಂದ ಶೂನ್ಯಸಂಪಾದನೆ ಕೃತಿಗಳು ಪರಸ್ಪರ ಹೇಗೆ ಒಂದಕ್ಕೊಂದು ಪೂರಕವಾಗಿವೆ ಎಂಬ ವಿಷಯ ಸ್ಪಷ್ಟವಾಗುತ್ತದೆ. "ಅನುಭವ ಮಂಟಪ"ದ ಹೆಸರು ಹಲಗೆಯಾರ್ಯನ ಶೂನ್ಯಸಂಪಾದನೆಯಲ್ಲಿ, ಗುಮ್ಮಳಾಪುರದ ಸಿದ್ಧಲಿಂಗಯ್ಯನ ಶೂನ್ಯಸಂಪಾದನೆಯಲ್ಲಿ,

ಗೂಳೂರು ಸಿದ್ಧವೀರಣ್ಣನ ಶೂನ್ಯಸಂಪಾದನೆಯಲ್ಲಿ ಬಂದಿರುವುದನ್ನು ಉದಾಹರಣೆ ಸಮೇತ ಉಲ್ಲೇಖಿಸಿದ್ದಾರೆ. ಅಲ್ಲದೆ 'ಅನುಭವ ಮಂಟಪ'ದ ಉಲ್ಲೇಖ ಶಿವಗಣಪ್ರಸಾದಿ ಮಹಾದೇವಯ್ಯನಲ್ಲಿ ಇಲ್ಲದೆ ಇರುವುದನ್ನು ಸ್ಪಷ್ಟವಾಗಿ ತಿಳಿಸಿದ್ದಾರೆ.

ಪ್ರೊ. ಜಿ.ಎಸ್. ಸಿದ್ಧಲಿಂಗಯ್ಯನವರು ಒಟ್ಟಾಗಿ "ಪರಿಷ್ಕರಣಗಳು ಕೇವಲ ಪರಿಷ್ಕರಣಗಳು ಮಾತ್ರ ಅಲ್ಲ, ಒಂದರ್ಥದಲ್ಲಿ ಮೂಲ ಶೂನ್ಯಸಂಪಾದನೆಯ ದರ್ಶನವನ್ನು ಮತ್ತಷ್ಟು ಮೈತುಂಬಿಕೊಳ್ಳುವಂತೆ ಮಾಡಿವೆ" ಎಂದಿದ್ದಾರೆ. ಕೃತಿಯ ಅಂತ್ಯದಲ್ಲಿ "ಈ ಪರಿಷ್ಕರಣಗಳ ಮೂಲ ಕಾರಣ ಮೊದಲನೆಯ ಶೂನ್ಯಸಂಪಾದನಕಾರನಾದ ಮಹಾದೇವಯ್ಯನೇ ತನ್ನ ಕೃತಿಯ ಕೊನೆಗೆ ಹೇಳಿರುವ ಮಾತು: "ಇಲ್ಲಿ ವಚನ ಕ್ರಮ ಸೇರುವೆ ತಪ್ಪುಳ್ಳಡೆ ನಿಮ್ಮ ಪರಮಾನುಭಾವ ಜ್ಞಾನದಿಂ ತಿರ್ದುವುದು." ಮೊದಲು ಹಲಗೆಯಾರ್ಯ ತನ್ನ ಪರಮಾನುಭಾವ ಜ್ಞಾನದಿಂದ ತಿದ್ದುವಾಗ ಮೊದಲ ಬಾರಿಗೆ ನುಲಿಯ ಚಂದಯ್ಯನ ಪ್ರಸಂಗವನ್ನು ಸೇರಿಸಿದ. ಗ್ರಂಥಸಂಪಾದನಶಾಸ್ತ್ರದ ರೀತಿ ಇದು ಮೂಲಕ್ಕೆ ಸೇರಿದ ಪ್ರಕ್ಷಿಪ್ತ ಭಾಗವಾಗಿ ಉಳಿದಿಲ್ಲ. ಮಹಾದೇವಯ್ಯ ಕಾಣಬಯಸಿದ ಹನ್ನೆರಡನೆಯ ಶತಮಾನದ ಶರಣರ ಸಾಧನೆಗಳಲ್ಲಿ ಒಂದು ಮಹತ್ತರ ಮೌಲ್ಯವನ್ನು ಮೂಲ ಕೃತಿಗೆ ಸೇರಿಸಿದ ಹೆಗ್ಗಳಿಕೆ ಇಲ್ಲಿನದು.

ಅನಂತರ ಮಹಾದೇವಯ್ಯನಲ್ಲಿ ಆಶಯಮಾತ್ರವಾಗಿದ್ದ ಕಿನ್ನರಿ ಬೊಮ್ಮಯ್ಯ ಅಕ್ಕನನ್ನು ಪರೀಕ್ಷಿಸಿದ ಸಂದರ್ಭವನ್ನು ಒಂದು ಪ್ರಸಂಗವಾಗಿ ರೂಪಿಸಿದ ಮರುಳುಶಂಕರ ದೇವರ 23 ವಚನಗಳನ್ನು ಹೊಸದಾಗಿ ಸೇರಿಸಿದ. ಅಕ್ಕನ ಪ್ರಸಂಗವನ್ನು ಶ್ರೀಶೈಲದ ಮಲ್ಲಿಕಾರ್ಜುನನಲ್ಲಿ ಒಳಗಾಗುವವರೆಗೂ ಬಿತ್ತರಿಸಿದ. ಮುಂದಿನ ಪರಿಷ್ಕರಣಕಾರನಾದ ಸಿದ್ಧಲಿಂಗ ಯತಿ ಅಲ್ಲಮನ ಶಾಪಪ್ರಸಂಗವನ್ನು ಪೂರಾ ಕೈಬಿಟ್ಟು ಆಯ್ದಕ್ಕಿ ಲಕ್ಕಮ್ಮನವರ ಪ್ರಸಂಗವನ್ನು ಸೇರಿಸಿದ.

ಇವುಗಳಾವುವೂ ಪ್ರಕ್ಷಿಪ್ತಗಳು ಅನ್ನಿಸಿಕೊಳ್ಳಲಿಲ್ಲ. ಬದಲಿಗೆ, ಇವು ಮೂಲ ಶೂನ್ಯಸಂಪಾದನೆಯ ದರ್ಶನವನ್ನು ಇನ್ನಷ್ಟು ಢಾಳಾಗಿ ಹೊಳೆಯುವಂತೆ ಮಾಡಿದವು. ಮರುಳಶಂಕರದೇವ, ಅಕ್ಕ ಮೊದಲಾದ ಪ್ರಸಂಗಗಳನ್ನು ಇನ್ನಷ್ಟು ಅರ್ಥಪೂರ್ಣವೂ ಉಚಿತವೂ ಆಗುವಂತೆ ಮಾಡಿದ. ಗೋರಕ್ಷನ ಪ್ರಸಂಗದಲ್ಲಿ ಪ್ರಥಮತಃ ಗೋರಕ್ಷ ಮತ್ತು ಪ್ರಭುಗಳ ನಡುವೆ ನಡೆದ ಸಂವಾದ ರೂಪವನ್ನು ವಿವರಿಸಿದೆ.

ಈ ಯಾವ ಅಂಶಗಳೂ ಮೂಲ ಶೂನ್ಯಸಂಪಾದನೆಗೆ ಸೇರಿದ ಪ್ರಕ್ಷಿಪ್ತ ಭಾಗಗಳಾಗಲಿಲ್ಲ. ಅದರ ಆಶಯವನ್ನು ಹೆಚ್ಚು ಮೈತುಂಬಿಕೊಳ್ಳುವಂತೆ ಮಾಡಿದವು. ಸಿದ್ಧವೀರಣ್ಣನಂತೂ ಮೊದಲ ಬಾರಿಗೆ ಪ್ರವಾಹ ರೂಪದಲ್ಲಿನ ಮಹಾದೇವಯ್ಯನ ಮೂಲ ಕೃತಿಯನ್ನು ಪ್ರಜ್ಞಾಪೂರ್ವಕ ವಿಭಾಗಗಳಾಗಿ ವರ್ಗೀಕರಿಸಿ ಪ್ರತಿಯೊಂದು ಭಾಗದ ಮೊದಲಲ್ಲಿ ಕಂದಪದ್ಯವೊಂದರಿಂದ ಆ ಭಾಗದ ವಸ್ತುವನ್ನು ತಿಳಿಸಿ ಕೊನೆಗೆ ಅವಕ್ಕೆ ಗದ್ಯದ ವಿವರಣೆ

ನೀಡುತ್ತ ಮುಗಿಸುವ ಕ್ರಮವನ್ನು ಅನುಸರಿಸಿದ. ಒಂದರ್ಥದಲ್ಲಿ ಮೂಲ ಕೃತಿಯ ಶಿಲ್ಪಕ್ಕೆ ಒಂದು ಚೌಕಟ್ಟನ್ನು ಒದಗಿಸಿದ ಎಂದೇ ಹೇಳಬೇಕು.

ಗೂಳೂರು ಸಿದ್ಧವೀರಣ್ಣೊಡೆಯನವರು ಮೋಳಿಗೆ ಮಹಾದೇವಿ ಮತ್ತು ಮೋಳಿಗೆ ಮಾರಯ್ಯ, ಘಟ್ಟಿವಾಳಯ್ಯ, ನೀಲಲೋಚನೆಯಮ್ಮಗಳ ಲಿಂಗೈಕ್ಯ ಪ್ರಸಂಗಗಳನ್ನು ಹೆಚ್ಚುವರಿಯಾಗಿ ಸೇರಿಸಿದ. ಹೀಗೆ ಸೇರಿಸಿದ ಮೂವರು ಪರಿಷ್ಕರಣಕಾರರ ಪ್ರಸಂಗಗಳು ಕುಮಾರವ್ಯಾಸನ ಭಾರತದೊಳಗೆ ಅಜ್ಞಾತ ಕವಿಗಳು ಪ್ರಕ್ಷಿಪ್ತವಾಗಿ ಸೇರಿಸಿದ ಪ್ರಸಂಗಗಳಾಗದೆ ಜ್ಞಾತಪ್ರತಿಭೆಗಳು ರೂಪಿಸಿದ ಅರ್ಥಪೂರ್ಣ ಪ್ರಸಂಗಗಳಾಗಿ ಮೂಲದ ಸೊಗಸನ್ನುಇನ್ನಷ್ಟು ವೃದ್ಧಿಪಡಿಸಿವೆ.

ಒಂದರ್ಥದಲ್ಲಿ ಈ ಪರಿಷ್ಕರಣಗಳು ಮೂಲಕೃತಿಯ ದರ್ಶನದಿಂದಲೇ ರೂಪು ತಳೆದಂತೆ ಇರುವುದು, ಇಲ್ಲೆಲ್ಲಾ ಪರಿಷ್ಕರಣಕಾರರು ಅಜ್ಞಾತರಾಗದೆ ಉಳಿದಿರುವುದು ಈ ಪರಿಷ್ಕರಣಗಳ ವೈಶಿಷ್ಟ್ಯ. ಒಂದರ್ಥದಲ್ಲಿ ಶೂನ್ಯಸಂಪಾದನೆಯ ಯಾವ ಒಂದು ಪಠ್ಯವೂ – ಪರಿಷ್ಕರಣಗಳೂ ಸೇರಿ – ಅಂತಿಮವಾದುದಲ್ಲ. ಅನಂತರಬಂದ ಮೂರು ಪರಿಷ್ಕರಣಗಳೂ ಸ್ವತಂತ್ರ ಅಧ್ಯಯನಯೋಗ್ಯವಾಗುವ ಅರ್ಹತೆ ಪಡೆದಿರುವುದು ಈ ಪರಿಷ್ಕರಣಗಳು ಮತ್ತು ಮೂಲದ ವೈಶಿಷ್ಟ್ಯ ಎನ್ನಬೇಕು ಎಂದಿದ್ದಾರೆ.

ಪ್ರೊ. ಜಿ.ಎಸ್. ಸಿದ್ಧಲಿಂಗಯ್ಯನವರು ತಲಸ್ಪರ್ಶಿಯಾಗಿ ವಚನ ಸಾಹಿತ್ಯವನ್ನು ಅಧ್ಯಯನ ಮಾಡಿದವರು. ಅದರ ಮುಂದುವರೆದ ಭಾಗವಂತೆ ಶೂನ್ಯಸಂಪಾದನೆ ಎಲ್ಲಾ ಪರಿಷ್ಕರಣಗಳನ್ನು ಸೂಕ್ಷ್ಮವಾಗಿ ಅಧ್ಯಯನ ಮಾಡುವಲ್ಲಿ ಯಶಸ್ವಿಯಾಗಿದ್ದಾರೆ. **"ಶೂನ್ಯಸಂಪಾದನೆ"** ಕುರಿತು ವಿಸ್ತಾರವಾದ ಒಂದು ಬೃಹತ್ ಗ್ರಂಥವನ್ನು ರಚಿಸಬೇಕು ಎನ್ನುತ್ತಿದ್ದ ಮಹಾಚೇತನ 7.5.2025ರಂದು ಮಹಾಲಿಂಗದಲ್ಲಿ ಲೀನವಾಯಿತು.

□

ಅಂಗಕ್ಕಾಚಾರ ಮನಕ್ಕೆ ಜ್ಞಾನ ಸಮರಸಾದ್ವೈತವಾದ ಮತ್ತೆ
ಪುನರಪಿ ಪುನರ್ದೀಕ್ಷೆಯುಂಟೆ ?
ಗರುಡಿಯಲ್ಲಿ ಕೋಲಲ್ಲದೆ, ಕಾಳಗದಲ್ಲಿ ಉಂಟೆ ಕೋಲು ?
ಭವಿಗೆ ಮೇಲುವ್ರತ ಪುನರ್ದೀಕ್ಷೆಯಲ್ಲದೆ, ಭಕ್ತರಿಗುಂಟೆ ?
ವ್ರತತಪ್ಪಿ ಅನುಗ್ರಹವಿಡಿದ ನರಕಿಗಳಿಗೆ ಮುಕ್ತಿ ಇಲ್ಲ ಎಂದೆ
ಅಮುಗೇಶ್ವರಲಿಂಗದಲ್ಲಿ.

**– ಅಮುಗೆ ರಾಯಮ್ಮ**

# ವಚನ ಧರ್ಮಸಾರ

**ಡಾ. ಆರ್.ಬಿ. ಚಿಲುಮಿ**

ವಚನವೆಂದರೆ ಮಾತು. ಮಾತೇ ಮುತ್ತು. ಮಾತೆಂಬುದು ಜ್ಯೋತಿರ್ಲಿಂಗ, ಮಾತು ಬಲ್ಲವ ಮಾಣಿಕ್ಯ ತಂದ. ವಚನವೆಂದರೆ ಮಾತು ಕೊಡು, ವಚನ ಕೊಡು, ಪ್ರತಿಜ್ಞೆಮಾಡು, ಮಾತಿಗೆ ತಕ್ಕಂತೆ ನಡೆ ಅದೇ ಜನ್ಮ ಕಡೆ. ನುಡಿಯು ಮುತ್ತಿನ ಹಾರ, ಸ್ಫಟಿಕದ ಸಲಾಕೆಯಂತಿರಬೇಕೆಂದು ನುಡಿದು, ನಡೆದು ತೋರಿದ ಸ್ವತಂತ್ರ ಧೀರ ಶರಣರು. ಜನರಾಡುವ ನುಡಿಗಳಲ್ಲಿಯೇ ತಮ್ಮ ಮಥನದಿಂದ ಹೊರಹೊಮ್ಮಿದ ವಿಚಾರಧಾರೆಗಳೇ ವಚನಗಳಾದವು. ಬಸವಾದಿ ಶರಣರು ದೇವರ ಜೊತೆ ಸಂಸ್ಕೃತದಲ್ಲಿ ಮಾತನಾಡಿದವರಲ್ಲ. ಅವರು ದೇವರ ಜೊತೆ ಕನ್ನಡನಾಡಿನ ನೆಲದ ಭಾಷೆಯಲ್ಲಿಯೇ ಮಾತನಾಡಿದವರು. ಕನ್ನಡ ನಾಡಿನ ಭಾಷೆಯನ್ನು ಉಳಿಸಿ ಬೆಳೆಸಿದವರು. 12ನೆಯ ಶತಮಾನದ ವಚನಕಾರರ ವಚನಗಳು ಬೇರೆ ಭಾಷೆಗಳಿಗೆ ಸಮರ್ಥವಾಗಿ, ಸಮರ್ಪಕವಾಗಿ ಅನುವಾದಿಸಲು ಸಾಧ್ಯವಾಗದ ಸಾಹಿತ್ಯವೆಂದರೆ ಅದು ವಚನ ಸಾಹಿತ್ಯ. ಜಾಗತಿಕವಾಗಿ ಉಳಿದುಕೊಳ್ಳುವ 20 ಭಾಷೆಗಳಲ್ಲಿ ಕನ್ನಡವೂ ಉಳಿದುಕೊಳ್ಳುವುದಾದಲ್ಲಿ ಅದಕ್ಕೆ ಕಾರಣ ವಚನ ಸಾಹಿತ್ಯ ಎನ್ನುವುದು ನಿಸ್ಸಂಶಯ. ಜಗತ್ತನ್ನೇ ಮೆಚ್ಚಿಸಬಹುದಾದ ಒಂದು ಅದ್ಭುತ ಶಕ್ತಿ ಕರ್ನಾಟಕದಲ್ಲಿ ಬೆಳಗಿ ಬಾಳಿದೆಯೆಂದ ಮೇಲೆ ಕನ್ನಡ ಕುಲವು ಧನ್ಯವೆಂದೇ ಹೇಳಲೇಬೇಕು. ಅದಕ್ಕೇ ವರಕವಿ ಡಾ. ದ.ರಾ. ಬೇಂದ್ರೆಯವರು –

> ಒಂದೇ ಒಂದೇ ಕರ್ನಾಟಕ ಒಂದೇ
> ಇಂದೇ ಮುಂದೇ ಎಂದೇ ಕರ್ನಾಟಕ ಒಂದೇ
> ಜಗದೇಳಿಗೆಯಾಗುವುದಿಂದೇ ಕರ್ನಾಟಕದಿಂದೇ

ಎಂದಿರುವುದು ಗಮನಾರ್ಹ. ವಿಶ್ವದ ತುಂಬೆಲ್ಲ ಕನ್ನಡಿಗರಿದ್ದಾರೆ, ಕನ್ನಡದ ಕಂಪನ್ನು ದೇಶವಿದೇಶಗಳಲ್ಲಿ ಪಸರಿಸುತ್ತಿದ್ದಾರೆ ಎಂಬುದಕ್ಕೆ ಪ್ರಸ್ತುತ ವಚನಸಾಹಿತ್ಯವೇ ನಿದರ್ಶನ. ಬಸವಣ್ಣನವರು ತಮ್ಮ ಘನವಾದ ವ್ಯಕ್ತಿತ್ವದಿಂದ ವಿಶ್ವವ್ಯಾಪಕವಾಗಿ ಬೆಳೆದು ನಿಂತವರು. ತಾವು ಕಟ್ಟಿದ ಲಿಂಗಾಯತ ಧರ್ಮವನ್ನು ಹಾಗೂ ಕನ್ನಡ ಭಾಷೆಯನ್ನು ಉಳಿಸಿ ಬೆಳೆಸಿದವರು ಎಂಬುದು ಸ್ಮರಣೀಯ.

12ನೆಯ ಶತಮಾನದಲ್ಲಿ ಕರ್ನಾಟಕದಲ್ಲಿ ನಡೆದ ಸಾಮಾಜಿಕ ಧಾರ್ಮಿಕ ಆಂದೋಲನ (ಚಳವಳಿ) ನಮ್ಮ ನಾಡಿನ ಇತಿಹಾಸದಲ್ಲಿಯೇ ಒಂದು ಮೈಲಿಗಲ್ಲಾಗಿದೆ. ಬಸವಾದಿ ಪ್ರಮಥರ

ನೇತೃತ್ವದಲ್ಲಿ ನಡೆದ ಈ ಆಂದೋಲನ ಸಮಾಜದಲ್ಲಿಯ ಅಜ್ಞಾನ, ಅಸಮಾನತೆಗಳನ್ನು ಕಿತ್ತೊಗೆಯುವ ಸತತ ಸಾಧನೆಯ ಜೊತೆಗೆ ತನು-ಮನ-ಧನವನ್ನು ಸವೆಸಿ ಮಾನವಕಲ್ಯಾಣಕ್ಕಾಗಿ ಶ್ರಮಿಸಿತು. ಮಾನವನ ಏಳ್ಗೆಗೆ ಅನೇಕ ಸುಧಾರಕರು ಕಾಲಕಾಲಕ್ಕೆ ಪ್ರಯೋಗಗಳನ್ನು ನಡೆಸುತ್ತ ಬಂದರೂ, ಅವರು ಮರೆಯಾದ ಕೂಡಲೇ ಅವರ ವಿಚಾರಧಾರೆಗಳೂ ಅಂಧ ಪರಂಪರೆಗೆ ಕಾರಣವಾಗಿಬಿಡುತ್ತವೆ. ಇದೇ ಸಮಯವನ್ನು ಬಳಸಿಕೊಂಡು ಕೆಲವು ಪಟ್ಟಬದ್ಧ ಹಿತಾಸಕ್ತಿಯ ಜನರು ಶೋಷಣೆ ಮಾಡುವವರು. ಮಾನವೀಯ ಮೌಲ್ಯಗಳನ್ನು ಸ್ಥಾಪಿಸಲು ಈ ವಿಷಚಕ್ರವನ್ನು ಕಡಿದುಹಾಕಿ ವ್ಯವಸ್ಥೆಯನ್ನು ಸುಧಾರಿಸಲು ಮತ್ತೆ ಮತ್ತೆ ವೈಚಾರಿಕ ವರ್ಗದ ಜನರು ಪ್ರಯತ್ನಿಸುತ್ತಿದ್ದಾರೆ. ಈ ಪ್ರಯತ್ನದ ಪರಂಪರೆಯನ್ನು ನಾವು ಇತಿಹಾಸದಲ್ಲಿ ಕಾಣುತ್ತೇವೆ. ಶರಣರು ವೇದ-ಉಪನಿಷತ್ತು ಆಗಮ ಪುರಾಣಗಳಿಗೆ ಮಹತ್ವ ಕೊಡದೆ ಸಮ್ಯಕ್ ಜ್ಞಾನ, ಸಮ್ಯಕ್ ದರ್ಶನ, ಸಮ್ಯಕ್ ಚಾರಿತ್ರ್ಯ, ಸತ್ಕ್ರಿಯೆಗಳಿಗೆ ಮಹತ್ವ ಕೊಟ್ಟಿದ್ದಾರೆ. ಚರಿತ್ರೆಗಿಂತಲೂ ಚಾರಿತ್ರ್ಯವೇ ಮುಖ್ಯವೆಂಬ ಹೃದಯವೈಶಾಲ್ಯತೆಯಿತ್ತು ಅವರಿಗೆ.

ಅವರ ಉದಾತ್ತ ನೀತಿಯಲ್ಲಿ ಜಾತ್ಯತೀತ ಸಮಾಜದ ನಿರ್ಮಾಣವೇ ಅವರ ಮೊದಲ ಆಶಯ. ಅವರ ಪ್ರಕಾರ ಸಾಮಾಜಿಕ ಅಸಮಾನತೆಗೆ ವರ್ಣಧರ್ಮವೆಂಬುದು ಪ್ರಬಲವಾದ ಪ್ರಮಾಣವಾಗಿತ್ತು. ಮೇಲು-ಕೀಳಿನ ಸೊಲ್ಲು ಮೇಲೇರಿತ್ತು. ವರ್ಣದ ಹೆಸರಿನಲ್ಲಿ ನಡೆಯುತ್ತಿದ್ದ ಅನ್ಯಾಯವನ್ನು ಶರಣರು ಪ್ರಬಲವಾಗಿ ಪ್ರತಿಭಟಿಸಿ ನಿಂತರು. ಪರಶಿವನೇ ಸಮಸ್ತ ಸೃಷ್ಟಿಯ ಆಧಾರವಾಗಿರತಕ್ಕವನೆಂದ ಮೇಲೆ ಆತನ ಅಂಶವೇ ಆಗಿರುವ ಪ್ರತಿಯೊಬ್ಬ ಮಾನವನಲ್ಲಿಯೂ ಪರಶಿವನನ್ನು ಕಾಣಬಹುದೆಂದು ಘೋಷಿಸಿದರು. ಪ್ರತಿಯೊಬ್ಬನ ಹೃದಯದಲ್ಲಿರುವ ಆತ್ಮನೇ ಪರಮಾತ್ಮನು. ಅಂತರಂಗ, ಬಹಿರಂಗಗಳೆರಡರಲ್ಲಿಯೂ ಶುದ್ಧತೆಯನ್ನು ಕಾಪಾಡಿಕೊಂಡು ಪರಶಿವನ ಪೂಜೆ, ಪ್ರಾರ್ಥನೆ, ಸ್ತುತಿಗಳನ್ನು ಮಾಡಿದೊಡೆ ನೀವೇ ಮಹಾಮಾನವರಾಗುವಿರಿ ಎಂದು ಉಪದೇಶಿಸಿದ್ದಾರೆ. "ಲಿಂಗಮಧ್ಯೇ ಜಗತ್ ಸರ್ವಂ" ಎನ್ನುತ್ತ ಸಮಾಜದಲ್ಲಿರುವ ವರ್ಣಗಳು ನಿರಾಧಾರವಾಗಿರುವದೆಂದೂ, ವ್ಯಕ್ತಿಯ ಯೋಗ್ಯತೆಗೆ ಮನ್ನಣೆ ಕೊಡಬೇಕೇ ಹೊರತು ಜಾತಿಗಳಿಗಲ್ಲವೆಂದು ನಿರೂಪಿಸಿದರು. ಬಸವಣ್ಣನವರು 'ವಿಪ್ರ ಮೊದಲು ಅಂತ್ಯಜ ಕಡೆಯಾಗಿ ಶಿವಭಕ್ತರಾದವರನೆಲ್ಲರನೊಂದೇ ಎಂಬೆ' ಎಂದು ತಮ್ಮ ನಿರ್ಣಯವನ್ನು ನಿರ್ದಾಕ್ಷಿಣ್ಯವಾಗಿ ವ್ಯಕ್ತಪಡಿಸಿದರು. ಯಾವ ಜಾತಿಯಲ್ಲಿಯೇ ಹುಟ್ಟಿರಲಿ, ಆತ ಉದಾತ್ತ ವ್ಯಕ್ತಿತ್ವವನ್ನು ಪಡೆದುಕೊಂಡು ಲೋಕಕಲ್ಯಾಣವನ್ನು ಸಾಧಿಸಲು ಸಮರ್ಥನಾಗಿದ್ದರೆ ಆತನೇ ಕುಲಜನು ಎನ್ನುವುದು ಅವರ ವಿಚಾರವಾಗಿತ್ತು. ಪ್ರತಿಯೊಬ್ಬರೂ ನಡೆಯುವ ನೆಲ, ಕುಡಿಯುವ ಜಲ, ಸೇವಿಸುವ ಗಾಳಿ ಒಂದೇ ಆಗಿರುವಾಗ ಕುಲ, ಜಾತಿ, ಮತ, ಪಂಥಗಳಿಗೆ ಅವಕಾಶವು ಎಲ್ಲಿ ಎಂದು ಪ್ರಶ್ನಿಸಿದ್ದಾರೆ. "ಮರ್ತ್ಯಲೋಕ-ದೇವಲೋಕ ಬೇರಿಲ್ಲ ಕಾಣಿರೋ!" ಎಂದು ದೇವಲೋಕ, ಮರ್ತ್ಯಲೋಕಗಳೆಂಬ ಕಲ್ಪನೆಯು ಜನರ ಅಜ್ಞಾನದಿಂದ ಹುಟ್ಟಿದ್ದು ಎಂದು ಸ್ಪಷ್ಟಪಡಿಸಿದ್ದಾರೆ.

1. ಕಬ್ಬಿನ ಕಡಲೆಯಂತಿದ್ದ ಸಂಸ್ಕೃತ ಸಾಹಿತ್ಯವನ್ನು ಓದಿ ಅರ್ಥೈಸಿಕೊಳ್ಳುವುದು ಕಠಿಣವಾಗಿತ್ತು.

2. ಸಂಸ್ಕೃತ ಮಾದರಿಯನ್ನೇ ಅನುಸರಿಸಿದ ಪೂರ್ವದ ಹಳಗನ್ನಡ, ಹಳಗನ್ನಡದ ಚಂಪೂ ಕಾವ್ಯಗಳು ಅಂದಿನ, ಇಂದಿನ ಜನಾಂಗಕ್ಕೆ ಕಠಿಣವಾಗಿದ್ದವು.

3. ಇದನ್ನು ಗಮನಿಸಿದ 12ನೆಯ ಶತಮಾನದ ವಚನಕಾರರು ಬಸವಾದಿ ಶರಣರು ಸರಳವೂ, ವಿಶಿಷ್ಟವೂ, ಪದ್ಯವೂ ಅಲ್ಲದ ಗದ್ಯವೂ ಅಲ್ಲದ, ಛಂದಸ್ಸಿನ ಬಂಧವಿಲ್ಲದ ವಚನಗಳ ರಚನೆ ಮಾಡಿ ಜನಮನ್ನಣೆಗೆ ಪಾತ್ರರಾದರು.

4. ಶರಣರ ಅನುಭಾವದ ಮೂಸೆಯಲ್ಲಿ ಬೆಂದು ಚೊಕ್ಕ ಚಿನ್ನದಂತೆ ಮೂಡಿಬಂದ ವಚನಗಳು ಮಾನವ ಜೀವನವನ್ನು ಬೆಳಗಿದವು. ಇವು ಶರಣರ ಆತ್ಮಮಥನದಿಂದ ರಚಿಸಲ್ಪಟ್ಟ ಸಾಹಿತ್ಯವೆನ್ನಲಾಗಿದೆ.

5. ಇವರು ರಚಿಸಿದುದು ನಡುಗನ್ನಡದ ಸಾಹಿತ್ಯವೆಂದು ಕರೆಯಿಸಿಕೊಂಡಿತು (ರಗಳೆ, ಷಟ್ಪದಿ, ತ್ರಿಪದಿ, ಸಾಂಗತ್ಯ, ನಡುಗನ್ನಡ ಸಾಹಿತ್ಯದ ಪ್ರಭೇದಗಳು).

6. ಹಾಡಿದರೆ ಹಾಡು, ವಾಚಿಸಿದರೆ ವಚನ, ಸರಳವಾಗಿ ತಿಳಿಯುವಂತಿವೆ. ಲಾಕ್ಷಣಿಕರು ಸರ್ವಕಾಲಕ್ಕೂ, ಸರ್ವದೇಶಕ್ಕೂ, ಸರ್ವಜನರಿಗೂ ಆದರ್ಶವಾಗುವ ಜೀವನ ಸಿದ್ಧಾಂತಗಳನ್ನು ಪ್ರತಿಪಾದಿಸುವುದೇ ಶ್ರೇಷ್ಠ ಕಾವ್ಯ ಎಂದ ಮಾತು ಈ ವಚನಗಳಿಗೂ ಅನ್ವಯವಾಗುತ್ತದೆ.

7. ವಚನಕಾರರು ರಚಿಸಿದ ವಚನಗಳು ಉನ್ನತ ಜೀವನಮೌಲ್ಯಗಳ ಒಂದು ಸುಂದರ ಕರಂಡಕ. ಅದು ಉತ್ತಮ ಜೀವನಪ್ರಣಾಳಿಕೆಯ ಒಂದು ಗುಚ್ಛವಿದ್ದಂತೆ.

8. ವೈದಿಕ ಪರಂಪರೆಯಲ್ಲಿ 'ಸರ್ವೇ ಜನಾಃ ಸುಖಿನೋ ಭವಂತು' ಎಂದಿದೆ. ವಚನಕಾರರು 'ಸಕಲ ಜೀವಾತ್ಮರಿಗೆ ಲೇಸಾಗಬೇಕು' ಎಂದು ಸಾರಿದರು. ಅಂದರೆ ಎಲ್ಲಾ ಜೀವಾತ್ಮರೆಂದರೆ ಜಡ ಮೊದಲು ಮಾಡಿ ಸಸ್ಯ, ಪ್ರಾಣಿ, ಮಾನವರಿಗೆ ಮಾತ್ರ ಅವರು ಸುಖವನ್ನು ಬಯಸಲಿಲ್ಲ. ಅದರ ಬದಲಾಗಿ ಎಲ್ಲ ಜೀವಿಗಳಿಗೂ ಲೇಸು ಅಥವಾ ಒಳಿತನ್ನು ಬಯಸಿದರು. ಅಂದರೆ "ನಿನ್ನ ಪ್ರೀತಿ ಪೃಥ್ವಿಯ ಮೇಲಿನ ಎಲ್ಲ ಜೀವಜಂತುಗಳಿಗಾಗಿ ವಿಸ್ತೃತವಾಗಿರಲಿ" ಎಂಬುದೇ ಬಸವಣ್ಣನವರು ಕೊಟ್ಟ ಪ್ರಥಮ ಜೀವನಮೌಲ್ಯವಾಗಿದೆ.

9. ಬಸವಣ್ಣನವರು ಸತ್ಯಕ್ಕೆ ಹೆಚ್ಚು ಮಹತ್ವ ಕೊಟ್ಟವರು. ಅಂತೆಯೇ

ಸತ್ಯವ ನುಡಿವುದೇ ದೇವಲೋಕ
ಮಿಥ್ಯವ ನುಡಿವುದೇ ಮರ್ತ್ಯಲೋಕ
ದೇವಲೋಕ ಮರ್ತ್ಯಲೋಕ ಬೇರಿಲ್ಲ ಕಾಣಿರೋ
'ಆಚಾರವೇ ಸ್ವರ್ಗ ಅನಾಚಾರವೇ ನರಕ'
ಕೂಡಲಸಂಗಮದೇವಾ ನೀವೇ ಪ್ರಮಾಣ! (924)

ಅಂದರೆ ಮಾತು ಮತ್ತು ಕ್ರಿಯೆಗಳಲ್ಲಿ ಹೊಂದಾಣಿಕೆಯಿರಬೇಕು. ಇಂದಿನ ಕಾಲದಲ್ಲಿ ಸತ್ಯ ನುಡಿಯುವುದೇ ಅಪರೂಪವಾಗಿದೆ. ಮನುಷ್ಯನ ವ್ಯಕ್ತಿತ್ವ ನಿರ್ಮಾಣ ಸತ್ಯ ನುಡಿಯ ಮೇಲೆಯೇ ಅವಲಂಬಿತವಾಗಿದೆ ಎಂದರ್ಥ.

ವಚನಕಾರರು ಅಹಿಂಸೆಯನ್ನು ಜೀವನದ ಮೌಲ್ಯವನ್ನಾಗಿ ಆರಿಸಿಕೊಂಡರು. "ಅಹಿಂಸಾ ಪರಮೋ ಧರ್ಮ:" ಎಂದು ಮಹಾವೀರರು ಹೇಳಿದರೆ; ಅಹಿಂಸೆಯ ಇನ್ನೊಂದು ರೂಪವೇ ದಯಾಗುಣ, ಸಕಲ ಜೀವಾತ್ಮರಿಗೆ ಲೇಸನೇ ಬಯಸಬೇಕು ಎಂದವರು ಬಸವಣ್ಣ.

> ದಯವಿಲ್ಲದ ಧರ್ಮವದೇವುದಯ್ಯಾ?
> ದಯವೇ ಬೇಕು ಸಕಲ ಪ್ರಾಣಿಗಳೆಲ್ಲರಲ್ಲಿ
> ದಯವೇ ಧರ್ಮದ ಮೂಲವಯ್ಯಾ
> ಕೂಡಲಸಂಗಯ್ಯನಂತಲ್ಲದೊಲ್ಲನಯ್ಯಾ ! (247)

ಬಸವಣ್ಣನವರು ಹೇಳಿದ ಮಾತೊಂದು ಜೀವನಮೌಲ್ಯ ಸಪ್ತಸೂತ್ರದಂತಿರುವ ಈ ವಚನದಲ್ಲಿದೆ. ಅದು ಲೋಕಪ್ರಸಿದ್ಧವಾಗಿದ್ದು ಸರ್ವರೂ ಪಾಲಿಸಬೇಕಾದುದಾಗಿದೆ.

> ಕಳಬೇಡ ಕೊಲಬೇಡ ಹುಸಿಯ ನುಡಿಯಲು ಬೇಡ
> ಮುನಿಯಬೇಡ ಅನ್ಯರಿಗೆ ಅಸಹ್ಯಪಡಬೇಡ
> ತನ್ನ ಬಣ್ಣಿಸಬೇಡ, ಇದಿರ ಹಳಿಯಲು ಬೇಡ
> ಇದೇ ಅಂತರಂಗ ಶುದ್ಧಿ ಇದೇ ಬಹಿರಂಗ ಶುದ್ಧಿ
> ಇದೇ ನಮ್ಮ ಕೂಡಲಸಂಗಮದೇವನೊಲಿಸುವ ಪರಿ! (235)

ಈ ವಚನದಲ್ಲಿರುವ ಸಪ್ತ ತತ್ವಗಳನ್ನು ಅಳವಡಿಸಿಕೊಂಡು ನಡೆದದ್ದೇ ಆದರೆ ವಿಶ್ವವೇ ಶಾಂತಿಯ ತೋಟವಾಗುತ್ತದೆ.

ನಡೆ–ನುಡಿ ಹೇಗಿರಬೇಕೆಂದರೆ ಬಸವಣ್ಣನವರು ಹೇಳುವುದು ಹೀಗೆ : 'ನುಡಿಮುತ್ತಿನ ಹಾರ, ಸ್ಫಟಿಕದ ಸಲಾಕೆಯಂತಿರಬೇಕು'. ಅಲ್ಲಮರು ಇದನ್ನೇ ಮಾತೆಂಬುದು ಜ್ಯೋತಿರ್ಲಿಂಗ ಎಂದಿದ್ದಾರೆ. ನಡೆ ವಿನಯದಿಂದೊದಗಿದ ಆಚಾರ ವಿಚಾರದಿಂದಿರಬೇಕು. "ಬಾಗಿದ ತಲೆ ಮುಗಿದ ಕೈಯಂತೆ" ಎಂಬುದು ಬಸವಣ್ಣನ ಜೀವನಸೂತ್ರ. ಎಲವೋ ಎನ್ನುವ ಒರಟು ಮಾತಿನ ಬದಲಾಗಿ 'ಅಯ್ಯಾ' ಎಂಬ ಮೃದುವಚನದ ಮಹತ್ವವನ್ನು ಸಾರಿದರು.

"ಅಯ್ಯಾ ಎಂದರೆ ಸ್ವರ್ಗ, ಎಲವೋ ಎಂದಡೆ ನರಕ" ಎಂಬ ಮಾತಿನಲ್ಲಿ, ಅಯ್ಯಾ ಎನ್ನುವುದು ಸ್ವರ್ಗದ ಬಾಗಿಲಿನ ಕೀಲಿಕೈಯಾದರೆ ಎಲವೋ ಎನ್ನುವುದು ನರಕದ ಹಾದಿ ಎಂದು ಸ್ಪಷ್ಟಪಡಿಸಿದ್ದಾರೆ.

"ಎನಗಿಂತ ಕಿರಿಯರಿಲ್ಲ, ಶಿವಭಕ್ತರಿಗಿಂತ ಹಿರಿಯರಿಲ್ಲ" ಎಂಬುದು ಬಸವಣ್ಣನವರ ಜೀವನಸಿದ್ಧಾಂತವಾಗಿತ್ತು. ತಾನು ಗಳಿಸುವ ಧನ ತನಗಲ್ಲ, ಅದು ಸಮಾಜಕ್ಕೆ ವಿನಿಯೋಗವಾಗಬೇಕು. ಅಂದರೆ, ಅದು ಪರೋಪಕಾರಕ್ಕೆ ಮೀಸಲಾಗಿರಬೇಕು ಎಂದರ್ಥ. ಅಂದರೆ, ದಾಸೋಹದ ರೀತಿಯಲ್ಲಿ ಹಂಚುವುದಾಗಬೇಕು.

ಇವು ಮೇಲ್ನೋಟಕ್ಕೆ ಸಾಮಾನ್ಯ ಮೌಲ್ಯಗಳಾಗಿರಬಹುದು. ಆದರೆ ಇವುಗಳ ಆಚರಣೆಯಿಂದ ಮಾನವ ತನ್ನ ಜೀವನದಲ್ಲಿ ಉತ್ತಮಿಕೆಯನ್ನು ಸಾಧಿಸಬಹುದು. ಇವು ವ್ಯಕ್ತಿತ್ವಕ್ಕೆ ಕಳೆ ತರಬಲ್ಲವು. ಇನ್ನು, ವಚನಕಾರರು, ಸ್ವಾತಂತ್ರ್ಯ, ಸಮಾನತೆ, ಸಹೋದರತ್ವ ಹಾಗೂ ಸಾಮಾಜಿಕ ನ್ಯಾಯಗಳಿಗಾಗಿ ಹೋರಾಟ ಮಾಡಿದರು. ಕಾಯಕ ತತ್ವದ ಮೂಲಕ ಆರ್ಥಿಕ ಅಸಮಾನತೆಯನ್ನು ಸಾರಿದರು. ಜಾತ್ಯತೀತ ವಿವಾಹದ ಮೂಲಕ ಸಾಮಾಜಿಕ ಅಸಮಾನತೆಯನ್ನು, ಇಷ್ಟಲಿಂಗ ಪೂಜೆಯ ಮೂಲಕ ಸಾಂಸ್ಕೃತಿಕ ಅಸಮಾನತೆಯನ್ನು ಹೋಗಲಾಡಿಸಿದರು. ಏಕಕಾಲಕ್ಕೆ ಲಿಂಗ, ವರ್ಣ, ವರ್ಗರಹಿತ ಸಮಾಜ ಕಟ್ಟಲು ಸಮರ್ಥರಾದರು. ಬಡವ–ಬಲ್ಲಿದ, ಸ್ತ್ರೀ–ಪುರುಷ, ಮೇಲು–ಕೀಳು, ಅಂತ್ಯಜ–ಬ್ರಾಹ್ಮಣ ಎಂಬ ಅಗಾಧ ಅಸಮಾನತೆಗಳನ್ನು ಅವರು ಹೋಗಲಾಡಿಸಿದರು.

ಸ್ವಾತಂತ್ರ್ಯವೆನ್ನುವುದು ಜೀವನದ ಬಹು ದೊಡ್ಡ ಆದರ್ಶ. ವಿಚಾರಸ್ವಾತಂತ್ರ್ಯ, ಅಭಿವ್ಯಕ್ತಿ ಸ್ವಾತಂತ್ರ್ಯ ಇವು ಅತ್ಯಂತ ಉನ್ನತ ಮಟ್ಟದ ಜೀವನಮೌಲ್ಯಗಳಾಗಿವೆ. 'ಆನು ಒಲಿದಂತೆ ಹಾಡುವೆ' ಎನ್ನುವ ಬಸವಣ್ಣನವರ ಅಭಿಪ್ರಾಯ ಸ್ವಾತಂತ್ರ್ಯದ ಒಂದು ಮುಖ್ಯ ಸೂತ್ರವಾಗಿದೆ. ಅಂತೆಯೇ ಅನುಭವಮಂಟಪದಲ್ಲಿ ಶರಣರೆಲ್ಲರೂ ಒಟ್ಟಿಗೆ ಸಮಾನತೆಯಿಂದ ಕುಳಿತು ವಚನ ರಚಿಸಿದರು. ಹೀಗೆ ಅವರು ಸಹೋದರತ್ವವನ್ನು ಸಾಧಿಸಿದರು.

'ಅಪ್ಪನು ನಮ್ಮ ಮಾದಾರ ಚೆನ್ನಯ್ಯ, ಬೊಪ್ಪನು ನಮ್ಮ ಡೋಹರ ಕಕ್ಕಯ್ಯ' ಎಂದು ಹೇಳುತ್ತಾ ಶತಶತಮಾನಗಳಿಂದ ತುಳಿಯಲ್ಪಟ್ಟ ಶೋಷಿತವರ್ಗದ ಜೊತೆಗೆ ಸಹೋದರತ್ವ ಸಾಧಿಸಿದರು. ಅತ್ಯಂತ ಹೀನ ಕುಲದಲ್ಲಿ ಹುಟ್ಟಿದವರನ್ನೂ ಬಿಗಿದಪ್ಪಿಕೊಂಡು ತಮ್ಮವರನ್ನಾಗಿಸಿ ಕೊಂಡರು. ಉಚ್ಚ ಕುಲಜರೆನಿಸಿಕೊಂಡವರ ಮೇಲರಿಮೆಯನ್ನು, ಕೀಳು ಕುಲಜರಲ್ಲಿಯ ಕೀಳರಿಮೆಯನ್ನು ಹೋಗಲಾಡಿಸಿ ಅವರುಗಳ ನಡುವಿನ ಗೋಡೆಯನ್ನು ಕೆಡವಿ ಸಮಾಜದಲ್ಲಿ ಶಾಂತಿಯನ್ನು ಸ್ಥಾಪಿಸಿದರು.

ಸ್ತ್ರೀ ಮತ್ತು ಶೂದ್ರ ವರ್ಗದವರ ಸಮಾನತೆಗಾಗಿ ಅಖಂಡ ಹೋರಾಟ ಮಾಡಿ ಲಿಂಗ ಹಾಗೂ ಜಾತಿಗಳ ನಡುವೆ ಸಮಾನತೆಯನ್ನು ತಂದರು. ಧಾರ್ಮಿಕ ಸ್ವಾತಂತ್ರ್ಯದ ಮೂಲಕ "ಸರ್ವರಲ್ಲಿ ಸಮಾನತೆ"ಯನ್ನು ಸಾಧಿಸಿದರು. ಹೀಗೆ ಸಮಾನತೆಯನ್ನು ತರುವಲ್ಲಿ ಶರಣರು ಸಮರ್ಥರಾದರು.

ವಿವಿಧ ಕಾಯಕಗಳ ನಡುವಿನ ಕೃತ್ರಿಮ ಭೇದವನ್ನು ಶರಣರು ಅಲ್ಲಗಳೆದರು. ಕೈಕೊಂಡ ಕಾಯಕ ಯಾವುದೇ ಇರಲಿ, ಅದರಲ್ಲಿ ಕೈಲಾಸವನ್ನು ಕಾಣುವ ಕಲೆಯನ್ನು ಸಾಧಿಸಿದರು. ಅಂದರೆ, ಕಾಯಕ ತತ್ವದ ಮೂಲಕ ಎಲ್ಲರಿಗೂ ಸಾಮಾಜಿಕ ನ್ಯಾಯ ದೊರೆಯುವಂತಾಯಿತು.

ಸಾಮಾಜಿಕ ಮೌಲ್ಯಗಳು: ಪಾತಿವ್ರತ್ಯ, ಶೀಲ, ಶುದ್ಧ ಆಚಾರ–ವಿಚಾರ, ನಡೆ–ನುಡಿ ಕೃತಜ್ಞತಾ ಭಾವ.

ಅರಿತರೆ ಶರಣ ಮರೆತರೆ ಮಾನವ, ದಯವೇ ಧರ್ಮದ ಮೂಲವಯ್ಯಾ! ಈ ವಾಕ್ಯ ಸರ್ವಧರ್ಮಗಳಿಗೆ ಮೂಲಸ್ತಂಭ. ದಯವಿಲ್ಲದ ಧರ್ಮ ಬೇರಿಲ್ಲದ ವೃಕ್ಷದಂತೆ! ಎಲ್ಲ ಚರಾಚರ ಜೀವರಾಶಿಗಳಿಗೂ ಬದುಕುವ ಹಕ್ಕಿದೆ. ಅಂದರೆ ಬಸವತತ್ವದ ವ್ಯಾಖ್ಯೆಯು ಜೀವಿಗಳ ಹಕ್ಕನ್ನು ಪ್ರತಿಪಾದಿಸುವ ಧರ್ಮವಾಗಿದೆ. ಈ ಧರ್ಮವೆಂಬ ವೃಕ್ಷದ ಮೂಲ ಬೇರು ದಯೆ. ಅದಕ್ಕೇ ಅವರು ದಯವಿಲ್ಲದ ಧರ್ಮ ಅದೇವುದಯ್ಯಾ! ಎಂದಿರುವರು. ನೆಲೆಗೊಂಡ ದಯೆಯಿಂದ ಧರ್ಮವೃಕ್ಷವು ಸಮಾಜಕ್ಕೆ ಶ್ರೇಷ್ಠ ಫಲವನ್ನು ನೀಡುತ್ತದೆ.

ಕಾಯಕ ಮತ್ತು ದಾಸೋಹ ಪರಿಕಲ್ಪನೆಯನ್ನು ಪ್ರಪಂಚಕ್ಕೆ ನೀಡಿದ್ದು ಶರಣರ ಬಹು ದೊಡ್ಡ ಕೊಡುಗೆಯಾಗಿದೆ. ಶರಣರು ಹೇಳಿದ್ದೇನೆಂದರೆ, ಕಾಯಕ ಉತ್ಪಾದನೆಯಾದರೆ ದಾಸೋಹವೆಂಬುದು ವಿತರಣೆಯಾಗಿದೆ. ತಮ್ಮ ತಮ್ಮ ಕಾಯಕವನ್ನು ಮಾಡುವುದು ದುಡಿಮೆಗೆ ತಕ್ಕಂತೆ ಹಣ ಪಡೆಯುವುದು, ದಾಸೋಹವೆಂದರೆ ಇಲ್ಲದವರಿಗೆ ನಿರ್ಗತಿಕರಿಗೆ ಹಂಚುವುದು ಅಥವಾ ಹಂಚಿಕೊಂಡು ತಿನ್ನುವುದು, ಸಂಪತ್ತನ್ನು ವೈಚಾರಿಕತೆಯಿಂದ ಹೇಗೆ ಹಂಚಬೇಕೆಂಬುದು ದಾಸೋಹದಲ್ಲಿ ವ್ಯಕ್ತವಾಗಿದೆ. ವಿತರಣೆಯ ಕಾರ್ಯಕ್ಕೆ ನೈತಿಕತೆಯ ಸ್ಪರ್ಶವನ್ನು ಕೊಟ್ಟು ದಾಸೋಹವನ್ನು ಶರಣರು ಉದಾತ್ತೀಕರಿಸಿದ್ದಾರೆ. ಬಸವಣ್ಣನವರ ವಚನವೊಂದರಲ್ಲಿ ಮೂಲಕ ಹೀಗೆ ಹೇಳಿದೆ;

ಕಾಗೆಯೊಂದಗುಳ ಕಂಡರೆ ಕರೆಯದೇ ತನ್ನ ಬಳಗವನು?
ಕೋಳಿ ಒಂದು ಕುಟುಕ ಕಂಡಡೆ ಕೂಗಿ ಕರೆಯದೇ ತನ್ನ ಕುಲವನೆಲ್ಲವ?
ಶಿವಭಕ್ತನಾಗಿ ಭಕ್ತಿಪಕ್ಷವಿಲ್ಲದಿರ್ದೊಡೆ ಕಾಗೆ–ಕೋಳಿಗಳಿಗಿಂತ
ಕರಕಷ್ಟ ಕಾಣಾ ಕೂಡಲಸಂಗಮದೇವಾ!

ಅಂದರೆ ಕೊಡು–ಕೊಳ್ಳುವ, ಸಹಕಾರ ತತ್ವವನ್ನು ಅನುಸರಿಸಿ ನಡೆಯದಿದ್ದರೆ ಹೇಗೆ? ಎಂದು ಪ್ರಶ್ನಿಸಿದ್ದಾರೆ. ಹಾಗೆಯೇ ಈ ಸಕಲವನ್ನೂ ಕೊಟ್ಟವನು ಆ ಪರಮಾತ್ಮನು, ಆತನನ್ನಾದರೂ ಸ್ತುತಿ ಮಾಡಿ ಉಣಬೇಕಲ್ಲವೇ? ಎಂದು ಹೇಳಿದ್ದು ಗಮನಾರ್ಹ.

ಮೌನದಲುಂಬುದು ಆಚಾರವಲ್ಲ
ಲಿಂಗಾರ್ಪಿತವ ಮಾಡಿದ ಬಳಿಕ
ತುತ್ತಿಗೊಮ್ಮೆ ಶಿವಶರಣು ಎನ್ನುತ್ತಿರಬೇಕು
ಕರಣವೃತ್ತಿಗಳು ಅಡಗುವವು
ಕೂಡಲಸಂಗನ ನೆನೆಯುತ್ತವುಂಡರೆ!

ದೇವನು ಏನೆಲ್ಲವನ್ನೂ ನಮಗೆ ಕರುಣಿಸಿದ್ದಾನೆ. ಅದು ಕಾರಣ ದೇವಾನ್ನವೆಂದು ಬಗೆದು ತಾನು ತನ್ನ ಪರಿವಾರ ಹಾಗೂ ಜಂಗಮರಿಗೆ ದಾಸೋಹವ ಮನಮುಟ್ಟಿ ಮಾಡಬೇಕೆಂದು ಬಸವಾದಿ ಶಿವಶರಣರು ನುಡಿದರು. ಹಾಗೆಯೇ ನಡೆದರು ಕೂಡ.

ಸಮೃದ್ಧ ಜೀವನದ ಬದುಕಿಗೆ ಸತ್ಯಶುದ್ಧ ಮತ್ತು ಪ್ರಾಮಾಣಿಕತೆ ಕಾಯಕದಿಂದ ಉತ್ಪಾದನೆ ಹೆಚ್ಚುತ್ತದೆ ; ದಾಸೋಹದಿಂದ ಸಮಾನತೆ ಸಿದ್ಧಿಯಾಗುತ್ತದೆ ಎನ್ನಬಹುದು. ಅಂದರೆ

ಶ್ರಮದ ದುಡಿಮೆಯಿಂದ ಆರೋಗ್ಯ ವೃದ್ಧಿಯಾದರೆ ದಾಸೋಹದಿಂದ ಮನಶ್ಶುದ್ಧಿಯಾಗಿ ಸ್ವಚ್ಛತೆ ದೊರಕುತ್ತದೆ. ಸಮಾನತೆಯೇ ಮುಖ್ಯ ತತ್ವ.

ಗುರು ಲಿಂಗ ಜಂಗಮರಿಗೆ ದಾಸೋಹ ಮಾಡುವುದರಿಂದ ತನು–ಮನ–ಭಾವ ಶುದ್ಧವಾಗಿ ಭಕ್ತಿಯು ಸಹಜವಾಗಿ ಪರಿಶುದ್ಧವಾಗುತ್ತದೆ. ಈ ಕಾಯಕ ದಾಸೋಹ ಪೂಜೆಯಿಂದಾಗಿ ಮತ್ತು ಶರಣಸಂಸ್ಕೃತಿಯ ಮೂಲಕ ಜಾತಿಭೇದ, ಲಿಂಗಭೇದ, ವರ್ಣಭೇದಗಳು ನೀಗಿ ಸಮಾಜದಲ್ಲಿ ಸಮಾನತೆ ನೆಲೆಗೊಳ್ಳುತ್ತದೆ. ಕಾಯಕ ಪೂಜೆಯಾಗಿ ದಾಸೋಹವೆಂಬುದು ಲಿಂಗಾಂಗ ಸಾಮರಸ್ಯಕ್ಕೆ ರಾಜಮಾರ್ಗವಾಗಿ ಪರಿಣಮಿಸುತ್ತದೆ. ಸೋಹಂ ಶಿವೋಹಂ ಎಂಬ ಮದವಳಿದು ದಾಸೋಹಂಭಾವ ಅಳವಡುತ್ತದೆ.

ತ್ರಿಕರಣಶುದ್ಧ ಕಾಯಕ ಮತ್ತು ತ್ರಿವಿಧದಾಸೋಹದಿಂದ, ಜೀವರು ಭವಬಂಧನದಿಂದ ಮುಕ್ತರಾಗಿ ಶಿವಜೀವೈಕ್ಯ ಸಾಧ್ಯವಾಗುತ್ತದೆ. ಸಮಾಜದಲ್ಲಿ ಸಂಪತ್ತಿನ ಸದ್ವಿನಿಯೋಗವಾಗಿ "ಸರ್ವರಿಗು ಸಮಪಾಲು ಸರ್ವರಿಗು ಸಮಬಾಳು" ದೊರೆತು ಶೋಷಣೆಯು ನಿವಾರಣೆ ಆಗುತ್ತದೆ. ವ್ಯಕ್ತಿಯಲ್ಲಿರುವ ಲಂಚ–ವಂಚನೆ, ಭ್ರಷ್ಟಾಚಾರ ಪ್ರವೃತ್ತಿ ಹಾಗೂ ಸ್ವಾರ್ಥ ಬುದ್ಧಿ ನೀಗಿ ಆರ್ಥಿಕ ಅಭಿವೃದ್ಧಿಯಾಗುತ್ತದೆ. ಇಂಥ ಮೌಲ್ಯಯುತ ಬದುಕಿಗೆ, ಜೀವನ ಸಾರ್ಥಕತೆಗೆ ಶರಣರ ಕಾಯಕ, ದಾಸೋಹತತ್ವಗಳ ಕೊಡುಗೆ ಮೌಲ್ಯಯುತವಾಗಿದೆ.

ಆದುದರಿಂದ ಅಂದು ಇಂದೆನ್ನದೇ ಕ್ರಮವರಿತು, ಹದವರಿತು, ಕಾಯಕಪ್ರಜ್ಞೆಯನ್ನು ಮೂಡಿಸಿಕೊಂಡು, ಅರ್ಥವ ಪಡೆದು, ಅದನ್ನು ವ್ಯರ್ಥವಾಗಿ ವ್ಯಯಿಸದೇ ದಾಸೋಹಕ್ಕೊಂದು ಧಾರೆಯೆರೆದರೆ ಇಂದು ನಾವು ನೀವು ಸಹ ಶರಣರಾಗಲು ಸಾಧ್ಯವಿದೆ. ಹಾಗೆ ನಡೆದ ಮಠಮಾನ್ಯಗಳ ಅಸಂಖ್ಯಾತ ಪೀಠಾಧಿಪತಿಗಳು ಕನ್ನಡ ನಾಡಿನಲ್ಲಿ ಈಗಲೂ ಇದ್ದಾರೆ. ಉದಾಹರಣೆ ಅಥಣಿಯ ಮುರುಘೇಂದ್ರ ಶಿವಯೋಗಿಗಳು ಹಾಗಿದ್ದರು ಎಂಬುದಕ್ಕೆ ಅವರೇ ರಚಿಸಿದ ವಚನವಿಂತಿದೆ.

ಆವಗಂ ಶರಣನು ಸೇವಿಪೆನು ಬಸವೇಶ
ಮಡಿವಾಳ ತಂದೆಗಳ ಬಟ್ಟೆಗಳ ನಾನೊಗೆವೆ
ಹಡಪದ ಅಪ್ಪಣ್ಣಗಳ ಕ್ಷೌರವನು ನಾಗೈವೆ
ಡೋಹರ ಕಕ್ಕಯ್ಯಂಗೆ ತೊಗಲ ಹದ ಮಾಡುವೆ
ವೀರ ಹರಳೇಶಂಗೆ ಜೋಡ ನಾ ಮಾಡುವೆ ಮಾಡಿಡುವೆ
ಮಾರಯ್ಯ ತಂದೆಗಳ ಕಟ್ಟಿಗೆಯ ನಾ ಹೊರುವೆ
ಧೀರ ಕೇತಯ್ಯಗಳ ಬುಟ್ಟಿಯನು ನಾ ಮಾಳ್ಪೆ
ನುಲಿಯ ಚಂದಯ್ಯಗಳ ಹಗ್ಗ–ಕಣ್ಣಿಯ ಗೈಯ್ವೆ
ಸಲೆ ಮಾದಾರ ಚೆನ್ನಂಗಂಬಲಿಯ ಮಾಡಿಡುವೆ
ಶಿವದಾಸಿಮಯ್ಯಗಳ ಬಟ್ಟೆ ನಾ ಮಾಳ್ಪೆ
ನಮಿಸಿ ಮರುಳೇಶಂಗೆ ಪಾಕವನು ನಾ ಗೈಯ್ವೆ
ತವೆ ಶಂಕರಯ್ಯಗಳ ಕಪನಿಯನು ನಾ ಹೊಲಿವೆ

ಅಮುಗಿ ಸಿದ್ಧೇಶ್ವರಂಗೆ ಕಂಬಳಿಯ ನಾ ಮಾಳ್ಪೆ
ಕುಂಬಾರ ಗುಂಡಯ್ಯಂಗೆ ನಾ ಮಡಿಕೆಯಂ ಗೈವೆ
ಸಂಭ್ರಮದಿ ಪ್ರಭುವಿಂಗೆ ಮದ್ದಳೆಯ ಬಾರಿಸುವೆ
ಆವಾವ ಕಾಯಕವ ಮಾಡಿದೊಡೆ ಬಸವೇಶ
ಆವಗಂ ಶರಣರನು ಸೇವಿಪೆನು ಬಸವೇಶ !

ಪರಮಪೂಜ್ಯ ಶ್ರೀ ಮುರುಘೇಂದ್ರ ಶಿವಯೋಗಿಗಳು ಬಸವಣ್ಣನವರನ್ನು ಈ ವಚನ ರಚಿಸುತ್ತಾ ಅವರನ್ನು ತಂದೆಯೆಂದೇ ಕರೆದು ಗೌರವಿಸಿದವರು. ಅಪ್ಪನ ವಚನಗಳು ಹಾಸಲುಂಟು, ಹೊದೆಯಲುಂಟು ಎನ್ನುತ್ತಿದ್ದರು. ಆದುದರಿಂದ ಪೂಜ್ಯರನ್ನು ಆಧುನಿಕ ಬಸವಣ್ಣನವರೆಂದು ಗೌರವಿಸಬೇಕು. ಅವರು ಕಾಯಕ, ದಾಸೋಹ, ಸಮಾನತೆಗಳ ಸಂಗಮವಾಗಿದ್ದರು. ಅವರ ಮಾರ್ಗದರ್ಶನದಲ್ಲಿ ನಡೆದು ನುಡಿದು ಅವರಂತಾಗಿಯೇ ಈ ಲೋಕಕ್ಕೆ ಬೆಳಕು ನೀಡಿದವರು ಶ್ರೀ ಧಾರವಾಡ ಮುರುಘಾಮಠದ ಪರಮಪೂಜ್ಯ ಶ್ರೀ ಮೃತ್ಯುಂಜಯಪ್ಪ ಹಾಗೂ ಮಹಾಂತಪ್ಪಗಳವರೆಂದು ಹೇಳಬಹುದು. ಇಂತಹ ಅಮೂಲ್ಯ ಜೀವನಮೌಲ್ಯಗಳನ್ನು ಜಗತ್ತಿಗೆ ಕೊಡುಗೆಯಾಗಿ ನೀಡಿದ ಬಸವಣ್ಣ ಮಹಾಮಾನವ, ದೇವಮಾನವ ! "ಶಿವನಾಗಬಹುದು, ಆದರೆ ಬಸವನಾಗುವುದು ಅಸಾಧ್ಯ" ಎಂದು ಅನುಭಾವಿಗಳು ಹೇಳಿದ ಮಾತು ನಿತ್ಯಸತ್ಯವೆನಿಸುತ್ತದೆ. ಇಂಥ ಮಹಾನುಭಾವರನ್ನು ನೆನೆದರೆ ಬಂದ, ಬರುವ ಕಷ್ಟ ನೋವು ದುಃಖಗಳು ದೂರವಾಗುತ್ತವೆ. ಬಸವನೆಂದರೆ ಪಾಪ ದೆಸೆಗೆಟ್ಟು ಓಡುವುದು" ಎಂದ ಸರ್ವಜ್ಞನ ಮಾತು ಸುಯೋಗ್ಯವಾಗಿದೆ.

ಬಸವಣ್ಣನವರ ಕೊಡುಗೆ ಮತ್ತು ಅವರ ಜೀವನ–ಸಾಧನೆಗಳನ್ನು ಮೆಚ್ಚಿ ಅಲ್ಲಮಪ್ರಭುಗಳನ್ನು ಮೊದಲುಗೊಂಡು ಎಲ್ಲ ಶರಣರೂ ಸ್ತುತಿಸಿದ್ದಾರೆ. ಅವರೊಬ್ಬ ದೇವಮಾನವ, ಮಹಾಪುರುಷ, ಸಮತಾವಾದಿ, ಸಮಾನತಾವಾದಿ, ಶ್ರೇಷ್ಠ ಆರ್ಥಿಕ ತಜ್ಞ, ಸಮಾಜಸುಧಾರಕ, ಶಿಕ್ಷಣತಜ್ಞ, ಲೋಕರಕ್ಷಕ, ಪ್ರಪ್ರಥಮ ಪ್ರಜಾಪ್ರಭುತ್ವವಾದಿ, ಅದರ ರೂವಾರಿ, ದಲಿತೋದ್ಧಾರಕ, ಭೂಮಿಗೆ ಬಂದ ಭಗವಂತ ಮುಂತಾಗಿ ವರ್ಣಿಸಿರುವರು.

'ಬ' ಎಂಬಲ್ಲಿ ಎನ್ನ ಭವ ಹರಿಯಿತ್ತು
'ಸ' ಎಂಬಲ್ಲಿ ಸರ್ವಜ್ಞಾನಿಯಾದೆನು
'ವ' ಎಂದು ವಾಚಿಸುವಡೆ ಚೈತನ್ಯಾತ್ಮಕನಾದೆನು
ಇಂತಹ ಬಸವಾಕ್ಷರ ಸರ್ವಾಂಗದಲ್ಲಿ
ತೊಳಗಿ ಬೆಳಗುವ ಭೇದವನರಿದು
ಆನೂ ನೀನೂ ಬಸವಾ ಬಸವಾ
ಎನುತಿರ್ದೆನಯ್ಯಾ ಗುಹೇಶ್ವರಾ !

ಎಂಬುದಾಗಿ ಅಲ್ಲಮಪ್ರಭುದೇವರು ಹೊಗಳಿರುವುದನ್ನು ನೋಡಿದರೆ ಉಳಿದ ಶರಣ – ಶರಣೆಯರೂ ಸಹ ಸಕಲರೂ ಬೆರಗಾಗುವಂತೆ ಸ್ತುತಿಸಿರುವರು.

ಪಾಶ್ಚಾತ್ಯ ವಿದ್ವಾಂಸರಾದ ಆರ್ಥರ್ ಮೈಲ್ಸ್‌ರು ಬಸವಣ್ಣನವರನ್ನು ಕುರಿತು ಹೇಳಿದ್ದು– "ಬಸವಣ್ಣ ಭಾರತ ದೇಶದ ಮೊಟ್ಟಮೊದಲನೆಯ ಸ್ವತಂತ್ರ ವಿಚಾರವಾದಿಗಳು. ಆತನನ್ನು ಭಾರತ ದೇಶದ ಮಾರ್ಟಿನ್ ಲೂಥರ್ ಎಂದು ಕರೆಯಬಹುದಾಗಿದೆ" ಎಂದು ಗೌರವ ಸಲ್ಲಿಸಿದ್ದಾರೆ.

ಸಿ.ಪಿ. ಬ್ರೌನ್ ಅವರು ಹೇಳಿದ್ದು ಹೀಗೆ : "ನಾನು ಇಡೀ ಜಗತ್ತಿನ ಅನೇಕ ಜನ ದಾರ್ಶನಿಕರನ್ನು ಕುರಿತಾಗಿ ಅಭ್ಯಾಸ ಮಾಡಿದ್ದೇನೆ. ಅವರ ಲೋಕೋತ್ತರ ಆಲೋಚನೆಗಳನ್ನು ಅರ್ಥ ಮಾಡಿಕೊಂಡಿದ್ದೇನೆ. ಆದರೆ ಯಾರೊಬ್ಬರೂ ಕರ್ನಾಟಕದ ಶಿವಶರಣರಂತೆ ಅದನ್ನು ಜಾರಿಗೆ ತರಲು ಪ್ರಯತ್ನಿಸಿದವರು ವಿರಳ. 800 ವರ್ಷಗಳ ಹಿಂದೆ ಅಂತಹದೊಂದು ತಂಡ ಬಸವಣ್ಣನವರ ನೇತೃತ್ವದಲ್ಲಿ ಇದೇ ಕೆಲಸ ಮಾಡಿದೆ. ಈ ದೃಷ್ಟಿಯಲ್ಲಿ ಕರ್ನಾಟಕದಲ್ಲಿರುವ ಲಿಂಗಾಯತ ಸಮುದಾಯವನ್ನು ನಾನು ಒಂದು ಸುದೈವಿ ಸಮುದಾಯವೆಂದು ಕರೆಯುತ್ತೇನೆ" ಎಂದಿದ್ದಾರೆ.

ರಾಷ್ಟ್ರಪಿತ ಮಹಾತ್ಮ ಗಾಂಧೀಜಿಯವರು (1924ರಲ್ಲಿ) ಬಸವಣ್ಣನವರು 800 ವರ್ಷಗಳ ಹಿಂದೆ ತಿಳಿಸಿದ ಮತ್ತು ಆಚರಿಸಿದ ಎಲ್ಲ ತತ್ವಗಳನ್ನೂ ಕಾರ್ಯರೂಪಕ್ಕೆ ತರಲು ನನ್ನಿಂದ ಸಾಧ್ಯವಿಲ್ಲ. ಅವುಗಳಲ್ಲಿರುವ ಕೆಲವೊಂದನ್ನು ಸ್ವೀಕರಿಸಿದ್ದೇನೆ. ನಾನು ಅವುಗಳಲ್ಲಿಯೂ ಪರಿಪೂರ್ಣತೆಯನ್ನು ಸಾಧಿಸಿಲ್ಲ, ಸಾಧನೆಯ ಹಂತದಲ್ಲಿದ್ದೇನೆ. ಅಸ್ಪೃಶ್ಯತಾ ನಿವಾರಣೆ ಮತ್ತು ಕಾಯಕ, ದಾಸೋಹಗಳೆಡೆಗೆ ಗೌರವ ಅವರ ಮುಖ್ಯ ಕಾರ್ಯಕ್ರಮಗಳಲ್ಲಿದ್ದವು. ಅವರ ಅರಿವು ಮತ್ತು ಆಚಾರ–ವಿಚಾರಗಳಲ್ಲಿ ಜಾತೀಯತೆಯ ನೆರಳು ಕೂಡ ಕಾಣಲು ಸಾಧ್ಯವಿಲ್ಲ. ಅವರು ನಮ್ಮ ಕಾಲದಲ್ಲಿ ಬದುಕಿದ್ದರೆ ಪೂಜಾರ್ಹ ಸಂತರಾಗುತ್ತಿದ್ದರು. ಅವರ ಅನುಯಾಯಿಗಳಾದ ನೀವು ಅವರ ತತ್ವಗಳನ್ನು ಆಚರಣೆಗೆ ತಂದರೆ ಭಾರತವನ್ನಷ್ಟೇ ಅಲ್ಲ, ಇಡೀ ಜಗತ್ತನ್ನೇ ಮೇಲಕ್ಕೆತ್ತಬಲ್ಲಿರಿ."

ಹೀಗೆ ಬಸವಾದಿ ಪ್ರಮಥರು ಮಾಡಿದ ಸಮಾಜಮುಖಿ ಕಾರ್ಯಗಳನ್ನು ಅದೆಷ್ಟು ಹೊಗಳಿದರೂ ಕಡಿಮೆಯೇ !

□

# ವಿಶ್ವಗುರು ಬಸವಣ್ಣ ಮತ್ತು ಸೊಲ್ಲಾಪುರ ಶ್ರೀ ಸಿದ್ಧರಾಮೇಶ್ವರರು

**ಧರ್ಮಣ್ಣ ಮ. ಕುಂಬಾರ**

ಬಸವನ ಮೂರ್ತಿಯೇ ಧ್ಯಾನಕ್ಕೆ ಮೂಲ
ಬಸವನ ಕೀರ್ತಿಯೇ ಜ್ಞಾನಕ್ಕೆ ಮೂಲ
ಬಸವಾ ಬಸವಾ ಎಂಬುದೇ ಭಕ್ತಿ ಕಾಣಾ
ಕಪಿಲಸಿದ್ಧಮಲ್ಲಿಕಾರ್ಜುನಾ

**– ಶ್ರೀ ಸಿದ್ಧರಾಮೇಶ್ವರರು**

**ಶಿವಶರಣೆ ಗೌಳಗಿತ್ತಿ ಗೌರವ್ವನ ಮೊಸರು ಗಡಿಗೆಯನ್ನು ಎತ್ತಿ ಹಿಡಿದರು:** ಶ್ರೀ ವಿಶ್ವಗುರು ಬಸವಣ್ಣನವರು ಬಿಜ್ಜಳ ಮಹಾರಾಜನಲ್ಲಿ ಕರಣಿಕರಾಗಿ ಮಹಾಮಂತ್ರಿಗಳಾಗಿ ಕಾಯಕವನ್ನು ಮಾಡುತ್ತಿದ್ದರು. ಒಂದು ದಿವಸ ಬಿಜ್ಜಳ ಮಹಾರಾಜರು ಮಂತ್ರಿಮಂಡಲದ ಸಭೆಯನ್ನು ಕರೆದಿದ್ದರು. ಅಲ್ಲಿ ರಾಜ್ಯದ ಬಗ್ಗೆ ಚರ್ಚೆ ನಡೆದಿತ್ತು. ಮಹಾಸಭೆಯಲ್ಲಿ ಎಲ್ಲರೂ ತಮ್ಮ ತಮ್ಮ ವಿಚಾರಗಳನ್ನು ಮಹಾರಾಜರಿಗೆ ಹೇಳುತ್ತಿದ್ದರು. ಬಸವಣ್ಣನವರು ತಮ್ಮ ಎರಡೂ ಕೈಗಳನ್ನು ಒಮ್ಮೆಲೆ ಮೇಲಕ್ಕೆ ಎತ್ತಿದರು. ಆಗ ಬಿಜ್ಜಳ ಮಹಾರಾಜರು ಕೇಳಿದರು: "ಏನು ಬಸವಣ್ಣನವರೆ, ರಾಜ್ಯದ ಬಗ್ಗೆ ಇಲ್ಲಿ ಚರ್ಚೆಗಳು ನಡೆಯುತ್ತಿರುವಾಗ ನೀವು ಒಮ್ಮೆಲೆ ತಮ್ಮ ಎರಡೂ ಕೈಗಳನ್ನು ಮೇಲಕ್ಕೆ ಎತ್ತಿ ಹಿಡಿದಿರಿ?" ಎಂದು ಪ್ರಶ್ನೆ ಮಾಡಿದರು. "ಮಹಾಪ್ರಭು, ಕ್ಷಮೆ ಇರಲಿ. ನಿಮ್ಮ ರಾಜ ಮಾರ್ಗದಲ್ಲಿ ಒಬ್ಬ ಹೆಣ್ಣುಮಗಳು ಮೊಸರಿನ ಗಡಿಗೆಯನ್ನು ಹೊತ್ತುಕೊಂಡು ಮೊಸರು ಮಾರಲು ಹೋಗುತ್ತಿದ್ದಳು. ಮಳೆಯಾದ ಕಾರಣ ಆ ದಾರಿಯು ಸಂಪೂರ್ಣ ಕೆಸರುಮಯವಾಗಿ ಆಕೆಯ ಕಾಲು ಜಾರಿತು. ಮೊಸರಿನ ಗಡಿಗೆ ಕೆಳಗೆ ಬೀಳುತ್ತದೆ ಎಂದುಕೊಂಡು ಆ ತಾಯಿ 'ಬಸವಣ್ಣಾ' ಎಂದು ಕೂಗಿದಳು. ನಾನು ತಕ್ಷಣ ಮೊಸರಿನ ಗಡಿಗೆ ಕೆಳಗೆ ಬೀಳದಂತೆ ಎರಡೂ ಕೈಯಿಂದ ಹಿಡಿದುಕೊಂಡೆ" ಎಂದು ಬಿಜ್ಜಳ ಮಹಾರಾಜರಿಗೆ ಬಸವಣ್ಣನವರು ಹೇಳಿದರು. ಆಗ ಮಹಾರಾಜರು "ಏನು ಮಹಾಮಂತ್ರಿಗಳೆ, "ನೀವು ಇಲ್ಲೇ ಇರುವಿರಿ. ಆ ಮೊಸರು ಗಡಿಗೆಯನ್ನು ನಿಮ್ಮ ಕೈಯಿಂದ ಹಿಡಿಯಲು ಹೇಗೆ ಸಾಧ್ಯವಾಯಿತು?" ಎಂದು ಕೇಳಿದರು. ಆಗ ಬಸವಣ್ಣನವರು ಮಹಾರಾಜರಾದ ತಾವೇ ಈ ಕುರಿತು ವಿಚಾರಿಸಬಹುದು" ಎಂದರು.

ಆಗ ಮಹಾರಾಜರು ರಾಜಭಟರನ್ನು ಕರೆದು "ರಾಜಮಾರ್ಗದಲ್ಲಿ ಮೊಸರು ಮಾರುವ ಆ ಹೆಣ್ಣುಮಗಳನ್ನು ವಿಚಾರಿಸಿಕೊಂಡು ಬನ್ನಿ" ಎಂದು ಅಪ್ಪಣೆ ಮಾಡಿದರು. ರಾಜರ ಅಪ್ಪಣೆಯಂತೆ ಸೇವಕರು ಮೊಸರು ಮಾರುತ್ತಿದ್ದ ಶಿವಶರಣೆ ಗೌಳಗಿತ್ತಿ ಗೌರವ್ವಳನ್ನು ವಿಚಾರಿಸಿದಾಗ "ಹೌದು. ನಾನು ಮೊಸರಿನ ಗಡಿಗೆಯನ್ನು ಹೊತ್ತುಕೊಂಡು ಮಾರಲು ಬರುತ್ತಿದ್ದೆ. ಒಮ್ಮೆಲೆ ನನ್ನ ಕಾಲು ಜಾರಿತು. ನನ್ನ ಮೊಸರಿನ ಗಡಿಗೆ ಕೆಳಗೆ ಬೀಳುತ್ತಿತ್ತು. ಆಗ ನಾನು ನನ್ನ ಗುರು 'ಬಸವಣ್ಣಾ' ಎಂದು ಕೂಗಿದೆ. ನಾನು ಕಾಲು ಜಾರಿ ಕೆಳಗೆ ಬಿದ್ದೆ. ಆದರೆ ನನ್ನ ಮೊಸರಿನ ಗಡಿಗೆ ಮಾತ್ರ ಮೇಲೆಯೇ ನಿಂತಿತ್ತು. ನಾನು ಎದ್ದು ನನ್ನ ಮೊಸರು ಗಡಿಗೆಯನ್ನು ತಲೆಯ ಮೇಲೆ ಹೊತ್ತುಕೊಂಡು ಮೊಸರು ಮಾರಲು ಹೊರಟೆ" ಎಂದು ರಾಜಭಟರಿಗೆ ತಿಳಿಸಿದಳು. ರಾಜಭಟರು ಬಂದು ಅಲ್ಲಿ ಕೇಳಿದ ಸಂಗತಿಯನ್ನು ಮಹಾರಾಜರಿಗೆ ವರದಿ ಮಾಡಿದರು. ಆಗ ಬಿಜ್ಜಳ ಮಹಾರಾಜರು ತಮ್ಮ ಸಿಂಹಾಸನದಿಂದ ಎದ್ದು ಬಂದು "ಬಸವಣ್ಣಾ, ಧನ್ಯ ಧನ್ಯ. ಎಂಥ ಅಮೂಲ್ಯ ರತ್ನಗಳ ರಾಶಿ ನನ್ನ ರಾಜ್ಯದಲ್ಲಿದೆ ಇಂಥ ಮಹಾಮಹಿಮರನ್ನು ಪ್ರತ್ಯಕ್ಷ ಕಾಣುವ ಸುಯೋಗ ನನಗಿಂದು ದೊರೆಯಿತು. ಕಲ್ಯಾಣ ನಗರದ ಹೆಸರು ನಿಮ್ಮಿಂದ ಅಮರವಾಗಲಿ. ನೀವಷ್ಟೇ ದೊಡ್ಡವರಾಗದೆ ಇತರರನ್ನೂ ನಿಮ್ಮ ಮಟ್ಟಕ್ಕೆ ಏರಿಸಲು ಮಾಡಿರುವ ಪ್ರಯತ್ನ ಅದ್ಭುತ" ಎಂದರು. 'ಶರಣು ಬಸವಣ್ಣನವರೇ' ಎಂದು ಹೇಳಿ ಚರ್ಚೆಯನ್ನು ಮುಂದುವರೆಸಿದರು.

ಜಾಗೃತಾವಸ್ಥೆಯಲ್ಲಿ ಹದಿನಾಲ್ಕು ಲೋಕಗಳನ್ನು ಕಂಡವರು ನಮ್ಮ ಶರಣರು. ಸುಷುಪ್ತಾವಸ್ಥೆಯಲ್ಲಿ ಹಿಮಾಲಯವ ಕಂಡರು ನಮ್ಮ ಶರಣರು. ಸ್ವಪ್ನಾವಸ್ಥೆಯಲ್ಲಿ ನಮ್ಮ ಶರಣ ಅಜಗಣ್ಣ ತ್ರಿವಿಧದಾಸೋಹವನ್ನು ಕಂಡರು.

**ಅಲ್ಲಮಪ್ರಭುಗಳು**

ಕಲ್ಯಾಣವೆಂಬ ಪ್ರಣತಿಯಲ್ಲಿ ಭಕ್ತಿರಸವೆಂಬ ತೈಲವನೆರೆದು
ಆಚಾರವೆಂಬ ಬತ್ತಿವುಂಟು
ಬಸವಣ್ಣನೆಂಬ ಜ್ಯೋತಿಯ ಮುಟ್ಟಿಸಲು
ತೊಳಗಿ ಬೆಳಗುತಿರ್ದಿತಯ್ಯ
ಶಿವನ ಪ್ರಕಾಶ

**ಡಾ. ಸಿದ್ದಯ್ಯ ಪುರಾಣಿಕರು**

ಬಸವನ ಬೆಳಕೆ ಎಲ್ಲಾಡಿ ಬಂದೆ
ಭಾರತವೆಲ್ಲ ಸುತ್ತಾಡಿ ಬಂದೆ
ನಿಟ್ಟುಸಿರೆದೆಯನ್ನು ಬೆಳಗಿಸಿ ಬಂದೆ
ನಿರಾಶೆಯೆದೆಯನು ತೊಳಗಿ ಬಂದೆ
ಹೆಣ್ಣಿನ ಕಂಬನಿ ಬತ್ತಿಸಿ ಬಂದೆ

ಆಶಾಜ್ಯೋತಿಯ ಹೊತ್ತಿಸಿ ಬಂದೆ
ದೀನರ ಬಾಳನು ಮುಸುಕಿದ ಕಾವಳ
ಕಬಳಿಸಿ ಬಂದೆ ಧವಳಿಸಿ ಬಂದೆ

ಲಿಂಗಮಯನಾದ ಭಕ್ತನ ಹಿರಿಮೆಯನ್ನು ಈ ಮಾತುಗಳಲ್ಲಿ ಕಾಣಬಹುದು. ಭಕ್ತನ ಮುಖದರ್ಪಣದಲ್ಲಿ ಅಂದರೆ ಆತನ ಪರಿಶುದ್ಧವಾದ ಇಂದ್ರಿಯಗಳಲ್ಲಿ ಲಿಂಗವನ್ನೇ ಕಾಣಬಹುದು. ಆತನ ಇಂದ್ರಿಯ ವ್ಯವಹಾರಗಳೆಲ್ಲಾ ಲಿಂಗಮಯವಾದವುಗಳು. ಸದಾ ಜಾಗೃತನಾದ ಭಕ್ತನನ್ನು ಅನಿಮಿಷ ಎಂದು ಬಸವಣ್ಣನವರು ಒಂದು ವಚನದಲ್ಲಿ ಕರೆದಿದ್ದಾರೆ. ಅಂತಹ ಭಕ್ತನ ಅಂತರಂಗದಲ್ಲಿ ಜ್ಞಾನರೂಪನಾದ ದೇವ ನೆಲೆಗೊಳ್ಳುತ್ತಾನೆ. ಅಂತಹ ಭಕ್ತನ ಮಾತುಗಳಲ್ಲಿ ಭಗವಂತ ಅಭಿವ್ಯಕ್ತಗೊಳ್ಳುತ್ತಾನೆ.

ಬಸವಣ್ಣನೆಂಬ ಮಹಾಮಂತ್ರದಿಂದ ಕಲ್ಯಾಣರಾಜ್ಯದ ಜನರು ಸತ್ಯಶುದ್ಧ ಕಾಯಕ ಹಾಗೂ ದಾಸೋಹ ತತ್ವಗಳನ್ನು ಅಳವಡಿಸಿಕೊಂಡು ಶರಣ ಜೀವನ ನಡೆಸತೊಡಗಿದರು.

**ಶ್ರೀ ಶಿವಯೋಗಿ ಸಿದ್ಧರಾಮೇಶ್ವರರು:** ಶ್ರೀ ಶಿವಯೋಗಿ ಸಿದ್ಧರಾಮನು ಎಂಟು–ಹತ್ತು ವರುಷದ ಬಾಲಕ. ಮನೆಯಲ್ಲಿ ಸದಾ ಏನೋ ಯೋಚಿಸುತ್ತಿದ್ದನು ಮತ್ತು ಏಕಾಂಗಿಯಾಗಿರುತ್ತಿದ್ದನು. ಇದನ್ನು ಕಂಡು ಆತನ ತಂದೆತಾಯಿಯರು ತಮ್ಮ ಮಗನನ್ನು ದನ ಕಾಯುವ ಹುಡುಗರ ಸಂಗಡ ಕಳಿಸಿದರು. ನಮ್ಮ ದನಗಳನ್ನು ಕಾಯಲು ಕಳಿಸಿದರೆ ಮಾತಾಡಲು ಕಲಿಯಬಹುದು, ಹಸಿವೆಯಾಗಿ ಉಣಬಹುದೆಂದು ಯೋಚಿಸಿ ಆ ಕಾಯಕಕ್ಕೆ ಹಚ್ಚಿದರು ದನಕಾಯುವ ಹುಡುಗರಿಗೆ ಸಿದ್ಧರಾಮನನ್ನು ಗಮನಿಸುವಂತೆ ತಂದೆ–ತಾಯಿಗಳು ತಿಳಿಸುತ್ತಾರೆ.

ಬುತ್ತಿ ಕಟ್ಟಿಕೊಟ್ಟು ದನಗಳನ್ನು ಕಾಯಲು ಇತರ ಹುಡುಗರ ಸಂಗಡ ಕಳಿಸಿಕೊಟ್ಟರು. ಎಲ್ಲ ಹುಡುಗರೂ ಅತ್ತ ದನಗಳನ್ನು ಮೇಯಲು ಬಿಟ್ಟು ಆಟಗಳಲ್ಲಿ ತೊಡಗುತ್ತಿದ್ದರು. ಆದರೆ ಸಿದ್ಧರಾಮ ಮಾತ್ರ ಮಾವಿನಮರದ ಕೆಳಗೆ ಶಿವಲಿಂಗದ ಮುಂದೆ ಕುಳಿತು ಬಿಡುತ್ತಿದ್ದ. ಊಟದ ಸಮಯಕ್ಕೆ ಎಲ್ಲ ಹುಡುಗರೂ ತಮ್ಮ ಬುತ್ತಿಯನ್ನು ಬಿಚ್ಚಿ ಊಟ ಮಾಡುತ್ತಿದ್ದರು. ಸಿದ್ಧರಾಮನು ಮಾತ್ರ ಊಟ ಮಾಡದೇ ಇತರರಿಗೆ ಬುತ್ತಿ ಬಿಚ್ಚಿ ಹಂಚುತ್ತಿದ್ದನು.

ಒಂದು ಸಂಜೆ ಸಿದ್ಧರಾಮನು ಬೆಳೆದು ನಿಂತಿದ್ದ ನವಣೆಯ ಹೊಲದ ದಂಡೆಯಲ್ಲಿ ನಿಂತಿದ್ದನು. ಸಂಗಡಿಗರು ದನಗಳನ್ನು ಒಂದುಗೂಡಿಸಲು ಆ ಕಡೆ ಈ ಕಡೆ ಹೋಗಿದ್ದಾರೆ, ಗಾಳಿ ಬೀಸುತ್ತಾ ಇತ್ತು ಆ ಹೊಂಬಿಸಿಲಿನಲ್ಲಿ ಯಾವುದೇ ನಿರೀಕ್ಷೆಯಲ್ಲಿ ತೊಡಗಿದವನಂತೆ ಭಾಸವಾಗುತ್ತಿತ್ತು.

ಶಿವನು ತನ್ನ ನಿಜರೂಪವನ್ನು ಮರೆಮಾಚಿ ಅಲ್ಲಿ ಜಂಗಮವೇಷದಲ್ಲಿ ಪ್ರತ್ಯಕ್ಷನಾದನು. ಗಂಭೀರವಾದ ಮುಖಮುದ್ರೆ, ತೇಜಸ್ವಿ ಕಣ್ಣುಗಳು, ಹಣೆಯ ಮೇಲೆ ವಿಭೂತಿ, ಮೈತುಂಬ

ಕಾವಿ ಬಟ್ಟೆ, ಕೊರಳಲ್ಲಿ ರುದ್ರಾಕ್ಷಿಮಾಲೆ, ಕಾಲಲ್ಲಿ ಹಾವುಗೆಗಳುಳ್ಳ ಜಂಗಮ ಮೂರ್ತಿಯನ್ನು ಕಂಡು ಸಿದ್ಧರಾಮ ಆನಂದಾತಿಶಯದಿಂದ ಕುಣಿದು ಮೈಮರೆತು ಹಾಡುತ್ತಾ ಧನ್ಯತಾಭಾವದಿಂದ ಅವರ ಪಾದಕ್ಕೆರಗುತ್ತಾನೆ. ಅನಂತರ ನಿಧಾನವಾಗಿ ಆ ಜಂಗಮನನ್ನು ಎವೆಯಿಕ್ಕದೆ ಕಣ್ತುಂಬ ನೋಡುತ್ತಾನೆ.

"ದೇವಾ, ನಿನ್ನನ್ನು ಕಾಣಲು ಬಹುದಿನಗಳಿಂದ ಹಂಬಲಿಸುತ್ತಿದ್ದೆ. ಇಂದು ಕಂಡೆ. ನನಗೆ ಅತೀವ ಆನಂದವಾಗಿದೆ" ಎನ್ನುತ್ತಿದ್ದಂತೆ ಸಿದ್ಧರಾಮನ ಕಣ್ಣುಗಳಿಂದ ಆನಂದ ಬಾಷ್ಪಗಳು ಉದುರಿದವು. ಆ ಜಂಗಮನು ಸಿದ್ಧರಾಮನನ್ನು ಎತ್ತಿಕೊಂಡು ತನ್ನ ಎದೆಗವಚಿಕೊಂಡ. ಅವನ ಅದ್ಭುತಹಸ್ತದಿಂದ ಸಿದ್ಧರಾಮನ ತನು ಪುಲಕಿತವಾಯಿತು. ಕೆಲಹೊತ್ತು ಇಬ್ಬರೂ ಮೈಮರೆತು ಆಲಿಂಗನದ ಬಂದಿಯಾಗಿದ್ದರು. ಸಿದ್ಧರಾಮನ ಅಂಗಾಂಗಗಳಲ್ಲಿ ಯಾವುದೋ ತೇಜೋಶಕ್ತಿ ಸಂಚರಿಸತೊಡಗಿತ್ತು. ಜಂಗಮನು ಸಿದ್ಧರಾಮನನ್ನು ಎಚ್ಚರಿಸುತ್ತ "ಮಗು, ನನಗೆ ಬಹಳ ಹಸಿವಾಗಿದೆ. ತಿನ್ನಲು ಏನಾದರೂ ಕೊಡುವೆಯಾ" ಎಂದು ಕೇಳಿದರು ಸಿದ್ಧರಾಮರಿಗೆ ತಟ್ಟನೆ ಯೋಚನೆಯೊಂದು ಹೊಳೆಯಿತು. ಅವನು ತನ್ನ ಹೆಗಲ ಮೇಲಿದ್ದ ಕಂಬಳಿಯನ್ನು ನೆಲದ ಮೇಲೆ ಹಾಸಿದನು. "ಪೂಜ್ಯರೆ, ಇದರ ಮೇಲೆ ಕುಳಿತುಕೊಳ್ಳಿರಿ" ಎಂದು ವಿನಂತಿಸಿದನು. ಬೆಳೆದು ನಿಂತ ನವಣೆ ತೆನೆಗಳನ್ನು ಸುಟ್ಟು ಜಂಗಮರಿಗೆ ತಿನ್ನಲು ಕೊಟ್ಟನು. ಆದರೂ ಜಂಗಮನ ಹಸಿವು ತೃಪ್ತಿಯಾದಂತೆ ಕಾಣಲಿಲ್ಲ. ಶಿವನ ಅವತಾರವಾಗಿದ್ದ ಆ ಜಂಗಮರು, "ಮಗು, ಮನೆಗೆ ಹೋಗಿ ಮೊಸರನ್ನ ತರುವೆಯಾ" ಎಂದು ಕೇಳಲು "ತರುತ್ತೇನೆ ಸ್ವಾಮಿ" ಎಂದು ನಡೆದೇ ಬಿಟ್ಟ ಸಿದ್ಧರಾಮ. ಅವನ ಆನಂದಕ್ಕೆ ಪಾರವೇ ಇಲ್ಲವಾಯಿತು. "ನಾನು ಓಡುತ್ತಾ ಹೋಗಿ ತಡಮಾಡದೆ ತರುತ್ತೇನೆ" ಎಂದು ಹೆಜ್ಜೆ ಹಾಕಿದವನೆ ಬುತ್ತಿ ತರುವಷ್ಟರಲ್ಲಿ ಜಂಗಮನು ಹೊರಟು ಹೋದರೆ ಏನು ಮಾಡುವುದು ಎಂಬ ಶಂಕೆ ಬಾಧಿಸಿತು. ತಟ್ಟನೆ ನಿಂತು ಅಂಜುತ್ತ ಅಳುಕುತ್ತಾ ಕೇಳಿದ "ದೇವಾ, ತಮ್ಮ ಹೆಸರೇನು? ಜಂಗಮನು "ನನಗೆ ಮಲ್ಲಯ್ಯಾ, ಮಲ್ಲಿನಾಥ, ಮಲ್ಲಿಕಾರ್ಜುನ ಎಂದು ಕರೆಯುತ್ತಾರೆ" ಎಂದು ಹೇಳಿದನು. ಆಗ ಮತ್ತೆ ಸಿದ್ಧರಾಮನು "ಸ್ವಾಮಿ, ತಾವು ಇರುವುದೆಲ್ಲಿ" ಎಂದು ಕೇಳಿದನು. ನಾನು ಇರುವುದು ಶ್ರೀಶೈಲದಲ್ಲಿ ಎಂದರು. ನಾನು ಬರುವವರೆಗೆ ನೀವಿಲ್ಲಿಯೇ ಇರಬೇಕು ಎಂದು ಹೇಳಿ ಓಡುತ್ತ ಮನೆಗೆ ಹೋದ ಸಿದ್ಧರಾಮ. ದಿನಕ್ಕಿಂತಲೂ ಮುಂಚಿತವಾಗಿ ಬಂದ ಮಗನನ್ನು ಕಂಡು ತಾಯಿ ಸುಗ್ಗವ್ವೆ ಚಕಿತಳಾದಳು. ಮನೆಗೆ ಬಂದವನೆ "ಅವ್ವಾ ಅವ್ವಾ ಬೇಗ ಮೊಸರನ್ನ ಮಾಡಿ ಕೊಡಮ್ಮಾ. ಮಲ್ಲಯ್ಯನಿಗೆ ಹಸಿವಾಗಿದೆಯಂತೆ". ತನ್ನ ಮಗ ತಾನಾಗಿಯೇ ಬಂದು ಅವ್ವಾ ಎಂದು ಬಾಯ್ತುಂಬ ಕರೆದು ಮೊಸರನ್ನವನ್ನು ಕೇಳಿದನಲ್ಲಾ ಎಂದು ಆಕೆ ತನ್ನ ಕಿವಿಯನ್ನು ತಾನೇ ನಂಬದಾದಳು. ಸಂತೋಷದಿಂದ ಮೈಮರೆತು ಗೊಂಬೆಯಂತೆ ನಿಂತಳು.

ಆದರೆ ಸಿದ್ಧರಾಮನು "ಬೇಗ ಕೊಡಮ್ಮಾ, ಮಲ್ಲಯ್ಯ ನನ್ನ ದಾರಿ ಕಾಯುತ್ತಿದ್ದಾನೆ" ಎಂದು ಅವಸರಪಡಿಸಿದಾಗ ಎಚ್ಚೆತ್ತು ಗಡಿಬಿಡಿಯಿಂದ ಸುಗ್ಗವ್ವೆ ಅನ್ನ ಮಾಡಿ ಮೊಸರನ್ನು ಕಲಿಸಿ ಬುತ್ತಿ ಕಟ್ಟಿ, "ಕಂದಾ ತಗೋ ಬುತ್ತಿ ಕೊಟ್ಟು ಬೇಗ ಬಾ" ಎಂದು ಸಿದ್ಧರಾಮನ ಕೈಗಿತ್ತಳು.

ಬುತ್ತಿ ಹಿಡಿದುಕೊಂಡು ಓಡುತ್ತಾ ಸಿದ್ಧರಾಮ ನವಣೆಹೊಲಕ್ಕೆ ಬಂದನು. ಆಗಲೇ ಸೂರ್ಯನು ಪಶ್ಚಿಮದಿಕ್ಕಿನಲ್ಲಿ ಮುಳುಗುತ್ತಿದ್ದನು. ಮಬ್ಬುಕತ್ತಲೆ ಆವರಿಸತೊಡಗಿತ್ತು. ಅವನ ಸಂಗಡಿಗರು ಯಾರೂ ಕಾಣಲಿಲ್ಲ. ತಾನು ಹಾಸಿದ ಕಂಬಳಿಯ ಮೇಲೆ ಮಲ್ಲಯ್ಯನೂ ಕಾಣಲಿಲ್ಲಾ. ಹಾಸಿದ ಕಂಬಳಿ ಮಾತ್ರ ಗುಂಪಾಗಿ ಬಿದ್ದಿತ್ತು. 'ಇಲ್ಲೇ ಇರುತ್ತೇನೆ ಎಂದು ಹೇಳಿದ ಮಲ್ಲಯ್ಯ ಎಲ್ಲಿಗೆ ಹೋಗಿರಬಹುದು' ಎಂದು ಚಿಂತಿತನಾಗಿ 'ಮಲ್ಲಯ್ಯಾ ಮಲ್ಲಯ್ಯಾ' ಎಂದು ಒಂದೇ ಸವನೆ ಕೂಗುತ್ತಾ ಎಲ್ಲ ಕಡೆಗೂ ಓಡಾಡಿದ. ಆದರೆ ಎಲ್ಲೂ ಪ್ರತ್ಯುತ್ತರ ಬರಲಿಲ್ಲ. ಮಲ್ಲಯ್ಯ ಎಲ್ಲಿಗೆ ಹೋದ ಎಂದುಕೊಂಡ ಸಿದ್ಧರಾಮನಿಗೆ ಅತ್ಯಂತ ನಿರಾಶೆಯಾಯಿತು.

ಆದರೂ ಸಿದ್ಧರಾಮನು ಕಂಗೆಡಲಿಲ್ಲ. ಶ್ರೀಶೈಲ ಮಲ್ಲಯ್ಯನನ್ನು ಅರಸುತ್ತಾ ಮಲ್ಲಯ್ಯಾ ಮಲ್ಲಯ್ಯಾ ಎಂದು ಭಾವೋದ್ವೇಗದಿಂದ ಕೂಗುತ್ತಾ ಹೊರಟನು. ಕತ್ತಲಾವರಿಸಿತು ಅದರ ಪರಿವೆಯೇ ಇಲ್ಲದೇ ದಟ್ಟ ಅಡವಿಯಲ್ಲಿ ಪ್ರತಿಧ್ವನಿಸಿತು ಅವನ ಕೂಗು. ಸಿದ್ಧರಾಮನು ಧೃತಿಗೆಡದೆ ಮಲ್ಲಯ್ಯನನ್ನು ಕಾಣುವವರೆಗೆ ಬಿಡುವುದಿಲ್ಲವೆಂಬ ಅಚಲ ನಿರ್ಧಾರದೊಂದಿಗೆ ಹೊರಟ. ಎಂಥ ವೈರಾಗ್ಯಪೂರ್ಣ ಛಲ ಸಿದ್ಧರಾಮನದು!

ಅತ್ತ ಶ್ರೀಶೈಲ ಮಲ್ಲಯ್ಯಾ ಉಘೇ ಉಘೇ ಎಂಬ ಧ್ವನಿ ಕೇಳಿಸಿತು. ಕಿವಿಗೊಟ್ಟು ಕೇಳಿದ ಧ್ವನಿ ಹತ್ತಿರಕ್ಕೆ ಬಂದಂತಾಯಿತು. ನಾಡಿನ ವಿವಿಧ ಭಾಗಗಳಿಂದ ಕಂಬಿಯನ್ನು ಹೊತ್ತುಕೊಂಡು ಶ್ರೀಶೈಲಕ್ಕೆ ಪರಿಷೆ ಹೊರಟಿತ್ತು. ಅವರನ್ನು ಕಂಡ ಸಿದ್ಧರಾಮನಿಗೆ ಎಲ್ಲಿಲ್ಲದ ಸಂತೋಷವಾಯಿತು ಪರಿಷೆಯವರೊಂದಿಗೆ ಕೂಡಿಕೊಂಡ. ಅವರು "ಮಗು, ನಿನ್ನ ಹೆಸರೇನು? ನೀನು ಎಲ್ಲಿಂದ ಬಂದೆ?" ಎಂದು ಸಿದ್ಧರಾಮನನ್ನು ಕೇಳತೊಡಗಿದರು. ಬಾಲಕ ಸಿದ್ಧರಾಮನು ನನಗೆ ಶ್ರೀಶೈಲ ಮಲ್ಲಯ್ಯನನ್ನು ತೋರಿಸುತ್ತೀರಾ ಎಂದು ಪ್ರಶ್ನಿಸಿದ. "ಕಿರಿಯ ವಯಸ್ಸಿನಲ್ಲಿ ಎಂಥ ಹಿರಿದಾದ ಭಕ್ತಿ ಇವನದು" ಎಂದು ಪರಿಷೆಯ ಜನರು ಬೆರಗಾದರು.

ಅತ್ತ ಶ್ರೀಶೈಲದತ್ತ ಹೊರಟ ಪರಿಷೆಯ ಯಾತ್ರಿಕರೊಡನೆ ಭಕ್ತಿಯಿಂದ ಮಲ್ಲಯ್ಯಾ ಉಘೇ ಎನ್ನುತ್ತಾ ಸಿದ್ಧರಾಮನು ಮಲ್ಲಯ್ಯನನ್ನು ಕಾಣುವ ತವಕದಲ್ಲಿ ಹೆಜ್ಜೆ ಹಾಕತೊಡಗಿದನು. ಸೂರ್ಯೋದಯದ ಸಮಯ. ಸೂರ್ಯನ ಹೊಂಗಿರಣಗಳು ಧರೆಗೆ ಮುತ್ತಿಡುತ್ತಿದ್ದವು. ಸಿದ್ಧರಾಮನಿಗೆ ಗಿರಿಶಿಖರಗಳನ್ನು ಕಂಡು ಎಲ್ಲಿಲ್ಲದ ಸಂತೋಷವೆನಿಸಿತು. ಶ್ರೀಶೈಲ ಮಲ್ಲಯ್ಯನ ಗುಡಿಯ ಶಿಖರ ಕಾಣುತ್ತಿದ್ದಂತೆ ಯಾತ್ರಿಕರು

"ಮಲ್ಲಯ್ಯಾ ಉಘೇ, ಶ್ರೀಶೈಲ ಮಲ್ಲಯ್ಯಾ ಉಘೇ" ಎಂದು ಜಯಘೋಷ ಮಾಡುತ್ತ ಭಕ್ತಿಯಿಂದ ಕೈಮುಗಿದರು. ಸಿದ್ಧರಾಮನ ಸಂತೋಷಕ್ಕೆ ಪಾರವೇ ಇರಲಿಲ್ಲ; ಆನಂದಸಾಗರದಲ್ಲಿ ಭಕ್ತಿಯಿಂದ ತೇಲಾಡಿದ.

ಸಿದ್ಧರಾಮನಿಗೆ ತಾನು ಹೊಲದಲ್ಲಿ ಕಂಡ ಮಲ್ಲಯ್ಯನನ್ನು ಕಾಣುವ ತವಕ. ದೇವಾಲಯದ ಸುತ್ತ ಮಲ್ಲಯ್ಯನಿಗಾಗಿ ಹುಡುಕಾಡಿದ ತನ್ನ ಮಲ್ಲಯ್ಯ ಈ ಗುಡಿಯೊಳಗೆ ಇರಬಹುದೆಂದು ಯೋಚಿಸಿ ಉತ್ಸಾಹದಿಂದ ಎಲ್ಲ ಕಡೆಗೂ ಓಡಾಡಿದ. ಮಲ್ಲಯ್ಯ ಕಾಣಲಿಲ್ಲ. ಗರ್ಭಗುಡಿಯಲ್ಲಿ ಜ್ಯೋತಿರ್ಲಿಂಗಕ್ಕೆ ನಮಸ್ಕರಿಸಿದ. ತನ್ನ ಹೊಲದಲ್ಲಿಯ ಮಾವಿನಗಿಡದ ಕೆಳಗಿದ್ದ ಲಿಂಗದ ನೆನಪಾಯಿತು. ತಾನು ಕಂಡ ಮಾರುವೇಷದ ಜಂಗಮ ಮಲ್ಲಯ್ಯನಿಗಾಗಿ ಹುಡುಕಾಡಹತ್ತಿದ. ಯಾತ್ರಿಕರು ಬಂದು "ಮಗು, ಸಿದ್ಧರಾಮ. ಶೀಶೈಲ ಮಲ್ಲಯ್ಯಾ ಇವರೇ ನೋಡು" ಎನ್ನುತ್ತಾ ಗರ್ಭಗುಡಿಯಲ್ಲಿದ್ದ ಜ್ಯೋತಿರ್ಲಿಂಗದತ್ತ ಬೆರಳು ಮಾಡಿ ತೋರಿಸಿದಾಗ ಸಿದ್ಧರಾಮನು, "ಇದು ಸ್ಥಾವರಲಿಂಗ. ಇದಕ್ಕೆ ಜೀವಕಳೆ ಇಲ್ಲ. ಇದು ಶಿಲೆಯ ಮೂರ್ತಿ. ನಾ ಕಂಡ ಮಲ್ಲಯ್ಯಾ ಇವನಲ್ಲಾ. ನನಗೆ ನಡೆದಾಡುವ, ಮಾತಾಡುವ ಜಂಗಮವೇಷದ ಮಲ್ಲಯ್ಯ ಬೇಕು. ಇಂಥ ನಿರ್ಜೀವಲಿಂಗವನ್ನು ಮಲ್ಲಯ್ಯನೆಂದು ಹೇಗೆ ಒಪ್ಪಲು ಸಾಧ್ಯ? ಅವನು ಸಿಗುವವರೆಗೆ ನಾನು ಹುಡುಕುವುದನ್ನು ನಿಲ್ಲಿಸುವುದಿಲ್ಲ" ಎಂದನು. ಯಾತ್ರಿಕರೆಲ್ಲರೂ ವಿಸ್ಮಯಗೊಂಡು ನೋಡುತ್ತಿರಲು ಸಿದ್ಧರಾಮ ಕಾಡಿನಲ್ಲಿ ಬಹುದೂರ ಓಡಿದ, ಯಾರ ಕೈಗೂ ಸಿಗಲಿಲ್ಲ. ಯಾರ ಕಣ್ಣಿಗೂ ಬೀಳಲಿಲ್ಲ ಕಾಡು ಪ್ರಾಣಿಗಳು ಹಾಗೂ ಸರ್ಪಗಳ ಹೆದರಿಕೆ ಅವನಿಗಿರಲಿಲ್ಲ. ಎಲ್ಲ ದಿಕ್ಕುಗಳತ್ತ ಹುಡುಕ ಹತ್ತಿದ. ಅವನ ಕೂಗಿಗೆ ಗಿರಿಕಂದರಗಳು ಪ್ರತಿಧ್ವನಿಸಿದವು. ಮಲ್ಲಯ್ಯಾ ಮಲ್ಲಯ್ಯಾ ಎಂದು ಕೂಗಿ ಕರೆದನು. ಸಿದ್ಧರಾಮನು ಎಷ್ಟು ಕರೆದರೂ ಮಲ್ಲಯ್ಯನು ಓಗೊಡದಿದ್ದಾಗ ಸಿದ್ಧರಾಮನು ಉದ್ವೇಗಕ್ಕೆ ಒಳಗಾದ. ಎತ್ತೆತ್ತಲೋ ಸುತ್ತಾಡಿದ. ಒಂದು ಕಡೆ ನಿಂತು ಬಿಟ್ಟ ಕಣ್ಣು ಬಿಟ್ಟು ಕೆಳಗೆ ನೋಡಿದ ಆಳವಾದ ಕೊಳ್ಳ ಕಾಣಿಸಿತು. ಮಲ್ಲಯ್ಯನನ್ನು ಹುಡುಕಲು ವಿಫಲನಾದ ನಾನು ಇದ್ದೆನು ಫಲ ಎಂದುಕೊಂಡವನೇ 'ಮಲ್ಲಯ್ಯಾ ಮಲ್ಲಿನಾಥಾ' ಎಂದು ಜೋರಾಗಿ ಕೂಗುತ್ತಾ ಕಣ್ಮುಚ್ಚಿ ಆ ರುದ್ರಭೀಕರ ಕೊಳ್ಳದಲ್ಲಿ ಸಿದ್ಧರಾಮ ಹಾರಿಬಿಟ್ಟ.

ಸಿದ್ಧರಾಮನ ಛಲದ ಭಕ್ತಿಯನ್ನು ಕಂಡು ಮಲ್ಲಿನಾಥನು ಹೃದಯತುಂಬಿ ಹರಸಿ, ಹಿಡಿದೆತ್ತಿ ತನ್ನ ತೊಡೆಯ ಮೇಲೆ ಮಲಗಿಸಿಕೊಂಡ. ತನ್ನ ಎರಡೂ ಹಸ್ತದಿಂದ ಮಲ್ಲಯ್ಯನು ತನ್ನ ಮೈಸವರುತ್ತಿರುವಂತೆ ಸಿದ್ಧರಾಮನಿಗೆ ಎಚ್ಚರವಾಗಿ ಕಣ್ಣುಬಿಟ್ಟು ನೋಡುತ್ತಾನೆ, ತನ್ನ ಕಣ್ಣುಗಳನ್ನು ತಾನೇ ನಂಬದಾದನು! ಇದೇನು ಕನಸೋ ಭ್ರಮೆಯೋ ನಿಜರೂಪದ ಸಾಕಾರವೋ ಎಂದುಕೊಂಡ. ಮಲ್ಲಯ್ಯ ಮುಗುಳುನಗೆ ಸೂಸಿದ. ಸಿದ್ಧರಾಮ ಆನಂದಸಾಗರದಲ್ಲಿ ತೇಲಿದನು. ಮಲ್ಲಯ್ಯನನ್ನು ಬಿಗಿಯಾಗಿ ಅಪ್ಪಿಕೊಂಡ.

ಆ ನಿರ್ಮಲ ಅಪ್ಪುಗೆಯಿಂದ ಪುಳಕಿತನಾದ. ಆನಂದಬಾಷ್ಪಗಳುದುರಿದವು. ಸಿದ್ಧರಾಮರಿಗೆ ಎಚ್ಚರ ಮೂಡಿದ ಮೇಲೆ ಮಲ್ಲಯ್ಯನೆಂದ "ಮಗು ಸಿದ್ಧರಾಮಾ, ನಿನ್ನ ಅಗಲಿಕೆಯಿಂದ ನಿನ್ನ ತಂದೆತಾಯಿಗಳು ನಿನ್ನನ್ನು ಕಾಣದೆ ಚಿಂತೆ ಮಾಡುತ್ತಿದ್ದಾರೆ. ನೀನು ಅಲ್ಲಿಗೆ ಹೋಗಿ ಅವರ ದುಃಖವನ್ನು ನಿವಾರಿಸು. ನಿನ್ನ ಸ್ವಾಮಿನಿಷ್ಠೆಗೆ ಮೆಚ್ಚಿದೆನು. ಆದರೆ ನನ್ನೊಡನೆ ಈ ಕಾಡಿನಲ್ಲಿರುವುದರಿಂದ ಏನೂ ಪ್ರಯೋಜನವಿಲ್ಲ. ನಿನ್ನಿಂದ ಲೋಕೋದ್ಧಾರವಾಗಬೇಕಾಗಿದೆ. ಬಡವರ ಕಂಬನಿ ಒರೆಸಬೇಕಾಗಿದೆ. ಕಾರಣ ನೀನು ಸೊಲ್ಲಾಪುರಕ್ಕೆ ಹೋಗಿ ಅದನ್ನು ಪುಣ್ಯಕ್ಷೇತ್ರವನ್ನಾಗಿ ಮಾಡು" ಎಂದು ಹೇಳಿ ಶ್ರೀಶೈಲ ಮಲ್ಲಯ್ಯನು ಬಯಲಲ್ಲಿ ಮಿಂಚಿ ಬಯಲಾದನು.

**ಸೊಲ್ಲಾಪುರಕ್ಕೆ ಆಗಮನ:** ಶಿವಯೋಗಿ ಸಿದ್ಧರಾಮೇಶ್ವರರು ಬಾಲಕರಿದ್ದಾಗ ಅನೇಕ ಕಷ್ಟಗಳನ್ನು ಅನುಭವಿಸಿದರು. ನಂತರ ಕೊನೆಗೆ ಶ್ರೀಶೈಲದ ಕಮರಿಕೊಳ್ಳದಲ್ಲಿ ಚೆನ್ನಮಲ್ಲಿಕಾರ್ಜುನನ ಸಾಕ್ಷಾತ್ಕಾರ ಆಯಿತು. ಈಗ ಆ ಕೊಳಕ್ಕೆ ಸಿದ್ಧರಾಮನ ಕೊಳ್ಳ ಅನ್ನುತ್ತಾರೆ. ಸಿದ್ಧರಾಮ ಅಷ್ಟಕ್ಕೆ ತೃಪ್ತರಾಗದೆ ಜನಸಾಮಾನ್ಯರಿಗೂ ಸಹ ಶಿವನ ದರ್ಶನ ಪಡೆಯಲು ಅನುಕೂಲವಾಗುವಂತೆ ಶ್ರೀಶೈಲ ಚೆನ್ನಮಲ್ಲಿಕಾರ್ಜುನನನ್ನು ಸೊಲ್ಲಾಪೂರಕ್ಕೆ ಬಂದು ನೆಲೆಸಬೇಕೆಂದು ಬೇಡಿಕೊಂಡರು. ಅದಕ್ಕೆ ಶಿವನು 'ತಥಾಸ್ತು' ಎಂದನು. ಶ್ರೀಶೈಲ ಮಲ್ಲಿಕಾರ್ಜುನರು ಸಿದ್ಧರಾಮರನ್ನು ಕುರಿತು, "ನೀನು ಸೊಲ್ಲಾಪುರವನ್ನು ಮುಟ್ಟುವ ದಿನವೇ ನೀನು ಗೊತ್ತುಪಡಿಸಿದ ಸ್ಥಳದಲ್ಲಿ ನಾನು ಶಿವಲಿಂಗರೂಪದಲ್ಲಿ ಕಂಗೊಳಿಸುವೆನು" ಎಂದು ಹೇಳಿದರು. ಮಾತಿಗೆ ತಕ್ಕಂತೆ ಶಿವಯೋಗಿ ಸಿದ್ಧರಾಮರ ಬಯಕೆಯನ್ನು ಪೂರ್ಣಗೊಳಿಸಿದನು.

ಶ್ರೀ ಶಿವಯೋಗಿ ಸಿದ್ಧರಾಮರು ಸಿದ್ಧಿಪುರುಷರು. ಅವರಿಗೆ ಅಸಾಧ್ಯವಾದದ್ದು ಯಾವುದು ಇದ್ದಿಲ್ಲ. ನುಡಿಯಲ್ಲಿ, ನಡೆಯಲ್ಲಿ, ಕೊಡುವಲ್ಲಿ, ಕೊಂಬಲ್ಲಿ, ನೆನವುಗಳಲ್ಲಿ ಸದಾ ಸರ್ವವೂ ಸಿದ್ಧವಾಗಿಯೇ ಇರುತ್ತಿದ್ದವು.

**ಮಣ್ಣನ್ನು ಹೊನ್ನಾಗಿ ಮಾಡಿದರು:** ಶ್ರೀ ಶಿವಯೋಗಿ ಸಿದ್ಧರಾಮೇಶ್ವರರು ಶಿವನ ಸಾಕ್ಷಾತ್ಕಾರವನ್ನು ಪಡೆದು ಸೊಲ್ಲಾಪುರದಲ್ಲಿ ನೆಲೆಸಿದರು. ಸುಕ್ಷೇತ್ರ ಸೊಲ್ಲಾಪುರಕ್ಕೆ ಬರುವ ಜನರ ಸಂಖ್ಯೆ ಬೆಳೆಯತೊಡಗಿತು. ಜನರಿಗೆ ಪಶು-ಪಕ್ಷಿಗಳಿಗೆ ಅನುಕೂಲಕ್ಕಾಗಿ ಕೆರೆಯ ನಿರ್ಮಾಣ ಮಾಡುವದು ಅವಶ್ಯಕ ಎಂಬುದನ್ನು ಮನಗಂಡು ಸಿದ್ಧರಾಮರು ಸೂಕ್ತ ಸ್ಥಳವನ್ನು ಆರಿಸಿ ಕೆರೆಯ ನಿರ್ಮಾಣದಲ್ಲಿ ತೊಡಗಿದರು. ಶಿವಯೋಗಿಗಳು ಮಹಾ ತಪಸ್ವಿಗಳು, ಹಾಗೂ ಸಾಮಾಜಿಕ ಕಾಳಜಿ ಉಳ್ಳವರಾಗಿದ್ದರು.

ಶ್ರೀ ಸಿದ್ಧರಾಮೇಶ್ವರರು ತಮ್ಮ ಭಕ್ತರನ್ನು ಕರೆಯಿಸಿದರು. ಇಲ್ಲಿ ಎಲ್ಲರಿಗೂ ನೀರಿನ ತೊಂದರೆ ಬಹಳವಾಗುತ್ತಿದೆ. ಎಲ್ಲರೂ ಕೂಡಿ ಇಲ್ಲಿ ಒಂದು ಕೆರೆಯನ್ನು

ಕಟ್ಟೋಣ. ಎಲ್ಲರಿಗೂ ನೀರಿನ ಅನುಕೂಲವಾಗುತ್ತದೆ ಎಂದು ಹೇಳಿದರು. ಭಕ್ತರು ಒಪ್ಪಿಕೊಂಡರು. ನಾಳೆಯಿಂದ ಎಲ್ಲರೂ ಬಂದು ಮಣ್ಣನ್ನು ಕಡಿದು ಒಡ್ಡು ಹಾಕುವ ಕಾಯಕವನ್ನು ಶುರು ಮಾಡಿರಿ ಎಂದು ಅಪ್ಪಣೆ ಮಾಡಿದರು.

ಮರುದಿವಸ ಕೆಲವರು ವಿಚಾರಿಸಿದರು. ನಾವು ದಿನಾಲು ಕೆರೆಯನ್ನು ಕಟ್ಟುವ ಕೆಲಸಕ್ಕೆ ಹೋದರೆ ಈ ಸನ್ಯಾಸಿ ನಮಗೆ ಪಗಾರ ಎಲ್ಲಿಂದ ಕೊಡುತ್ತಾನೆ? ತಾನು ತೊಟ್ಟುಕೊಂಡ ಕಾವಿಯ ಬಟ್ಟೆಯ ಬದಲಾಗಿ ಅವನ ಬಳಿ ಏನೂ ಇಲ್ಲ. ನಮ್ಮ ಕೂಲಿ ಕೊಡದಿದ್ದರೆ ನಮ್ಮ ಕುಟುಂಬವನ್ನು ನಾವು ನಡೆಸುವುದು ಕಷ್ಟವಾಗುತ್ತದೆ ಎಂದು ಕೆಲವರು ವಿಚಾರ ಮಾಡಿ ಕೆಲಸಕ್ಕೆ ಹೋಗಲಿಲ್ಲ. ಅವರಲ್ಲಿಯೇ ಕೆಲವರು "ಶಿವಯೋಗಿಗಳ ಅಪ್ಪಣೆಯಾಗಿದೆ. ನಮ್ಮ ಕೈಲಾದಷ್ಟು ಸೇವೆ ಮಾಡೋಣ"ವೆಂದು ತಮ್ಮ ತಮ್ಮ ಆಯುಧಗಳನ್ನು ತೆಗೆದುಕೊಂಡು ಕೆರೆ ಕಟ್ಟುವ ಕೆಲಸಕ್ಕೆ ಬಂದರು.

ಭಕ್ತರು ತಮ್ಮ ಭಕ್ತಿಭಾವದಿಂದ ಕೆರೆ ಕಟ್ಟುವ ಕೆಲಸವನ್ನು ಪ್ರಾರಂಭ ಮಾಡಿದರು. ಸಂಜೆಯಾಯಿತು. ಶ್ರೀ ಸಿದ್ಧರಾಮೇಶ್ವರರು ಬಂದು ಕೆರೆಯ ಕಟ್ಟಲು ಹಾಕಿದ ಮಣ್ಣಿನ ಗುಂಪಿಯ ಮೇಲೆ ಕುಳಿತರು. ಶಿವಯೋಗಿಗಳು ಅಪ್ಪಣೆ ಮಾಡಿದರು. ಎಲ್ಲರೂ ಸಾಲಾಗಿ ಬನ್ನಿರಿ, ನೀವು ದುಡಿದ ಪಗಾರವನ್ನು ಪಡೆಯಿರಿ ಎಂದು ಹೇಳಿದರು. ಆಗ ಎಲ್ಲ ಭಕ್ತರೂ ಸಾಲಾಗಿ ನಿಂತರು. ಆಗ ಶಿವಯೋಗಿಗಳು ತಮ್ಮ ಒಂದು ಮುಷ್ಟಿಯಿಂದ ಮಣ್ಣನ್ನು ತೆಗೆದುಕೊಂಡು ಕೆಲಸಗಾರರ ಉಡಿಯಲ್ಲಿ ಹಾಕಿದರು. ಎಲ್ಲರೂ ಸಾಲಾಗಿ ನಿಂತು ತಮ್ಮ ತಮ್ಮ ಉಡಿಯಲ್ಲಿ ಹಾಕಿಸಿಕೊಂಡರು. ಮನೆಗೆ ಹೋಗಿ ಕೆಲಸಗಾರರು ತಮ್ಮ ಉಡಿಯಲ್ಲಿಯ ಮಣ್ಣನ್ನು ತೆಗೆದು ನೋಡಿದಾಗ ಅವರು ಒಂದು ದಿವಸದ ಕೆಲಸ ಎಷ್ಟು ಮಾಡಿದ್ದರೋ ಆ ಪಗಾರದಷ್ಟೇ ಬಂಗಾರವಾಗಿತ್ತು. ಅದನ್ನು ನೋಡಿ ಭಕ್ತರು 'ಇದು ಎಂಥಾ ಪವಾಡ' ಎಂದು ಕೊಂಡಾಡಿದರು. ಶ್ರೀ ಶಿವಯೋಗಿಗಳ ಸ್ಪರ್ಶಮಣಿ ತಾಕಿದ ಮಣ್ಣು ಬಂಗಾರವಾಯಿತು. ಈ ಸುದ್ದಿ ಊರ ತುಂಬೆಲ್ಲಾ ಹರಡಿತು. ಸಿದ್ಧರಾಮೇಶ್ವರರು ಬಂಗಾರವನ್ನು ಕೂಲಿ ಕೊಡುತ್ತಾರೆ ಎಂದು ಮರುದಿವಸ ಬಹಳಷ್ಟು ಜನರು ಕೆಲಸಕ್ಕೆ ಬಂದರು. ಕೆಲವರು ಬೆಳಗ್ಗೆ ಬಂದರು. ಕೆಲವರು ಮಧ್ಯಾಹ್ನ ಬಂದರು, ಕೆಲವರು ದುಡಿಯದೆ ಬಂದಿದ್ದರು. ಶ್ರೀ ಶಿವಯೋಗಿಗಳು ಸಾಯಂಕಾಲ ಬಂದು ಕೆರೆಯ ಕಟ್ಟಲು ಹಾಕಿದ ಮಣ್ಣಿನ ಗುಪ್ಪೆಯ ಮೇಲೆ ಕುಳಿತರು. 'ಎಲ್ಲರೂ ಸಾಲಾಗಿ ಬನ್ನಿರಿ' ಎಂದು ಹೇಳಿದರು. ಕೆಲವರು ದುಡಿಯದಿದ್ದರೂ ಸಾಲಿನಲ್ಲಿ ಬಂದು ನಿಂತಿದ್ದರು. ಶಿವಯೋಗಿಗಳು ತಮ್ಮ ಮುಷ್ಟಿಯಿಂದ ಎಲ್ಲರ ಉಡಿಯಲ್ಲಿ ಮಣ್ಣನ್ನು ಹಾಕಿದರು. ಆದರೆ ಯಾರು ಎಷ್ಟು ಕೆಲಸ ಮಾಡಿದ್ದರೋ ಅವರ ದುಡಿಮೆಯಷ್ಟು ಬಂಗಾರವಾಗುತ್ತಿತ್ತು. ಯಾರು ದುಡಿಯದೆ ಸಾಲಿನಲ್ಲಿ ನಿಂತಿದ್ದರೋ ಅವರಿಗೆ ಮಣ್ಣೇ ಇರುತ್ತಿತ್ತು.

ಶ್ರೀ ಸಿದ್ಧರಾಮೇಶ್ವರರು ಹೇಳಿದ ಧರ್ಮ, ನೀತಿ, ಆಚಾರಾದಿಗಳಿಂದ ಯಾರು ನಡೆದರೋ ಅವರು ದೇವತ್ವವನ್ನು ಹೊಂದಿದರು. ಮತ್ತು ಮಾಡುವ ಕಾರ್ಯಗಳನ್ನು ಯಾರು ಶಿವನ ಸೇವಾಕಾರ್ಯವೆಂದು ಸಹಕರಿಸಿ ಸೇವೆ ಸಲ್ಲಿಸಿದರೋ ಅವರೆಲ್ಲರೂ ಮೋಕ್ಷವನ್ನು ಪಡೆದರು.

ಶ್ರೀ ಶಿವಯೋಗಿ ಸಿದ್ಧರಾಮೇಶ್ವರರು ಕೆರೆಯನ್ನು ಕಟ್ಟಿದರು. ಶಿವಯೋಗಿಗಳು ತಮ್ಮ ತಪೋಬಲದಿಂದ ಅಲ್ಲಿ ಗಂಗಾ–ಗೋದಾವರಿ, ಕೃಷ್ಣ, ಕಾವೇರಿ, ಸಿಂಧು ಇತ್ಯಾದಿ ನದಿಗಳನ್ನು ಬರಮಾಡಿಕೊಂಡರು. ಆ ನೀರನ್ನು ಅಮೃತಸಮಾನವನ್ನಾಗಿ ಮಾಡಿದರು. ಬಂದ ಭಕ್ತಜನರೆಲ್ಲರೂ ದಾಸೋಹದಲ್ಲಿ ಪ್ರಸಾದ ಸೇವಿಸಿ ಈ ಅಮೃತದಂಥ ನೀರನ್ನು ಕುಡಿದು ಶಿವಯೋಗಿಗಳ ಆಶೀರ್ವಾದ ಪಡೆದು ಪಾವನರಾಗಿ ಹೋಗುತ್ತಿದ್ದರು. ಶ್ರೀ ಸಿದ್ಧರಾಮೇಶ್ವರರ ಕೀರ್ತಿಯು ದಶದಿಕ್ಕುಗಳನ್ನೂ ವ್ಯಾಪಿಸಿತು. ಇಂದಿಗೂ ಕೆರೆಯ ನೀರು ಅಮೃತದಂತೆಯೇ ಇದೆ.

ಶರಣನ ಕ್ರಿಯಾ ನಿರತತೆಯಿದು ಕ್ರಿಯಾನಿಷ್ಪತ್ತಿಯಿದು. ಶಿವಜ್ಞಾನಿಯೊಬ್ಬ ಪರುಷಮಣಿ. ಅದು ಆತನ ಸೋಂಕಿನೊಡನೆ ಸುವರ್ಣವಾಗುತ್ತದೆ. ಏಕೆಂದರೆ ಆತನ ತನು ಶುಚಿ, ಮನ ಶುಚಿ, ಭಾವ ಶುಚಿ, ಹಸ್ತಾದಿಗಳು ಶುಚಿ, ಸರ್ವಾಂಗಲಿಂಗಿಯಾದ ಶರಣ ನಿಜಕ್ಕೂ ದಿವ್ಯ ಸ್ಪರ್ಶಮಣಿ. ಪಂಚ ಪರುಷಗಳ ಗಣಿ ಆತ ನೋಡಿದ್ದು, ನುಡಿದದ್ದು ಮುಟ್ಟಿದ್ದು, ನೆನೆದದ್ದು ಎಲ್ಲವೂ ಪಾವನವಾಗುತ್ತದೆ.

ಶರಣರು ಮನಸ್ಸಿನ ಪರಿಶುದ್ಧತೆಗೆ ಆಚಾರ–ವಿಚಾರಕ್ಕೆ ಮಹತ್ವವನ್ನು ನೀಡಿದರು. ಅಂದಿನ ಸಾಮಾಜಿಕ ವಿಷಮತೆಯಲ್ಲಿ ಸಮಾನತೆಯನ್ನು ತರಲು ಪ್ರಯತ್ನಿಸಿದರು. ಸಾಮಾಜದಲ್ಲಿದ್ದ ದೋಷಗಳನ್ನು ಬಯಲಿಗೆಳೆದರು. ಅಜ್ಞಾನದಿಂದ ಬಳಲುವ ಜನರಿಗೆ ಜ್ಞಾನದ ಬೆಳಕನ್ನು ನೀಡಿದರು. ಬದುಕಿಗೊಂದು ಹೊಸ ಅರ್ಥವನ್ನು ಕಲ್ಪಿಸಿಕೊಟ್ಟರು. ಜನರ ನಡೆ–ನುಡಿಯನ್ನು ತಿದ್ದಿದರು.

ಶ್ರೀ ಸಿದ್ಧರಾಮೇಶ್ವರರು ಅನೇಕರಿಗೆ ಧನ, ಧಾನ್ಯ, ಭೂಮಿ, ಸಕಲ ಸಂಪತ್ತುಗಳನ್ನು ಕೊಟ್ಟು ಸಂತಷ್ಟಿಪಡಿಸಿದರಲ್ಲದೆ ಬಹಳಷ್ಟು ಜನರಿಗೆ ಸತಿ, ಪುತ್ರಾದಿಗಳು ಆಗುವಂತೆ ಆಶೀರ್ವಾದ ಮಾಡಿದರು. ಎಷ್ಟೋ ಭೂತಪಿಶಾಚಿಗಳ ಬಾಧೆಗಳನ್ನು ನಿವಾರಿಸಿದರಲ್ಲದೆ, ಸಕಲರಿಗೂ ಸುಖ–ಸಂಪತ್ತು, ವ್ಯಾಪಾರ–ವ್ಯವಹಾರಗಳು ಬೆಳೆದು ಸುಖಿಗಳಾಗಿ, ಅಂತ್ಯದಲ್ಲಿ ಮೋಕ್ಷವನ್ನು ಪಡೆಯುವಂತೆ ಅನುಗ್ರಹಿಸಿದರು.

ಆದ್ದರಿಂದಲೇ ಸೊಲ್ಲಾಪುರವು ಶ್ರೀ ಶಿವಯೋಗಿ ಸಿದ್ಧರಾಮೇಶ್ವರರ ದಯದಿಂದ ಅಂದಿನಿಂದ ಇಂದಿನವರೆಗೂ ಶಿವಭಕ್ತಿಯುಕ್ತವಾಗಿ ಸಕಲ ವ್ಯಾಪಾರ, ಉದ್ಯೋಗಗಳಲ್ಲಿ ಮುಂದೆನಿಸಿ ಸುಖ–ಸಂಪತ್ತಿನಿಂದ ಶೋಭಿಸುತ್ತಿದೆ.

□

ಗ್ರಂಥ ಪರಾಮರ್ಶೆ

# ಶಿವಸಿರಿ – ಕೃತಿ ಅವಲೋಕನ

**ನಗರ್ಲೆ ಶಿವಕುಮಾರ**

ಮಂಡ್ಯದ ವೈದ್ಯರು, ಸಾಹಿತಿಗಳಾದ ಡಾ. ಪ್ರದೀಪಕುಮಾರ ಹೆಬ್ರಿಯವರು ರಚಿಸಿರುವ 'ಶಿವಸಿರಿ' ಶ್ರೀ ತರಳಬಾಳು ಜಗದ್ಗುರು ಪರಮಪೂಜ್ಯ ಶ್ರೀ ಶಿವಕುಮಾರ ಶಿವಾಚಾರ್ಯ ಮಹಾಸ್ವಾಮಿಗಳವರ ಜೀವನ ದರ್ಶನದ 'ಶ್ರೀಗುರು ದರ್ಶನ'ದ ಮಹಾಕಾವ್ಯವಾಗಿದೆ. ಪರಮಪೂಜ್ಯ ಸಿರಿಗೆರೆಯ ತರಳಬಾಳು ಜಗದ್ಗುರು ಡಾ. ಶ್ರೀ ಶಿವಮೂರ್ತಿ ಶಿವಾಚಾರ್ಯ ಮಹಾಸ್ವಾಮಿಗಳವರ ಆಶೀರ್ವಾಣಿ ಇದೆ. ಕೃತಿಯ ಬೆನ್ನುಡಿಯಲ್ಲಿ ಅಖಿಲ ಭಾರತ ಶರಣ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾದ ಡಾ. ಸಿ. ಸೋಮಶೇಖರವರು, "ಬಸವಣ್ಣನವರ ನಿಜಭಕ್ತರೆನಿಸಿ ಮರುಳಸಿದ್ಧರ ದಾರಿಯಲ್ಲಿ ಸಾಗಿದ ಗುರುವರ್ಯರು ನಮ್ಮ ನಾಡಿನ ಮಹಾನ್ ಆಧ್ಯಾತ್ಮಿಕ ಚೇತನ ಶಕ್ತಿಯಾಗಿ ಮಾನವ ಲೋಕಕ್ಕೇ ದಾರಿದೀಪವಾದವರು. ಈ ಮಹಾಕಾವ್ಯ ಮಹಾಸ್ವಾಮಿಗಳ ಜೀವನಗಾಥೆಯಾಗಿ, ಗುರುವರ್ಯರ ಧೀಶಕ್ತಿ–ಧೀಮತಿಯನ್ನು ಸಮಗ್ರವಾಗಿ ಪರಿಚಯಿಸಿದೆ" ಎಂದು ತಿಳಿಸಿದ್ದಾರೆ.

ಈ ಮಹಾಕಾವ್ಯವು 33 'ಸಿರಿಬೆಳಗು' ಗಳಲ್ಲಿ ಬಿತ್ತರಗೊಂಡಿದೆ. ಪೂಜ್ಯ ಗುರುವರ್ಯರ ಜೀವನ ಚರಿತ್ರೆಯನ್ನು ಹೃದ್ಯವಾಗಿ ವರ್ಣಿಸಿದೆ. ಹೊಸ ಷಟ್ಪದಿ ಪ್ರಕಾರದಲ್ಲಿ ಇನ್ನೊಂದು ಮಹಾಕಾವ್ಯದಿಂದ ಕನ್ನಡ ಕಾವ್ಯಲೋಕದ ಹೊಸ ಕಾವ್ಯನಕ್ಷತ್ರವಾಗಿ ಮಿನುಗುತ್ತಿದೆ ಎನ್ನಬಹುದು. ಜನಸಾಮಾನ್ಯರ ಮನ ಮುಟ್ಟುವಂತೆ ಬಿತ್ತರಿಸಿದ ಪರಿ ಸೊಗಸಾಗಿದೆ. 'ನಿರಂಜನ ಕಿರಣದಲಿ ಬೆಳ್ಮುಗಿಲ ಹಂಸ ' ಎಂದು ಪ್ರಾರಂಭಿಸಿ 'ಬರೆದಿರುವೆ ಗುರುಕಾವ್ಯ ಎದೆಬಡಿತದನುಸಾರ' ಎಂದು ಕೊನೆಯಲ್ಲಿ ಹೇಳಿದ್ದಾರೆ.

ಈ ಕಾವ್ಯಮಾಲೆಯಲ್ಲಿ 'ಪ್ರೀತಿಯೊಂದೇ ಸಾಕು ದೇವಸುತರೆನಿಸುವಲಿ', 'ಬದುಕು ಎಂದರೆ ಅಷ್ಟೆ ಒಳಿತು ಕೆಡುಕಿನ ನಡೆಯು', 'ಅಪರೂಪ ಅನುರೂಪ ಗುರುವರರ ಧೀಶಕ್ತಿ', 'ಕಾಲದೊಡ ಕಾಯಕಕೆ ಬೆಲೆಯಿಹುದು ನಿಶ್ಚಿತದಿ', 'ಗುರುವರರ ಆನಂದ ಹುಣ್ಣಿಮೆಯ ಚಂದಿರನು' ಮೊದಲಾದ ರತ್ನಗಳು ಸುಶೋಭಿತವಾಗಿ ಹೊಳೆದಿವೆ. ಈ ಕೃತಿಯ ಮೌಲ್ಯವನ್ನು ಮನಗಾಣಿಸಿವೆ.

ತರಳಬಾಳು ಶ್ರೀಮಠದ ಸ್ಥಾಪಕ ಗುರುವರ್ಯ ಮರುಳಸಿದ್ಧರನ್ನು ಕವಿ ಹೆಬ್ರಿಯವರು, "ಕರುನಾಡ ಸುರಕೀರ್ತಿ ಮರುಳಸಿದ್ಧರು ಖಚಿತ/ ಶಿವಶರಣ ತತ್ತ್ವವನು ಪಸರಿಸಲು

ಬಹುಮುಂದು/ ಇವರ ಕಾರಣದಿಂದ ವಚನಗಳ ಝೇಂಕಾರ ಇವರೆದೆಯ ದನಿಯು/ ಎಂದು ಬಣ್ಣಿಸಿ ಮುಂದೆ ತಮ್ಮ ಸಾಹಿತ್ಯ ಕ್ರಿಯಾಶಕ್ತಿಗೆ ಜೀವಚೇತನರಾದವರನ್ನು ನೆನೆಯುತ್ತ ಬಣ್ಣಿಸಿದ್ದಿಂತು"/

ಪಂಪನನು ರನ್ನನನು ಬಸವನನು ಅಕ್ಕನನು/ ದಾಸರನು ಶ್ರೇಷ್ಠರನು ಸ್ವಾತಂತ್ರ್ಯ ಯೋಧರನು/ ಸಿರಿಗೆರೆಯ ಸಿರಿಮಠದ ಭಕ್ತ ಜನರೆಲ್ಲರನು ನೆನೆಯುತಿಹೆನಿಂದು/

ಕವಿ ಡಾ. ಹೆಬ್ರಿಯವರು ಅಲ್ಲಲ್ಲಿ ಬಿತ್ತರಿಸಿದ ಕಾವ್ಯಸಿರಿಯ ಹಲವಾರು ಸಾಲುಗಳು ನಿಮಗಾಗಿ : ಬಸವಾದಿ ಶಿವಶರಣರೆಲ್ಲರೆದೆ ಇಚ್ಛೆಯನು/ ಅರಹುತಲಿ ನೆನೆದಿರುವೆ ಮರುಳಸಿದ್ಧರ ಬದುಕ/ ತೋರಣದ ಇಚ್ಛೆಯದು ಎದೆಬಡಿತವೆನಿಸಿ /

ಸುಖವೆಂಬುದೆಂದೆಂದು ವಸ್ತುಸಂಗ್ರಹದಲ್ಲಿ/ ಇಲ್ಲವೆಂಬುದು ಖಚಿತ ಅರಿತರಿದ ಬದುಕೊಳಿತು/ಸುಖವೆಂಬುದಿಳೆಯಲ್ಲಿ ಆತ್ಮಾನುಗ್ರಹದಿಂದ ನಿಜದಾತ್ಮ ವಸ್ತು/

ಗುರುದೇವರಪ್ರತಿಮ ಧೈರ್ಯವಿಹ ಮಹಜೀವಿ/ಎಂಬುದಕೆ ನಿಜಸಾಕ್ಷಿ ಅವರೆದೆಯ ಬರಹಗಳು/ ಅವರಿಗವೇ ಸಾಟಿ ಎದೆಬಡಿತದುಸಿರಿನಲಿ ಗುರುವರರ ಹಿರಿಮೆ/

ಗುರುವರರ ಸಿರಿಬದುಕು ಪರಿವರ್ತನಶೀಲವಿರೆ/ಪ್ರಗತಿಪರವಾಗಿಯದು ಮೆಚ್ಚುಗೆಗೆ ಪಾತ್ರವಿರೆ/ನಿಂತನೀರಿನ ಬದಲು ಹರಿದು ಸಾಗುವ ತೆರದಿ ನದಿಯಾಗಿ ಗುರುವು/

'ಶಿವಸಿರಿ' ಕಾವ್ಯದಲ್ಲಿ ಕವಿ ಹೆಬ್ರಿಯವರು ಉಲ್ಲೇಖಿಸಿದ ಗುರುವರರ ಸೊಗಸಾದ ಸವಿನುಡಿಗಳಿವು : ಧರ್ಮವು ಶಾಂತಿಯ ಸಾಧನ. ಆದರೆ ಇಂದು ನಮ್ಮ ನಾಡಿನ ಅಶಾಂತಿಗೆ ಧರ್ಮವೇ ಕಾರಣವಾಗಿದೆ.

* ದೇವರನ್ನು ನಮ್ಮಾಸೆ ಆಕಾಂಕ್ಷೆಗಳನ್ನು ಈಡೇರಿಸುವ ಊಳಿಗದವನನ್ನಾಗಿ ಮಾಡಿಕೊಂಡಿದ್ದೇವೆ.
* ಜನರ ದೊಡ್ಡಸ್ತಿಕೆಯು ಅವರು ಕಟ್ಟಿಸಿದ ಉಪ್ಪರಿಗೆಯ ಮನೆಗಳಲ್ಲಿಲ್ಲ. ಅವರ ಮನದ ಘನತೆಯಲ್ಲಿದೆ.
* ಸಿಟ್ಟಿನಿಂದ ಕೊಯ್ದ ಮೂಗು ಅಂಟಿಸಲು ಬರುವುದಿಲ್ಲ. ಕೋಪಿಗೆ ಸುಖವೇ ಇಲ್ಲ. ಶಾಂತಿಯುಳ್ಳವನಿಗೆ ದುಃಖವೇ ಇಲ್ಲ.
* ದುರ್ಬುದ್ಧಿಗೆ ಜ್ಞಾನ– ಧೈರ್ಯಗಳೇ ಮದ್ದು.

ಈ ಕೃತಿಯಲ್ಲಿನ ಒಂದಷ್ಟು ಸಾಲುಗಳನ್ನು ನಾವೂ ಗುನುಗೋಣ :

ಜನತೃಪ್ತಿಯೇ ನಿಜದಿ ಪರಮಾತ್ಮ ಸಂತೃಪ್ತಿ/

ಪ್ರಭೆಯ ಬೆಳಕಲಿ ಸೇರಿ ಇಹಜಗವ ಮರೆತಂತೆ ಆನಂದಭೂತಿ/

ಪರಶಿವನ ದಯೆಯಿಂದ ಸಕಲವೂ ಪ್ರಾಪ್ತ/

ಬದುಕು ಎಂದರೆ ಅಷ್ಟೆ ಒಳಿತು ಕೆಡುಕಿನ ನಡೆಯು/
ಬದುಕರಿತು ಇರಬೇಕು ಎಂಬವರ ಮನದಿಚ್ಛೆ/
ಮರುಳಸಿದ್ಧರ ಎದೆಯು ಮಹಬೆಳಗ ಕಾಂತಿಯಲಿ/
ಹುಣ್ಣಿಮೆಯ ಸಿರಿಬೆಳಕು ಗುರುಮನದಿ ದಿನವು/
ಆಚಾರ ಸುವಿಚಾರ ಬೇಕೆಮಗೆ ಅನುದಿಮವು/
ಮೊಗದಲ್ಲಿ ಪ್ರತಿಫಲವು ಹುಣ್ಣಿಮೆಯ ಚಂದಿರನು/

ಕಾವ್ಯಾಸಕ್ತರಿಗೆ "ಏನಿದು ಶ್ರೀಗುರು ಷಟ್ಪದಿ?" ಎಂಬ ಪ್ರಶ್ನೆ ಮೂಡಬಹುದು. ಡಾ. ಹೆಬ್ರಿಯವರು ಈಗಾಗಲೇ ಶ್ರೀಗುರು ಷಟ್ಪದಿಯಲ್ಲಿ ಹಲವಾರು ಮಹಾಕಾವ್ಯಗಳನ್ನು ರಚಿಸಿ ಕನ್ನಡದ ಕಾವ್ಯಸಿರಿವಂತಿಕೆಯನ್ನು ಖಂಡಿತವಾಗಿ ಹೆಚ್ಚಿಸಿದ್ದಾರೆ. ಅವರ ಒಂದು ಷಟ್ಪದಿ ಗಮನಿಸೋಣ :

ಜಗವೆಲ್ಲ ಎಂತಿಹುದು ಅರಿತವರು ಯಾರಿಲ್ಲ
ತಮ್ಮ ಸ್ವಾರ್ಥವ ಮೆರೆಸೊ ಕಾರಣದಿ ಊರವರು
ಮನಕೆಡಿಸೊ ರಾಕ್ಷಸರು ಊರಿನೆಲ್ಲೆಡೆಯಲ್ಲಿ ಎಂಬುದಿದು ಸಾಕ್ಷಿ
ತಮ್ಮ ಲಾಭದ ಆಸೆ ಒಳಗೊಳಗೆ ಇದ್ದಿರಲು
ಹೊರಜಗಕೆ ತಾವೆಲ್ಲ ಸಜ್ಜನರು ಬಿಂಬಿಸುತ
ಮೋಸ ಮಾಡುವ ಬದುಕ ಹೊಂದಿರುವ ಮಾನವರು ರಾಕ್ಷಸರು ನಿಜದಿ.

ಈ ಕಾವ್ಯವನ್ನು ಓದಲು ಪ್ರಾರಂಭಿಸಿದಂತೆ ನಾವು ನಿಜವಾಗಿ ಕಾವ್ಯಲೋಕದಲ್ಲಿ ಓಲಾಡುತ್ತವೆ. ನಾವು ತಿಳಿಯದಿರುವ ಅದೆಷ್ಟೋ ವಿಷಯಗಳು ಕಣ್ಮುಂದೆ ಬಂದು–ಹೋಗುತ್ತವೆ ನಾವು ತಿಳಿಯಬೇಕಾದ ವಿಷಯಗಳು ಅದೆಷ್ಟಿವೆ ಎಂಬ ಪ್ರಶ್ನೆಯನ್ನೂ ಮುಂದಿಡುತ್ತದೆ. ಕರುನಾಡ ಸಿರಿಗೆರೆಯ ಸಿರಿಮಠದ ಗುರುಗಳಾಗಿ ಚಿರಸ್ಮರಣೀಯ ಕಾರ್ಯಗಳನ್ನು ಬಿಡುವಿಲ್ಲದಂತೆ ಮಾಡಿ, ಸಾವಿರಾರು ಕುಟುಂಬಗಳ ಅಧಿದೇವತೆಯಾದ ಸಿರಿಗೆರೆಯ ಪೂಜ್ಯ ಶ್ರೀ ಶಿವಕುಮಾರ ಶಿವಾಚಾರ್ಯ ಮಹಾಸ್ವಾಮಿಗಳ ದಿವ್ಯಬದುಕನ್ನು ಕಾವ್ಯರೂಪದಲ್ಲಿ ಬಿತ್ತರಿಸಿದ ಸಾಹಿತಿ, ಕವಿ ಡಾ. ಪ್ರದೀಪಕುಮಾರ ಹೆಬ್ರಿ, ಮಂಡ್ಯ ಅವರಿಗೆ ಅಭಿನಂದನೆಗಳು. ಈ ಕಾವ್ಯ ನಿಶ್ಚಿತವಾಗಿ ನಮ್ಮ ಬದುಕಿನ ಧನಾತ್ಮಕ ಪ್ರೇರಣೆಗೆ ಪ್ರಚೋದನಾತ್ಮಕವಾಗಿ ಕಂಗೊಳಿಸಿದೆ ಎಂಬುದರಲ್ಲಿ ಎರಡು ಮಾತಿಲ್ಲ.

ಪ್ರಕಾರ – ಮಹಾಕಾವ್ಯ
ಪ್ರಕಾಶಕರು – 'ಸಾಹಿತ್ಯ ಸಿರಿ' ಶ್ರೀ ತರಳಬಾಳು ಜಗದ್ಗುರು ಬೃಹನ್ಮಠ, ಸಿರಿಗೆರೆ
ಮೊದಲ ಮುದ್ರಣ–2025, ಪುಟಗಳು– 576, ಬೆಲೆ– ರೂ. 500/–

□

# ವಾರ್ತಾವಿಹಾರ

**ಕುಮಾರಸ್ವಾಮಿ ವಿರಕ್ತಮಠ**

**ನಿರ್ಜೀವ ವಸ್ತುವಿನಲ್ಲೂ ಜೀವ ಕಂಡದ್ದು ಜೈನಧರ್ಮ**

ಸಕಲ ಜೀವರಾಶಿಗಳಿಗೂ ಯಾವುದೇ ರೀತಿ ತೊಂದರೆ ಕೊಡದೆ, ನಿರ್ಜೀವ ವಸ್ತುಗಳಲ್ಲೂ ಜೀವ ಕಂಡ ಧರ್ಮ ಅಂದರೆ ಅದು ಜೈನ ಧರ್ಮ ಎಂದು ಪರಮಪೂಜ್ಯ ಜಗದ್ಗುರುಗಳವರು ನವೆಂಬರ್ 1ರಂದು ಚಾಮರಾಜನಗರ ತಾಲ್ಲೂಕು ಮಲೆಯೂರಿನಲ್ಲಿ ಜೀರ್ಣೋದ್ಧಾರಗೊಂಡಿರುವ ಪ್ರಾಚೀನ ಶಿಲಾ ಬಸದಿಯಲ್ಲಿ ಭಗವಾನ್ ಶ್ರೀ ಆದಿನಾಥ ತೀರ್ಥಂಕರರ ಶಿಲಾ ಜಿನಬಿಂಬ ಪುನರ್‌ಪ್ರತಿಷ್ಠಾಪನೆ ಹಾಗೂ ಧಾಮಸಂಪ್ರೋಕ್ಷಣೆ, ಪಂಚಕಲ್ಯಾಣಪೂರ್ವಕದ ಎರಡನೇ ದಿನದ ಕಾರ್ಯಕ್ರಮದ ದಿವ್ಯ ಸಾನ್ನಿಧ್ಯ ವಹಿಸಿ ಮಾತನಾಡುತ್ತಾ ತಿಳಿಸಿದರು. ದಯವೇ ಧರ್ಮದ ಮೂಲವಯ್ಯ ಎಂಬ ತತ್ವವನ್ನು ಪ್ರಾಚೀನ ಕಾಲದಲ್ಲೇ ಜೈನಧರ್ಮ ಸಾರಿತ್ತು. ಜೈನರು ಅಹಿಂಸಾ ಪರಮೋ ಧರ್ಮ ಎಂಬ ತತ್ವವನ್ನು ನಿಯಮದಂತೆ ಅಳವಡಿಸಿಕೊಂಡು ಅದರಂತೆ ನಡೆಯುತ್ತಾ ಎಲ್ಲರಲ್ಲೂ ಬೆರೆಯುತ್ತಾ ಬಂದಿದ್ದಾರೆ. ನಿರ್ಜೀವ ವಸ್ತುಗಳಲ್ಲೂ ಜೀವವಿದೆ. ಅದಕ್ಕೂ ಹಿಂಸೆ ನೀಡಬಾರದು ಎಂದು ಜೈನಧರ್ಮ ಜಗತ್ತಿಗೆ ಸಾರಿದೆ. ಐದನೇ ಶತಮಾನದಲ್ಲಿ ಮಹಾತಪಸ್ವಿ ಪೂಜ್ಯಪಾದರಿಂದ ಸ್ಥಾಪಿತವಾದ ಕನಕಗಿರಿ ಜೈನ ಧರ್ಮದ ಪವಿತ್ರ ಕ್ಷೇತ್ರವಾಗಿ ಬೆಳೆದಿದೆ. ಮನುಷ್ಯನಿಗೆ ಆಂತರಿಕ ಶಾಂತಿ, ನೆಮ್ಮದಿ ಕೊಡುವುದು ಧರ್ಮಾಚರಣೆ. ದೇವನೊಬ್ಬ ನಾಮ ಹಲವು ಎಂಬಂತೆ, ಪ್ರತಿಯೊಂದು ಧರ್ಮದಲ್ಲಿಯೂ ವಿವಿಧ ರೂಪದಲ್ಲಿ ದೇವರನ್ನು ಕಾಣುತ್ತಾರೆ. ಧರ್ಮಾಚರಣೆಯನ್ನು ನಿಷ್ಠೆಯಿಂದ ಮಾಡಬೇಕು ಎಂದು ಹೇಳಿದರು.

ಶ್ರೀ ಪುಣ್ಯಸಾಗರಮುನಿ ಮಹಾರಾಜರು, ಆರತಿಪುರ ಶ್ರೀ ಜೈನ ಮಠದ ಶ್ರೀ ಸಿದ್ಧಾಂತಕೀರ್ತಿ ಭಟ್ಟಾರಕ ಸ್ವಾಮಿಗಳು, ಕನಕಗಿರಿ ಶ್ರೀ ಭುವನಕೀರ್ತಿ ಭಟ್ಟಾರಕ ಸ್ವಾಮಿಗಳು ಮತ್ತು ಹರವೆ ಶ್ರೀಗಳು, ರಾಷ್ಟ್ರೀಯ ಜೈನ್ ಮಿಲನ್ ಅಧ್ಯಕ್ಷರಾದ ಶ್ರೀ ಡಿ. ಸುರೇಂದ್ರಕುಮಾರ್‌ರವರು ಮಾತನಾಡಿದರು.

**ಅನ್ನ ಮತ್ತು ಜ್ಞಾನದ ದಾಸೋಹ ಪರಂಪರೆ ಶ್ಲಾಘನೀಯ**

ಮಠ–ಮಾನ್ಯಗಳ ಅನ್ನ ಮತ್ತು ಜ್ಞಾನಗಳ ದಾಸೋಹ ಪರಂಪರೆಯನ್ನು ಗ್ರಾಮ ವಿದ್ಯೋದಯ ಸಂಘ ಅಳವಡಿಸಿಕೊಂಡು ಮುನ್ನಡೆಯುತ್ತಿರುವುದು

ಅಭಿನಂದಾನಾರ್ಹವಾಗಿದೆ ಎಂದು ಪರಮಪೂಜ್ಯ ಜಗದ್ಗುರುಗಳವರು ನವೆಂಬರ್ 4ರಂದು ಟಿ. ನರಸೀಪುರದ ವಿದ್ಯೋದಯ ಕಾಲೇಜು ಆವರಣದಲ್ಲಿ ಆಯೋಜಿಸಿದ್ದ ಶ್ರೀ ಕೆ.ಪಿ. ಮಹದೇವಸ್ವಾಮಿಯವರ ಅಮೃತ ಮಹೋತ್ಸವದ ದಿವ್ಯ ಸಾನ್ನಿಧ್ಯ ವಹಿಸಿ ಮಾತನಾಡುತ್ತಾ ತಿಳಿಸಿದರು. ಸಂಸ್ಥೆಯ ಸಂಸ್ಥಾಪಕರಾದ ಶ್ರೀ ಎಂ.ಸಿ. ಶಿವಾನಂದ ಶರ್ಮರವರು ವಿಶಾಲವಾದ ಕಟ್ಟಡ ನಿರ್ಮಿಸಿ, ಗ್ರಾಮೀಣ ಪ್ರದೇಶದ ವಿದ್ಯಾರ್ಥಿಗಳಿಗೆ ಅನುಕೂಲ ಕಲ್ಪಿಸಿ ಕೊಟ್ಟಿದ್ದರು. ಅವರ ಕನಸನ್ನು ಸಾಕಾರಗೊಳಿಸಿದವರವಲ್ಲಿ ಶ್ರೀ ಟಿ.ಪಿ. ಬೋರಯ್ಯ ಸಹ ಒಬ್ಬರಾಗಿದ್ದಾರೆ. ನಂತರದಲ್ಲಿ ಸಂಸ್ಥೆಯ ಜವಾಬ್ದಾರಿ ವಹಿಸಿಕೊಂಡ ಶ್ರೀ ಕೆ.ಪಿ. ಮಹದೇವಸ್ವಾಮಿಯವರು ಮೂರು ದಶಕಕ್ಕೂ ಹೆಚ್ಚು ಕಾಲ ಅವಿರತವಾದ ಶ್ರಮದಿಂದ ಸಂಸ್ಥೆಯನ್ನು ಶ್ರೇಯಸ್ಸಿನ ಪಥದತ್ತ ಮುನ್ನಡೆಸಿಕೊಂಡು ಬಂದಿದ್ದಾರೆ. ಸಂಸ್ಥೆಯ ಅಭಿವೃದ್ಧಿಗಾಗಿ ಕೆಲವೊಮ್ಮೆ ಅವರು ಕಠಿಣವಾದ ನಿರ್ಧಾರ ತೆಗೆದುಕೊಂಡಿದ್ದಾರೆ. ಸಂಸ್ಥೆಗೆ ಅನುಕೂಲವಾಗುವ ಕೆಲಸ ಮಾಡುವಲ್ಲಿ ಅವರು ಯಾವುದೇ ತ್ಯಾಗಕ್ಕೂ ಸಿದ್ಧರಾಗಿರುತ್ತಾರೆ. ಶರ್ಮರವರು ಸಂಸ್ಥೆ ಕಟ್ಟಿದಾಗ ಸಂಸ್ಥೆಗೆ ತಮ್ಮ ಮನೆತನದ ಅಥವಾ ತಮ್ಮ ಊರಿನ ಹೆಸರಿಡಬಹುದಿತ್ತು. ಆದರೆ ಅವರು ಹಾಗೆ ಮಾಡದೇ ಬೆಂಗಳೂರು ಸಂಸ್ಥೆಗೆ ರಾಷ್ಟ್ರೀಯ ವಿದ್ಯಾಲಯ ಹಾಗೂ ನರಸೀಪುರ ಸಂಸ್ಥೆಗೆ ಗ್ರಾಮ ವಿದ್ಯೋದಯ ಸಂಘ ಎಂದು ಹೆಸರಿಟ್ಟರು. ಶರ್ಮರಿಗೆ ರಾಷ್ಟ್ರ ಮುಖ್ಯವಾಗಿತ್ತೇ ಹೊರತು, ಅವರ ವೈಯಕ್ತಿಕ ಹೆಸರು ಮುಖ್ಯವಾಗಿರಲಿಲ್ಲ. ಅವರು ತಮ್ಮನ್ನು ತಾವು ಸಮರ್ಪಣೆ ಮಾಡಿಕೊಂಡು ಇಂತಹ ಸಂಸ್ಥೆಯನ್ನು ಸ್ಥಾಪಿಸಿದ್ದರಿಂದ ಇಂದಿಗೂ ಕೂಡ ಸ್ಮರಣೀಯರಾಗಿದ್ದಾರೆ ಎಂದರು.

ಶ್ರೀ ಸಿದ್ಧಗಂಗಾ ಮಠದ ಶ್ರೀ ಸಿದ್ಧಲಿಂಗ ಮಹಾಸ್ವಾಮಿಗಳು ಬೆಂಗಳೂರಿನಲ್ಲಿ ರಾಷ್ಟ್ರೀಯ ಶಿಕ್ಷಣ ಸಂಸ್ಥೆ ಸ್ಥಾಪಿಸಿದ ಶರ್ಮರವರು, ಹುಟ್ಟೂರಿನ ಋಣ ತೀರಿಸಲು ನರಸೀಪುರದಲ್ಲಿ ಗ್ರಾಮ ವಿದ್ಯೋದಯ ಸಂಘ ಸ್ಥಾಪಿಸಿ ಬಡ ವಿದ್ಯಾರ್ಥಿಗಳಿಗೆ ಶಿಕ್ಷಣ ನೀಡಿದರು. ಅಂದೇ ವಿದ್ಯಾರ್ಥಿಗಳಿಗೆ ಬಿಸಿಯೂಟ ಯೋಜನೆ ಜಾರಿಗೆ ತಂದರು. ಅವರು ದೂರದೃಷ್ಟಿ ಇಟ್ಟುಕೊಂಡು ಶಿಕ್ಷಣ ಸಂಸ್ಥೆಗಳನ್ನು ಕಟ್ಟಿದರು. ಶ್ರೀ ಕೆ.ಪಿ. ಮಹಾದೇವಸ್ವಾಮಿಯವರು ಶರ್ಮ ಅವರ ಹುಟ್ಟೂರಾದ ಮಾಡ್ರಹಳ್ಳಿ ಗ್ರಾಮದಲ್ಲಿ ಶಿಕ್ಷಣ ಸಂಸ್ಥೆ ತೆರೆದು ಅಲ್ಲಿನ ಮಕ್ಕಳಿಗೆ ಉಚಿತವಾದ ಗುಣಮಟ್ಟದ ಶಿಕ್ಷಣ ನೀಡುವ ಯೋಜನೆಗೆ ಚಾಲನೆ ನೀಡಿದ್ದಾರೆ. ಜೊತೆಗೆ ಹನೂರಿನಲ್ಲಿ ಶಾಲೆ ತೆರೆಯಲು ಚಿಂತನೆ ನಡೆಸಿದ್ದಾರೆ. ಅವರ ಯೋಜನೆ ತ್ವರಿತವಾಗಿ ಕಾರ್ಯರೂಪಕ್ಕೆ ಬರುವಂತಾಗಲಿ, ಗ್ರಾಮೀಣ ಮಕ್ಕಳಿಗೆ ಗುಣಮಟ್ಟದ ಶಿಕ್ಷಣ ಸಿಗುವಂತಾಗಲಿ ಎಂದರು.

ಇದೇ ಸಂದರ್ಭದಲ್ಲಿ 'ನಿಸ್ವಾರ್ಥಿ' ಅಭಿನಂದನಾ ಗ್ರಂಥವನ್ನು ಬಿಡುಗಡೆಗೊಳಿಸಲಾಯಿತು. ಶ್ರೀ ಕೆ.ಪಿ. ಮಹದೇವಸ್ವಾಮಿ ದಂಪತಿಗಳನ್ನು ಅಭಿನಂದಿಸಲಾಯಿತು. ಹರಿಹರದ ಪಂಚಮಸಾಲಿ ಪೀಠ, ಚಿತ್ರದುರ್ಗದ ಛಲವಾದಿ ಗುರುಪೀಠ, ಹೊಸದುರ್ಗ ಶ್ರೀ ಭಗೀರಥ

ಮಹಾಸಂಸ್ಥಾನ ಮಠ, ಹರಿಹರ ವಾಲ್ಮೀಕಿ ಪೀಠಗಳ ಜಗದ್ಗುರುಗಳವರು, ಶ್ರೀಮಾತೆ ಗಂಗಾದೇವಿ, ಮಹಾಬೋಧಿ ಸೊಸೈಟಿಯ ಶ್ರೀ ಆನಂದ ಭಂತೇಜಿ ಸೇರಿದಂತೆ ಹಲವಾರು ಮಠಾಧೀಶರುಗಳು, ವಿಧಾನಪರಿಷತ್ ಸದಸ್ಯರಾದ ಡಾ. ಯತೀಂದ್ರ ಸಿದ್ಧರಾಮಯ್ಯ ಉಪಸ್ಥಿತರಿದ್ದರು. ಶ್ರೀಮತಿ ಶ್ರುತಿ ಪ್ರಾರ್ಥಿಸಿದರು. ಶ್ರೀ ಕೆ.ಪಿ. ಉದಯಕುಮಾರ್ ಸ್ವಾಗತಿಸಿದರು. ಪ್ರೊ. ಡಿ.ಎಸ್. ಸದಾಶಿವಮೂರ್ತಿ ಪ್ರಾಸ್ತಾವಿಕವಾಗಿ ಮಾತನಾಡಿದರು. ಶ್ರೀ ಬಿ.ಎಂ. ಶಿವಮಲ್ಲಪ್ಪ ವಂದಿಸಿದರು. ಶ್ರೀಮತಿ ಸವಿತಾ ಶಿವಕುಮಾರ್ ಕಾರ್ಯಕ್ರಮ ನಿರೂಪಿಸಿದರು.

**ಆರೋಗ್ಯ ಮತ್ತು ನೆಮ್ಮದಿ ಮನುಷ್ಯನ ನಿಜವಾದ ಸಂಪತ್ತುಗಳು**

ಆರೋಗ್ಯ ಮತ್ತು ನೆಮ್ಮದಿ ಮನುಷ್ಯನ ನಿಜವಾದ ಸಂಪತ್ತುಗಳು ಎಂದು ಪರಮಪೂಜ್ಯ ಜಗದ್ಗುರುಗಳವರು ನವೆಂಬರ್ 7ರಂದು ಮೈಸೂರಿನಲ್ಲಿ ವಿಶ್ವ ಆಯುರ್ವೇದ ಪರಿಷತ್ತಿನ ವತಿಯಿಂದ ಆಯೋಜಿಸಿದ್ದ 'ಸಂಯೋಜನಂ – 2025' ರಾಷ್ಟ್ರೀಯ ವಿಚಾರಸಂಕಿರಣ ಉದ್ಘಾಟನೆಯ ದಿವ್ಯ ಸಾನ್ನಿಧ್ಯ ವಹಿಸಿ ಮಾತನಾಡುತ್ತಾ ತಿಳಿಸಿದರು. ಆಯುರ್ವೇದ ಎಂದರೆ ಆರೋಗ್ಯದಿಂದಿರುವುದು ಎಂದರ್ಥ. ನಿಧಾನ ಗುಣವುಳ್ಳ ಆಯುರ್ವೇದದ ಮಹತ್ವವನ್ನು ಜನತೆ ಅರಿಯುತ್ತಿದ್ದಾರೆ. ವಿವಿಧ ವೈದ್ಯ ಪದ್ಧತಿ ಮೊರೆ ಹೋಗಿ ಕೊನೆಗೆ ಆಯುರ್ವೇದ ಪದ್ಧತಿಗೆ ಮೊರೆ ಹೋಗುತ್ತಿದ್ದಾರೆ. ಹಿಂದೆ ಹಿರಿಯರು ನಿತ್ಯ ಕರ್ಮದಲ್ಲಿ ಏನು ಮಾಡಬೇಕು, ಏನು ಮಾಡಬಾರದು ಎಂದು ತಿಳಿದು ಆರೋಗ್ಯ ಕಾಪಾಡಿಕೊಳ್ಳುತ್ತಿದ್ದರು. ಆರೋಗ್ಯದ ಹಿತದೃಷ್ಟಿಯಿಂದ ಯಾವ ಋತುಗಳಿಗೆ ಏನು ಸೇವಿಸಬೇಕು ಎಂದು ತಿಳಿದುಕೊಳ್ಳುತ್ತಿದ್ದರು. ಆಯುರ್ವೇದದಿಂದ ಆರೋಗ್ಯಕರ ಸಮಾಜ ನಿರ್ಮಿಸಬಹುದಾಗಿದೆ ಎಂದು ಹೇಳಿದರು.

ಸಂಸದರಾದ ಡಾ. ಸಿ.ಎನ್. ಮಂಜುನಾಥ್‌ರವರು ವೇದ, ಉಪನಿಷತ್ತು, ಆಯುರ್ವೇದ, ಯೋಗ ಹಾಗೂ ಕಲಾ ವೈವಿಧ್ಯದಂತಹ ಕೊಡುಗೆಗಳನ್ನು ಭಾರತ ಜಗತ್ತಿಗೆ ನೀಡಿದೆ. ಇಂದಿನ ದಿನಮಾನಗಳಲ್ಲಿ ಕಲಬೆರಕೆ ಆಹಾರದಿಂದ, ನಿಗದಿತ ಸಮಯದಲ್ಲಿ ಊಟ ಮಾಡದಿರುವುದರಿಂದ ರೋಗ–ರುಜಿನಗಳನ್ನು ನಾವೇ ಬರಮಾಡಿಕೊಳ್ಳುತ್ತಿದ್ದೇವೆ. ರೋಗಿಗಳಿಗೆ ಆಯುರ್ವೇದ ಶ್ರೇಷ್ಠ ಚಿಕಿತ್ಸಾ ಪದ್ಧತಿಯಾಗಿದೆ. ರೋಗಗಳನ್ನು ಯಾವುದೇ ಅಡ್ಡ ಪರಿಣಾಮವಿಲ್ಲದೇ ಗುಣಪಡಿಸುವ ಶಕ್ತಿ ಆಯುರ್ವೇದಕ್ಕಿದೆ ಎಂದರು.

ವಿಶ್ರಾಂತ ನ್ಯಾಯಮೂರ್ತಿಗಳಾದ ಶ್ರೀ ಬಿ.ಕೆ. ಪಾಟೀಲ್, ಕುಲಪತಿಗಳಾದ ಪ್ರೊ. ಶರಣಪ್ಪ ವಿ. ಹಲಸೆ, ವಿಎಪಿ ರಾಷ್ಟ್ರೀಯ ಕಾರ್ಯನಿರ್ವಾಹಕ ಸದಸ್ಯರಾದ ಡಾ. ಯೋಗೇಶ್‌ಚಂದ್ರ ಮಿಶ್ರಾ, ಬೆಂಗಳೂರು ಎಸ್–ವ್ಯಾಸ ವಿಶ್ವವಿದ್ಯಾಲಯದ ಕುಲಪತಿಗಳಾದ ಡಾ. ಎನ್.ಕೆ. ಮಂಜುನಾಥ್ ಶರ್ಮಾ ಮೊದಲಾದವರು ಉಪಸ್ಥಿತರಿದ್ದರು. ಡಾ. ಬಿ.ಆರ್. ರಾಮಕೃಷ್ಣ ಸ್ವಾಗತಿಸಿದರು. ಡಾ. ಗಜಾನನ ಹೆಗ್ಡೆ ವಂದಿಸಿದರು.

**ಪ್ರಯತ್ನ ಮತ್ತು ಪರಿಶ್ರಮದಿಂದ ಹಿಂದೆ ಸರಿಯಬಾರದು**

ಪ್ರಯತ್ನ ಮತ್ತು ಪರಿಶ್ರಮದಿಂದ ಎಂದಿಗೂ ಹಿಂದೆ ಸರಿಯಬಾರದು ಎಂದು ಉಪರಾಷ್ಟ್ರಪತಿಗಳಾದ ಸನ್ಮಾನ್ಯ ಶ್ರೀ ಸಿ.ಪಿ. ರಾಧಾಕೃಷ್ಣನ್‌ರವರು ಪರಮಪೂಜ್ಯ ಜಗದ್ಗುರುಗಳವರ ದಿವ್ಯ ಸಾನ್ನಿಧ್ಯದಲ್ಲಿ ನವೆಂಬರ್ 9ರಂದು ನಡೆದ ಮೈಸೂರು ಜೆಎಸ್‌ಎಸ್ ಉನ್ನತ ಶಿಕ್ಷಣ ಮತ್ತು ಸಂಶೋಧನಾ ಅಕಾಡೆಮಿಯ 16ನೇ ಘಟಿಕೋತ್ಸವದಲ್ಲಿ ಭಾಷಣ ಮಾಡುತ್ತಾ ತಿಳಿಸಿದರು. ಇತರರೊಂದಿಗೆ ನಿಮ್ಮನ್ನು ಹೋಲಿಸಿಕೊಳ್ಳಬಾರದು. ದೇವರು ಪ್ರತಿಯೊಬ್ಬರನ್ನೂ ವಿಭಿನ್ನ ಪ್ರತಿಭೆಯಿಂದ ಸೃಷ್ಟಿಸಿರುತ್ತಾನೆ. ಕೆಲವೊಮ್ಮೆ ವಿಫಲತೆಗಳು ಎದುರಾಗಬಹುದು. ಸ್ವಾಮಿ ವಿವೇಕಾನಂದರು ಹೇಳಿದಂತೆ ಉದ್ದೇಶವನ್ನು ಸಾಧಿಸುವವರೆಗೂ ನಿಲ್ಲಬಾರದು. ಎಂದಿಗೂ ಶ್ರಮವನ್ನು ನಿಲ್ಲಿಸಬಾರದು. ಕೆಲವೊಮ್ಮೆ ದೇಹಕ್ಕೆ ವಿಶ್ರಾಂತಿ ಬೇಕಾಗಬಹುದು ಅದು ಸಹಜ. ಆದರೆ, ವಿಶ್ರಾಂತಿಯ ನಂತರ ಹೆಚ್ಚು ಉತ್ಸಾಹದಿಂದ ಕಾರ್ಯವನ್ನು ಪುನರಾರಂಭಿಸಬೇಕು. ನಾನು ಐದು ಚುನಾವಣೆಗಳಲ್ಲಿ ಸ್ಪರ್ಧಿಸಿದ್ದೆ. ಅದರಲ್ಲಿ ಎರಡು ಬಾರಿ ಗೆದ್ದಿದ್ದೇನೆ. ಮೂರು ಬಾರಿ ಸೋತಿದ್ದೇನೆ. ಏಕೆ ಸೋತಿದ್ದೇನೆ ಎಂಬುದು ನನಗೂ ತಿಳಿಯಲಿಲ್ಲ. ಆದರೆ, ಎಲ್ಲರೂ ಗೆಲ್ಲುವುದಾಗಿ ನಂಬಿದ್ದರು. ಅದೇ ನಿರಂತರ ಶ್ರಮದಿಂದ ಇಂದು ನಾನು ರಾಷ್ಟ್ರದ ಉಪರಾಷ್ಟ್ರಪತಿಯಾಗಿ ಸೇವೆ ಸಲ್ಲಿಸಲು ಅವಕಾಶ ದೊರೆತಿದೆ. ಶಿಕ್ಷಣ ಮುಗಿದ ನಂತರ ಜೀವನ ಮುಗಿದಂತಾಗುವುದಿಲ್ಲ. ಅದು ನಿಮ್ಮ ಹೊಸ ಪ್ರಯಾಣದ ಪ್ರಾರಂಭವಷ್ಟೇ. ನಿಮ್ಮ ಗುರಿ, ಕನಸು ಮತ್ತು ಭವಿಷ್ಯವನ್ನು ನಿಜಗೊಳಿಸಲು ನೀವು ಪ್ರಯತ್ನಿಸಬೇಕು. ಯಶಸ್ವಿಯಾಗುವುದು ಎಲ್ಲರಿಗೂ ಸಾಧ್ಯ. ಪ್ರತಿಭೆ ದೇವರ ಕೊಡುಗೆ ಆಗಬಹುದು. ಆದರೆ, ಸ್ಥಿರತೆ ನಿಮ್ಮ ಕೈಯಲ್ಲಿದೆ. ನೀವು ಗುರಿಯತ್ತ ನಿಮ್ಮ ವೇಗದಲ್ಲಿ ನಿರಂತರವಾಗಿ ಸಾಗಬೇಕು ಎಂದು ತಿಳಿಸಿದರು.

ರಾಜ್ಯಪಾಲರಾದ ಶ್ರೀ ಥಾವರ್ ಚಂದ್ ಗೆಹ್ಲೋಟ್‌ರವರು ಇಂದು ಭಾರತವು ನಾವೀನ್ಯತೆ ಮತ್ತು ಸಂಶೋಧನೆಯ ಹೊಸ ಯುಗವನ್ನು ಪ್ರವೇಶಿಸುತ್ತಿದೆ. ಆರೋಗ್ಯ ರಕ್ಷಣೆ, ಜೈವಿಕ ತಂತ್ರಜ್ಞಾನ, ಔಷಧ, ಕೃತಕ ಬುದ್ಧಿಮತ್ತೆ ಮತ್ತು ಸುಸ್ಥಿರ ಅಭಿವೃದ್ಧಿ ಕ್ಷೇತ್ರಗಳಲ್ಲಿ ಅಪಾರ ಅವಕಾಶಗಳಿವೆ. ಯುವ ಪ್ರತಿಭೆಗಳು ಉದ್ಯಮಶೀಲತೆಯ ಮೂಲಕ ಸಮಾಜಕ್ಕೆ ಹೊಸ ದಿಕ್ಕನ್ನು ನೀಡುವುದು ಅತ್ಯಗತ್ಯ. ಉದ್ಯೋಗಾಕಾಂಕ್ಷಿಗಳ ಬದಲು ಉದ್ಯೋಗ ಒದಗಿಸುವವರಾಗಿರಲು ಶ್ರಮಿಸಬೇಕು. ಜೀವನದಲ್ಲಿ ಯಾವಾಗಲೂ ನಿರಂತರ ಕಲಿಕೆ ಮತ್ತು ನಿರಂತರ ಸೇವೆಯ ಮನೋಭಾವವನ್ನು ಕಾಪಾಡಿಕೊಳ್ಳಬೇಕು. ಮೈಸೂರು ಮತ್ತು ಬೆಂಗಳೂರನ್ನು ರಾಷ್ಟ್ರದ ಶೈಕ್ಷಣಿಕ ಕೇಂದ್ರವನ್ನಾಗಿ ಮಾಡಲು ಜೆಎಸ್‌ಎಸ್ ಸಂಸ್ಥೆ ಮಹತ್ವದ ಕೊಡುಗೆ ನೀಡುತ್ತಿದೆ. ಪರಮಪೂಜ್ಯ ಜಗದ್ಗುರು ಶ್ರೀ ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳು ಧರ್ಮ, ಸಂಸ್ಕೃತಿ ಮತ್ತು ಆಧ್ಯಾತ್ಮಿಕತೆಯ ಸಂರಕ್ಷಣೆಯ ಜೊತೆಗೆ ಚಿಂತನಶೀಲ ಮತ್ತು ಸೂಕ್ಷ್ಮಗ್ರಾಹಿಯಾಗಿದ್ದರು. ಸಮಾಜದಲ್ಲಿನ ಅಸಮಾನತೆ, ಬಡತನ ಮತ್ತು ಅನಕ್ಷರತೆಯನ್ನು

ನಿರ್ಮೂಲನೆ ಮಾಡಲು ಅವರು ಅನೇಕ ಸಕಾರಾತ್ಮಕ ಕ್ರಮಗಳನ್ನು ಕೈಗೊಂಡರು ಎಂದು ತಿಳಿಸಿದರು.

ಘಟಿಕೋತ್ಸವದಲ್ಲಿ ಒಟ್ಟು 2925 ವಿದ್ಯಾರ್ಥಿಗಳಿಗೆ ಪದವಿಗಳನ್ನು ಪ್ರದಾನ ಮಾಡಲಾಯಿತು. ನಿವೃತ್ತ ನ್ಯಾಯಮೂರ್ತಿಗಳಾದ ಡಾ. ಶಿವರಾಜ ವಿ. ಪಾಟೀಲ್, ಕಾರ್ಯನಿರ್ವಾಹಕ ಕಾರ್ಯದರ್ಶಿಗಳಾದ ಡಾ. ಸಿ.ಜಿ. ಬೆಟಸೂರಮಠ, ಸಮಕುಲಾಧಿಪತಿಗಳಾದ ಡಾ. ಬಿ. ಸುರೇಶ್, ಕುಲಪತಿಗಳಾದ ಡಾ. ಎಚ್. ಬಸವನಗೌಡಪ್ಪನವರು ಉಪಸ್ಥಿತರಿದ್ದರು.

**ಸನತ್ ಶಿಕ್ಷಣ ಸಂಸ್ಥೆಗಳ ನೂತನ ಕಟ್ಟಡ ಲೋಕಾರ್ಪಣೆ**

ನವೆಂಬರ್ 9ರಂದು ಮೈಸೂರಿನಲ್ಲಿ ಸನತ್ ಶಿಕ್ಷಣ ಸಂಸ್ಥೆಗಳ ನೂತನ ಕಟ್ಟಡವು ಪರಮಪೂಜ್ಯ ಜಗದ್ಗುರುಗಳವರು ದಿವ್ಯ ಸಾನ್ನಿಧ್ಯದಲ್ಲಿ ಲೋಕಾರ್ಪಣೆಗೊಂಡಿತು. ಪೂಜ್ಯರು ಸಂಸ್ಥೆಯ ಕಾರ್ಯವೈಖರಿಯ ಬಗ್ಗೆ ಮೆಚ್ಚುಗೆ ವ್ಯಕ್ತಪಡಿಸಿ ಶುಭಹಾರೈಸಿದರು.

ಶಾಸಕರಾದ ಶ್ರೀ ತನ್ವೀರ್ ಸೇಠ್, ಆರ್‌ಜಿಯುಎಚ್‌ಎಸ್ ಕುಲಪತಿಗಳಾದ ಡಾ. ಬಿ.ಸಿ. ಭಗವಾನ್‌ರವರು, ವಿಕ್ರಂ ಔರಾ ಆಸ್ಪತ್ರೆಯ ಸಿಇಒ ಡಾ. ಎಸ್.ಜಿ. ವಿಕ್ರಂ, ಕಾಮಾಕ್ಷಿ ಆಸ್ಪತ್ರೆ ಅಧ್ಯಕ್ಷರಾದ ಶ್ರೀ ಎಂ. ಮಹೇಶ್ ಶೆಣೈ, ವಾಣಿಜ್ಯ ತೆರಿಗೆ ಇಲಾಖೆಯ ಜಂಟಿ ನಿರ್ದೇಶಕರಾದ ಶ್ರೀ ಎಚ್.ಎನ್. ಶ್ರೀಕಂಠಮೂರ್ತಿ, ಟ್ರಸ್ಟಿಗಳಾದ ಶ್ರೀ ಎಸ್. ದೈವಿಕ್, ಶ್ರೀ ಎಸ್. ಲಿಖಿತ್‌ಕುಮಾರ್ ಮೊದಲಾದವರು ಉಪಸ್ಥಿತರಿದ್ದರು.

**ಚೆನ್ನೈನಲ್ಲಿ ಬಸವ ಮಂಟಪ ಲೋಕಾರ್ಪಣೆ**

ಚೆನ್ನೈನ ಕೊಲ್ಲುಮೇಡುವಿನಲ್ಲಿ ನವೆಂಬರ್ 16ರಂದು ಬಸವೇಶ್ವರ ಸೋಶಿಯಲ್ ಟ್ರಸ್ಟ್, ವೀರಶೈವ ಲಿಂಗಾಯತ ವೆಲ್‌ಫೇರ್ ಅಸೋಸಿಯೇಷನ್, ಶ್ರೀ ಕಾಶಿ ವಿಶ್ವನಾಥ–ವಿಶಾಲಾಕ್ಷಿ ಆಲಯ ಟ್ರಸ್ಟ್ ಹಾಗೂ ಚೆನ್ನೈ ಹೊರನಾಡು ಕನ್ನಡಿಗರ ಸಂಘದಿಂದ ನಿರ್ಮಿಸಿರುವ ಬಸವ ಮಂಟಪ ಹಾಗೂ ಶ್ರೀ ಬಸವೇಶ್ವರರ ಪ್ರತಿಮೆಯನ್ನು ಪರಮಪೂಜ್ಯ ಜಗದ್ಗುರುಗಳವರ ದಿವ್ಯ ಸಾನ್ನಿಧ್ಯದಲ್ಲಿ ಲೋಕಾರ್ಪಣೆಗೊಳಿಸಲಾಯಿತು.

ಈ ಸಂದರ್ಭದಲ್ಲಿ 70ಕ್ಕೂ ಹೆಚ್ಚು ಜನರು ಶಿವದೀಕ್ಷೆ–ಲಿಂಗದೀಕ್ಷೆಯನ್ನು ಪಡೆದರು. ಕರ್ನಾಟಕ ಜಾನಪದ ಅಕಾಡೆಮಿ ಅಧ್ಯಕ್ಷರಾದ ಶ್ರೀ ಗೊಲ್ಲಹಳ್ಳಿ ಶಿವಪ್ರಸಾದ್, ಮದ್ರಾಸ್ ವಿಶ್ವವಿದ್ಯಾಲಯ ಕನ್ನಡ ವಿಭಾಗದ ಮುಖ್ಯಸ್ಥರಾದ ಡಾ. ತಮಿಳ್ ಸೆಲ್ವಿ, ಬನಾರಸ್ ಹಿಂದೂ ವಿಶ್ವವಿದ್ಯಾಲಯದ ಡಾ. ಎನ್. ರಮಣ್, ನಿವೃತ್ತ ಪ್ರಾಧ್ಯಾಪಕರಾದ ಪ್ರೊ. ಎ.ಆರ್. ಶಿವಕುಮಾರ್, ಊಟಿ ಹಿಟ್ಟಕಲ್ ಗ್ರೂಪ್‌ನ ವ್ಯವಸ್ಥಾಪಕ ನಿರ್ದೇಶಕರಾದ ಶ್ರೀ ಬಿ. ರಾಜೇಶ್‌ರವರುಗಳು ಮಾತನಾಡಿದರು. ತಮಿಳುನಾಡು ಸರ್ಕಾರದ ವೀರಮಾಮುನಿವರ್ ಪ್ರಶಸ್ತಿ ಪುರಸ್ಕೃತರಾದ ಡಾ. ಆರ್.ಕೆ. ಹಾಲುದುರ್ಗೈ, ಕರ್ನಾಟಕ ಸಂಘದ ಶ್ರೀ ನಾರಾಯಣ

ಭಟ್, ಶ್ರೀ ಗುರುಪ್ರಸಾದ್ ಕುಂಡತ್ತಾಯ, ಶ್ರೀ ವಸಂತ ಹೆಗಡೆ, ಕನ್ನಡ ಬಳಗದ ಶ್ರೀಮತಿ ಪ್ರಭಾ ಮಂಜುನಾಥ್, ಲಾರಿ ಮಾಲೀಕರ ಸಂಘದ ಅಧ್ಯಕ್ಷರಾದ ಶ್ರೀ ಷಣ್ಮುಗಂ, ಬಸವೇಶ್ವರ ಸೋಶಿಯಲ್ ಟ್ರಸ್ಟ್‌ನ ಶ್ರೀಮತಿ ದಾಕ್ಷಾಯಿಣಿ ದಳವಾಯಿ ಮತ್ತು ಶ್ರೀ ಶಿವಮೂರ್ತಿಯವರುಗಳು ಉಪಸ್ಥಿತರಿದ್ದರು.

### ಇನ್ನೊಬ್ಬರಿಗೆ ಕೃತಜ್ಞರಾಗಿ ಬದುಕುವುದೇ ಭಗವಂತನಿಗೆ ಸಲ್ಲಿಸುವ ಪ್ರಾರ್ಥನೆ

ಇನ್ನೊಬ್ಬರಿಗೆ ಕೃತಜ್ಞರಾಗಿ ಬದುಕುವುದೇ ಭಗವಂತನಿಗೆ ಸಲ್ಲಿಸುವ ನಿಜವಾದ ಪ್ರಾರ್ಥನೆ ಎಂದು ಪರಮಪೂಜ್ಯ ಜಗದ್ಗುರುಗಳವರು ನವೆಂಬರ್ 18ರಂದು ಮೈಸೂರು ಜೆಎಸ್‌ಎಸ್ ಮಹಿಳಾ ಕಾಲೇಜಿನ ಮಂತ್ರಮಹರ್ಷಿ ಸಭಾಂಗಣದಲ್ಲಿ ಆಯೋಜಿಸಿದ್ದ ರಾಜೇಂದ್ರ ಶ್ರೀಗಳ 110ನೇ ಜಯಂತಿ ಹಾಗೂ ಬಸವಶ್ರೀ ಪ್ರಶಸ್ತಿ ಪ್ರದಾನ ಸಮಾರಂಭದ ದಿವ್ಯ ಸಾನ್ನಿಧ್ಯ ವಹಿಸಿ ಮಾತನಾಡುತ್ತಾ ತಿಳಿಸಿದರು. ಮನುಷ್ಯ ಮತ್ತೊಬ್ಬರಿಗೆ ಸಹಾಯ ಮಾಡಬೇಕು. ದುಃಖದಲ್ಲಿರುವವರಿಗೆ ಸಾಂತ್ವನ ಹೇಳುವುದೂ ಕೂಡ ಸೇವಾಕಾರ್ಯವೇ. ದಯಾಗುಣಗಳನ್ನು ಬೆಳೆಸಿಕೊಳ್ಳಬೇಕು. ಶ್ರೀ ಶಿವರಾತ್ರಿ ರಾಜೇಂದ್ರ ಸ್ವಾಮಿಗಳವರ ಆದರ್ಶಗಳು ಎಂದೆಂದಿಗೂ ಮಾರ್ಗದರ್ಶಕವಾಗಿವೆ. ಪ್ರಸ್ತುತ ಕನ್ನಡ ಸಾಹಿತ್ಯದಲ್ಲಿ ಚುಟುಕು ಸಾಹಿತ್ಯಕ್ಕೆ ಸ್ಥಾನಮಾನ ದೊರೆತಿದೆ ಎಂದರೆ ಅದಕ್ಕೆ ಡಾ. ಎಂ.ಜಿ.ಆರ್. ಅರಸ್ ಅವರೇ ಕಾರಣ. ಈಗ ಚುಟುಕು ಸಾಹಿತ್ಯವೂ ಸಾಹಿತ್ಯದ ಒಂದು ಭಾಗ ಎನಿಸಿಕೊಂಡು ಕನ್ನಡ ಸಾಹಿತ್ಯ ಸಮ್ಮೇಳನಗಳಲ್ಲಿ ಅವಕಾಶ ಕಲ್ಪಿಸಿಕೊಂಡಿದೆ. ಡಾ. ಎಚ್.ಎನ್. ಲೋಕೇಶಪ್ಪ ಸಮಾಜ ಸೇವಾ ಕಾರ್ಯದಲ್ಲಿ ತೊಡಗಿಸಿಕೊಂಡು ಸಂಗೀತ ಕ್ಷೇತ್ರಕ್ಕೆ ಕೊಡುಗೆ ನೀಡಿದ್ದಾರೆ. ಮೈಸೂರು ಭಾಗದಲ್ಲಿ ಸಂಗೀತ ಪಸರಿಸಲು ಅಮೋಘ ಸೇವೆ ಸಲ್ಲಿಸಿದ್ದಾರೆ. ಇವರಿಬ್ಬರಿಗೂ ಬಸವಶ್ರೀ ಪ್ರಶಸ್ತಿ ದೊರೆತಿರುವುದು ಸಂತೋಷದ ಸಂಗತಿ ಎಂದರು.

ಡಾ. ಎಂ.ಜಿ.ಆರ್. ಅರಸ್ ಮತ್ತು ಡಾ. ಎಚ್.ಎಂ. ಲೋಕೇಶಪ್ಪನವರಿಗೆ ಬಸವ ಶ್ರೀ ಪ್ರಶಸ್ತಿ ಪ್ರದಾನ ಮಾಡಲಾಯಿತು.

ವಿಧಾನಪರಿಷತ್ ಮಾಜಿ ಸದಸ್ಯರಾದ ಶ್ರೀ ತೋಂಟದಾರ್ಯ ಶ್ರೀ ಶಿವರಾತ್ರೀಶ್ವರ ಮಹಿಳಾ ಸಮಾಜದ ಅಧ್ಯಕ್ಷರಾದ ಡಾ. ರತ್ನ ಹಾಲಪ್ಪಗೌಡ ಉಪಸ್ಥಿತರಿದ್ದರು. ಡಾ. ಲೀಲಾ ಪ್ರಕಾಶ್ ನುಡಿನಮನ ಸಲ್ಲಿಸಿದರು. ಶ್ರೀ ಶ್ರೀಕಂಠರಾವ್ ಪ್ರಾರ್ಥಿಸಿದರು. ಶ್ರೀಮತಿ ಮಮತಾ ಸುರೇಶ್ ಸ್ವಾಗತಿಸಿದರು. ಶ್ರೀಮತಿ ಹೇಮಲತ ವಂದಿಸಿದರು.

### ಸದಾ ಭಕ್ತರು ಮತ್ತು ಮಠದ ಅಭಿವೃದ್ಧಿಗೆ ಶ್ರಮಿಸಿದ ಮಲ್ಲನಮೂಲೆ ಶ್ರೀಗಳು

ಮಲ್ಲನಮೂಲೆ ಶ್ರೀಗಳು ಸದಾ ಭಕ್ತರು ಮತ್ತು ಮಠದ ಅಭಿವೃದ್ಧಿಗೆ ಶ್ರಮಿಸುತ್ತಿದ್ದರು ಎಂದು ಪರಮಪೂಜ್ಯ ಜಗದ್ಗುರುಗಳವರು ನವೆಂಬರ್ 20ರಂದು ಮಲ್ಲನಮೂಲೆ ಶ್ರೀಗುರು ಕಂಬಳೀಶ್ವರ ಮಠದ ಶ್ರೀ ಚನ್ನಬಸವ ಸ್ವಾಮಿಗಳವರ ಭಕ್ತಿಯ ನೆನಪು ಕಾರ್ಯಕ್ರಮದ ದಿವ್ಯ ಸಾನ್ನಿಧ್ಯ ವಹಿಸಿ ಮಾತನಾಡುತ್ತಾ ತಿಳಿಸಿದರು. ಮಲ್ಲನಮೂಲೆ ಶ್ರೀಗಳು ಕಾಯಕ

ಹಾಗೂ ದಾಸೋಹದ ತತ್ವಗಳನ್ನು ಆಚರಣೆಯಲ್ಲಿ ಅಳವಡಿಸಿಕೊಂಡಿದ್ದರು. ಭಕ್ತರ ಆಶೋತ್ತರಗಳಿಗೆ ಪೂರಕವಾಗಿ ಸ್ಪಂದಿಸುತ್ತಿದ್ದರು. ಎಲ್ಲ ಜಾತಿ, ಮತ, ಧರ್ಮಗಳವರೂ ಇವರ ಭಕ್ತರಾಗಿದ್ದರು. ಯಾವುದೇ ತಪ್ಪುಗಳು ಕಂಡುಬಂದಾಗ ನಿಷ್ಠುರವಾಗಿ ಎಚ್ಚರಿಸುತ್ತಿದ್ದರು. ಧಾರ್ಮಿಕ, ಸಾಂಸ್ಕೃತಿಕ ಶೈಕ್ಷಣಿಕ ಎಲ್ಲ ಕ್ಷೇತ್ರಗಳ ಬಗ್ಗೆಯೂ ಆಸಕ್ತಿಯನ್ನು ಹೊಂದಿದ್ದರು. ಶ್ರೀಮಠದ ನೂತನ ಪೀಠಾಧಿಪತಿಗಳಾಗಿರುವ ಶ್ರೀ ಇಮ್ಮಡಿ ಸಿದ್ಧಲಿಂಗ ಸ್ವಾಮಿಗಳಿಗೆ ಸಮಾಜದ ಎಲ್ಲರ ಸಹಕಾರ ಹಾಗೂ ಬೆಂಬಲ ಅಗತ್ಯ ಎಂದರು.

ದೇವನೂರು, ಹುಲ್ಲಹಳ್ಳಿ, ಶಿರಮಳ್ಳಿ ಶ್ರೀಗಳು, ಮಾಜಿ ಶಾಸಕರಾದ ಶ್ರೀ ಬಿ. ಹರ್ಷವರ್ಧನ್ ಶ್ರೀ ಎಸ್.ಎಂ. ಕೆಂಪಣ್ಣ, ಶ್ರೀ ಎಸ್. ಮಹದೇವಯ್ಯ ಮಾತನಾಡಿದರು. ವಿಶ್ರಾಂತ ಪ್ರಾಧ್ಯಾಪಕರಾದ ಪ್ರೊ. ಡಿ. ಸದಾಶಿವಮೂರ್ತಿ ನುಡಿನಮನ ಸಲ್ಲಿಸಿದರು.

ಶ್ರೀ ಇಮ್ಮಡಿ ಸಿದ್ಧಲಿಂಗ ಸ್ವಾಮಿಗಳು, ಶ್ರೀ ಎಸ್.ಎಂ. ಕೆಂಪಣ್ಣ, ಶ್ರೀ ಶಿವಪ್ಪದೇವರು, ಶ್ರೀ ಎಂ.ಪಿ. ನಟರಾಜು ಮೊದಲಾದವರು ಉಪಸ್ಥಿತರಿದ್ದರು.

**ಬಾಲಗಂಗಾಧರನಾಥ ಶ್ರೀಗಳು ದೂರದೃಷ್ಟಿಯನ್ನು ಹೊಂದಿದ್ದ ದಾರ್ಶನಿಕರು**

ಬಾಲಗಂಗಾಧರನಾಥ ಶ್ರೀಗಳು ದೂರದೃಷ್ಟಿಯನ್ನು ಹೊಂದಿದ್ದ ದಾರ್ಶನಿಕರಾಗಿದ್ದರು ಎಂದು ಪರಮಪೂಜ್ಯ ಜಗದ್ಗುರುಗಳವರು ನವೆಂಬರ್ 21ರಂದು ಬೆಂಗಳೂರು ಕೆಂಗೇರಿಯಲ್ಲಿ ಆದಿಚುಂಚನಗಿರಿ ಶಿಕ್ಷಣ ಟ್ರಸ್ಟ್‌ನಿಂದ ಆಯೋಜಿಸಿದ್ದ ಬಿಜಿಎಸ್ ಉತ್ಸವದ ದಿವ್ಯ ಸಾನ್ನಿಧ್ಯ ವಹಿಸಿ ಮಾತನಾಡುತ್ತಾ ತಿಳಿಸಿದರು. ಶ್ರೀ ಬಾಲಗಂಗಾಧರನಾಥ ಮಹಾಸ್ವಾಮಿಗಳು ಮಾತೃವಾತ್ಸಲ್ಯದ ಕರುಣಾಮೂರ್ತಿಗಳಾಗಿದ್ದರು. ಸಂಸ್ಥೆಯನ್ನು ಕಟ್ಟಲು ಅಪಾರವಾಗಿ ಶ್ರಮಿಸಿದ್ದಾರೆ. ಅತ್ಯಂತ ಮೇರು ವ್ಯಕ್ತಿತ್ವವನ್ನು ಹೊಂದಿದ್ದ ಶ್ರೇಷ್ಠ ಸಂತರು. ಭಕ್ತರು ನೀಡುವ ಕಾಣಿಕೆಯನ್ನು ಸಮಾಜಮುಖಿ ಕಾರ್ಯಗಳಿಗೆ ಬಳಸಿದರು. ಅವರ ಸಂಪೂರ್ಣ ಅನುಭವವನ್ನು ನಿರ್ಮಲಾನಂದನಾಥ ಶ್ರೀಗಳಿಗೆ ಧಾರೆ ಎರೆದರು. ಶ್ರೀಗಳು ಪರಂಪರೆ ಮತ್ತು ಆಧುನಿಕತೆ ಒಂದಾಗಿ ಸಮ್ಮಿಳತಗೊಂಡವರು. ಸಂಸ್ಥೆಯನ್ನು ಅತ್ಯಂತ ದಕ್ಷವಾಗಿ ಮುನ್ನಡೆಸಿಕೊಂಡು ಸಾಗುತ್ತಿದ್ದಾರೆ. ಬಿಜಿಎಸ್ ಸಂಸ್ಥೆ ಜಾಗತಿಕಮಟ್ಟದಲ್ಲಿ ಗುರುತಿಸಿಕೊಂಡಿದೆ ಎಂದು ಹೇಳಿದರು.

ಆದಿಚುಂಚನಗಿರಿ ಜಗದ್ಗುರು ಡಾ. ಶ್ರೀ ನಿರ್ಮಲಾನಂದನಾಥ ಮಹಾಸ್ವಾಮಿಗಳು ಹಿರಿಯರು ಹಾಕಿಕೊಟ್ಟ ಪರಂಪರೆಯನ್ನು ಅರಿತು ಅದೇ ದಾರಿಯಲ್ಲಿ ಸಾಗಬೇಕು. ಅದು ಬದುಕನ್ನು ಕಟ್ಟಿಕೊಳ್ಳಲು ಮಾರ್ಗದರ್ಶನವನ್ನು ನೀಡುತ್ತದೆ. ಅದಕ್ಕೆ ಆದರ್ಶಪ್ರಾಯರಾದವರು ಶ್ರೀ ಬಾಲಗಂಗಾಧರನಾಥ ಮಹಾಸ್ವಾಮಿಗಳು. ಜಡಗಟ್ಟಿದ್ದ ಸಮಾಜಕ್ಕೆ ಚೈತನ್ಯವನ್ನು ಕೊಟ್ಟವರು. ಅಂತಹವರ ಆದರ್ಶಗಳನ್ನು ಮಕ್ಕಳ ಮನಸ್ಸಿಗೆ ತುಂಬಲು ಅವರ ನೆನಪಿನಲ್ಲಿ ಈ ಉತ್ಸವವನ್ನು ಆಯೋಜಿಸಲಾಗಿದೆ ಎಂದು ತಿಳಿಸಿದರು.

ಶ್ರೀ ಸಿದ್ಧಗಂಗಾ ಮಠದ ಶ್ರೀ ಸಿದ್ಧಲಿಂಗ ಮಹಾಸ್ವಾಮಿಗಳು ಬಾಲಗಂಗಾಧರನಾಥ ಶ್ರೀಗಳು ಸ್ವಹಿತ ಬಯಸದೇ ಎಲ್ಲವನ್ನೂ ಸಮಾಜಕ್ಕೆ ಸಮರ್ಪಿಸಿದವರು. ಧಾರ್ಮಿಕ,

ಶೈಕ್ಷಣಿಕ, ಆರೋಗ್ಯ ಎಲ್ಲ ಕ್ಷೇತ್ರಗಳಿಗೂ ಮಹತ್ವವನ್ನು ನೀಡಿದ್ದವರು. ಅವರ ಕಾರ್ಯಗಳ ಮೂಲಕವೇ ಜನರ ಮನಸ್ಸಿನಲ್ಲಿ ಅಚ್ಚಳಿಯದೇ ಉಳಿದಿದ್ದಾರೆ ಎಂದರು.

ಕೇಂದ್ರ ಸಚಿವರಾದ ಶ್ರೀ ಹೆಚ್.ಡಿ. ಕುಮಾರಸ್ವಾಮಿಯವರು ಸರ್ಕಾರಗಳು ಶಾಲೆಗಳನ್ನು ನಡೆಸಲು ಕಷ್ಟಪಡುತ್ತಿರುವ ಸಂದರ್ಭದಲ್ಲಿ ಮಠಗಳು ಹಲವಾರು ಶಿಕ್ಷಣ ಸಂಸ್ಥೆಗಳನ್ನು ಸ್ಥಾಪಿಸಿ ಯಶಸ್ವಿಯಾಗಿ ಮುನ್ನಡೆಸಿಕೊಂಡು ಹೋಗತ್ತಿರುವುದು ಹೆಮ್ಮೆಯ ವಿಚಾರ ಎಂದರು.

ಕೇಂದ್ರದ ರಾಜ್ಯ ಸಚಿವರಾದ ಕು. ಶೋಭಾ ಕರಂದ್ಲಾಜೆಯವರು ಬಿಜಿಎಸ್ ಸಂಸ್ಥೆ ಕೇವಲ ಶಿಕ್ಷಣವನ್ನು ಮಾತ್ರ ನೀಡುತ್ತಿಲ್ಲ. ಬದಲಾಗಿ ಜೀವನದ ಪಾಠವನ್ನು ಕಲಿಸುತ್ತಿದೆ. ಶಿಕ್ಷಣ ಸಂಸ್ಥೆಗಳನ್ನು ನಡೆಸುವುದು ಸುಲಭದ ಕೆಲಸವಲ್ಲ. ಅದಕ್ಕೆ ಬಹಳಷ್ಟು ಶ್ರಮಪಡಬೇಕು ಎಂದು ಹೇಳಿದರು.

ಪಬ್ಲಿಕ್ ಟಿವಿ ಮುಖ್ಯಸ್ಥರಾದ ಶ್ರೀ ಹೆಚ್.ಆರ್. ರಂಗನಾಥ್, ಕಲಾವಿದರಾದ ಶ್ರೀಮತಿ ಮಾಲಾಶ್ರೀ, ಕು. ಆರಾಧನಾ, ಕು. ಸೌಂದರ್ಯಗೌಡ, ಗ್ಯಾರಂಟಿ ನ್ಯೂಸ್‌ನ ಶ್ರೀ ಶಿವಸ್ವಾಮಿ, ಶ್ರೀ ರಾಕೇಶ್ ಸಿಂಗ್ ಮೊದಲಾದವರು ಉಪಸ್ಥಿತರಿದ್ದರು.

**ದೇವಾಲಯಗಳಿಂದ ಮನಸ್ಸಿಗೆ ಶಾಂತಿ–ನೆಮ್ಮದಿ**

ಮನೆಯಲ್ಲಿ ಎಷ್ಟೇ ಕಷ್ಟ, ದುಃಖ ದುಮ್ಮಾನಗಳು ಇದ್ದರೂ ದೇವಸ್ಥಾನಕ್ಕೆ ಭೇಟಿ ನೀಡಿದಾಗ ಅವುಗಳು ದೂರವಾಗಿ ಮನಸ್ಸಿಗೆ ಶಾಂತಿ–ನೆಮ್ಮದಿಗಳು ಲಭಿಸುತ್ತವೆ ಎಂದು ಪರಮಪೂಜ್ಯ ಜಗದ್ಗುರುಗಳವರು ನವೆಂಬರ್ 24ರಂದು ಮೈಸೂರು ತಾಲ್ಲೂಕು ದೂರ ಗ್ರಾಮದಲ್ಲಿ ನೂತನವಾಗಿ ನಿರ್ಮಿಸಿರುವ ಶ್ರೀ ಶಂಭುಲಿಂಗೇಶ್ವರ ದೇವಸ್ಥಾನದ ಮಹಾದ್ವಾರ, ಗಣೇಶ, ಸುಬ್ರಹ್ಮಣ್ಯ, ನವಗ್ರಹ ದೇವಸ್ಥಾನ, ಶ್ರೀ ಮೂಗಪ್ಪ ಸ್ವಾಮಿಗಳ ಗದ್ದುಗೆ ಹಾಗೂ ಶಿವ ಭವನದ ಉದ್ಘಾಟನೆಯ ದಿವ್ಯ ಸಾನ್ನಿಧ್ಯ ವಹಿಸಿ ಮಾತನಾಡುತ್ತಾ ತಿಳಿಸಿದರು. ಇಲ್ಲಿ ನಿರ್ಮಾಣಗೊಂಡಿರುವ ದೇವಸ್ಥಾನದಲ್ಲಿ ಉತ್ತಮ ವಾತಾವರಣವಿದೆ. ಭಾರತ ಧಾರ್ಮಿಕವಾಗಿ ಶ್ರೀಮಂತವಾದ ದೇಶ. 21ನೇ ಶತಮಾನದಲ್ಲಿಯೂ ಇಡೀ ಜಗತ್ತು ಭಾರತದ ಕಡೆ ನೋಡಲು ಆಧ್ಯಾತ್ಮಿಕ ಶಕ್ತಿ ಘನೀಭವಿಸಿರುವುದೇ ಕಾರಣ ಎಂದರು.

ಶ್ರೀ ಸಿದ್ಧಗಂಗಾ ಮಠದ ಶ್ರೀ ಸಿದ್ಧಲಿಂಗ ಮಹಾಸ್ವಾಮಿಗಳು ಭೌತಿಕವಾಗಿ ಎಷ್ಟೇ ದೂರದಲ್ಲಿದ್ದರೂ ಮನಸ್ಸುಗಳು ಹತ್ತಿರವಾಗಿದ್ದರೆ ಅದು ದೂರವಾಗುವುದಿಲ್ಲ. ಮನಸ್ಸಿಗೆ ತುಂಬಾ ಹತ್ತಿರವಾದ ಹಾಗೂ ಭಕ್ತಿ, ಶ್ರದ್ಧೆ, ನಿಷ್ಠೆ, ಕಾಯಕಕ್ಕೆ ಹೆಸರಾದ ಊರು ಈ ದೂರ ಗ್ರಾಮ. ದೇವಸ್ಥಾನ ಅಭಿವೃದ್ಧಿ ಸಮಿತಿ ಹಾಗೂ ಗ್ರಾಮಸ್ಥರ ಸಹಕಾರದೊಂದಿಗೆ ಮಹಾದ್ವಾರ, ವಿವಿಧ ದೇವಾಲಯಗಳು ಹಾಗೂ ಶಿವ ಭವನ ಅತ್ಯುತ್ತಮವಾಗಿ ನಿರ್ಮಾಣಗೊಂಡಿವೆ ಎಂದರು.

ದೇವನೂರು, ಬರಡನಪುರ ಮತ್ತು ಬಿಡಗಲು ಮಠಗಳ ಶ್ರೀಗಳು, ಶ್ರೀ ಡಿ.ಬಿ. ರಾಜಶೇಖರ ಮೂರ್ತಿ, ಶ್ರೀ ಯು.ಎಸ್. ಶೇಖರ್, ಶ್ರೀ ಎಂ. ಪ್ರದೀಪ್‌ಕುಮಾರ್,

ಶ್ರೀ ಕೆ.ವಿ. ಮಲ್ಲೇಶ್, ಶ್ರೀ ಕೆ.ಎನ್. ರವಿಶಂಕರ್, ಶ್ರೀ ಬಿ.ಎಸ್. ಪ್ರಶಾಂತ್, ಶ್ರೀ ಡಿ.ಬಿ. ನಾಗರಾಜು ಮೊದಲಾದವರು ಉಪಸ್ಥಿತರಿದ್ದರು.

**ಸ್ವಾಮಿ ವಿವೇಕಾನಂದರು ಎಂದೆಂದಿಗೂ ಭಾರತದ ಹೆಮ್ಮೆ**

ಜಗತ್ತಿಗೆ ಭಾರತದ ಮಹತ್ವವನ್ನು ಸಾರಿದ ಸ್ವಾಮಿ ವಿವೇಕಾನಂದರು ಎಂದೆಂದಿಗೂ ಭಾರತದ ಹೆಮ್ಮೆ ಎಂದು ಪರಮಪೂಜ್ಯ ಜಗದ್ಗುರುಗಳವರು ನವೆಂಬರ್ 24ರಂದು ಮೈಸೂರು ರಾಮಕೃಷ್ಣ ಆಶ್ರಮದ ಶತಮಾನೋತ್ಸವದ ಸಮರ್ಪಣಾ ಸಮಾವೇಶದ ದಿವ್ಯ ಸಾನ್ನಿಧ್ಯ ವಹಿಸಿ ಮಾತನಾಡುತ್ತಾ ತಿಳಿಸಿದರು. ಸ್ವಾಮಿ ಸಿದ್ಧೇಶ್ವರಾನಂದರು ಮೈಸೂರಿನಲ್ಲಿ ರಾಮಕೃಷ್ಣ ಆಶ್ರಮವನ್ನು ಸಂಸ್ಥಾಪಿಸಿ ಪ್ರಥಮ ದಿನ ಆರಂಭಿಸಿದ ಸೇವಾ ಕಾರ್ಯಕ್ರಮಗಳು ಇಲ್ಲಿ ಇಂದಿಗೂ ನಡೆಯುತ್ತಿವೆ. ಆಶ್ರಮವು ಆಧ್ಯಾತ್ಮಿಕ, ಸಾಂಸ್ಕೃತಿಕ ಮತ್ತು ಶೈಕ್ಷಣಿಕ ಕ್ಷೇತ್ರಗಳಲ್ಲಿ ಅನುಪಮವಾದ ಸೇವೆಯನ್ನು ಸಲ್ಲಿಸುತ್ತಿದೆ. ಆಶ್ರಮ ಅನೇಕ ಜನರಿಗೆ ದೀವಿಗೆಯಾಗಿದೆ. ಕುವೆಂಪುರವರ ವ್ಯಕ್ತಿತ್ವ ರೂಪಿಸುವಲ್ಲಿ ಮೈಸೂರಿನ ರಾಮಕೃಷ್ಣ ಆಶ್ರಮದ ಕೊಡುಗೆ ಮಹತ್ತರವಾದುದು. ಅವರು ಶ್ರೀ ರಾಮಾಯಣ ದರ್ಶನಂ ಮಹಾಕಾವ್ಯವನ್ನು ರಚಿಸಲು ಪರೋಕ್ಷವಾಗಿ ಶ್ರೀರಾಮಕೃಷ್ಣ ಆಶ್ರಮ ಹಾಗೂ ಸ್ವಾಮಿ ವಿವೇಕಾನಂದರೇ ಕಾರಣ. ಸ್ವಾಮಿ ವಿವೇಕಾನಂದರು ಅಮೆರಿಕಕ್ಕೆ ತೆರಳಲು ಮಹಾರಾಜರಾದ ಶ್ರೀ ಚಾಮರಾಜ ಒಡೆಯರ್‌ರವರು ಕಾರಣ ಎಂಬುದು ಹೆಮ್ಮೆಯ ವಿಚಾರ ಎಂದರು.

ಕೇಂದ್ರದ ಸಂಸ್ಕೃತಿ ಮತ್ತು ಪ್ರವಾಸೋದ್ಯಮ ಸಚಿವರಾದ ಶ್ರೀ ಗಜೇಂದ್ರ ಸಿಂಗ್ ಶೇಖಾವತ್‌ರವರು ಸ್ವಾಮಿ ವಿವೇಕಾನಂದರು ಚಾಮರಾಜ ಒಡೆಯರ್‌ರವರನ್ನು ಭೇಟಿ ಮಾಡಿ ಇಲ್ಲಿಂದಲೇ ಅಮೆರಿಕದ ಚಿಕಾಗೋದಲ್ಲಿ ನಡೆದ ಧರ್ಮ ಸಮ್ಮೇಳನಕ್ಕೆ ತೆರಳಿದ್ದರು. ನಂತರ ನಡೆದದ್ದು ಇತಿಹಾಸ. ಹೀಗಾಗಿ ಮೈಸೂರು ವಿಶ್ವ ಪ್ರಸಿದ್ಧವಾಗಿದೆ ಎಂದು ಹೇಳಿದರು.

ಮಾಜಿ ಮುಖ್ಯಮಂತ್ರಿಗಳಾದ ಶ್ರೀ ಬಸವರಾಜ ಬೊಮ್ಮಾಯಿಯವರು ಯಾವುದೇ ಮನುಷ್ಯ ಒಳ್ಳೆಯ ಬುದ್ಧಿ ಹಾಗೂ ಉತ್ತಮ ನಡವಳಿಕೆಯಿಂದ ಸತ್ಕಾರ್ಯಗಳನ್ನು ಮಾಡಬಹುದು. ಹಾಗೆಯೇ ನಮ್ಮ ಧರ್ಮವನ್ನು ಉಳಿಸಿ ಬೆಳೆಸುವುದರಿಂದ ಸನ್ಮಾರ್ಗವನ್ನು ಕಂಡುಕೊಳ್ಳಬಹುದು. ಇದುವೇ ಸಾರ್ಥಕ ಜೀವನದ ಸಂದೇಶವಾಗಿದೆ. ಅದನ್ನೇ ಸ್ವಾಮಿ ವಿವೇಕಾನಂದರು ಸಾಧಿಸಿ ತೋರಿಸಿದರು ಎಂದರು.

ಬೇಲೂರು ಶ್ರೀ ರಾಮಕೃಷ್ಣ ಮಠದ ಶ್ರೀ ಸ್ವಾಮಿ ಗೌತಮಾನಂದಜೀ ಮಹಾರಾಜ್‌ರವರು ಶ್ರೀ ರಾಮಕೃಷ್ಣ ಆಶ್ರಮ ನೀಡುವ ಶಿಕ್ಷಣದಿಂದ ಜನರ ಮನಸ್ಸುಗಳು ವಿಶಾಲವಾಗಿವೆ. ಮೈಸೂರು ಆಶ್ರಮ ನೂರುವರ್ಷವನ್ನು ಪೂರೈಸಿರುವುದು ಅತ್ಯಂತ ಸಾರ್ಥಕವಾಗಿದೆ. ಸ್ವಾಮಿ ವಿವೇಕಾನಂದರನ್ನು ನೆನೆಸಿಕೊಂಡರೆ ಉತ್ಸಾಹ ಹೆಚ್ಚುತ್ತದೆ. ಅವರದು ಸ್ಫೂರ್ತಿದಾಯಕವಾದ ವ್ಯಕ್ತಿತ್ವ. ವಿವೇಕಾನಂದರು ಜಗತ್ತಿಗೆ ಉತ್ತಮವಾದ ಆದರ್ಶಗಳು ಮತ್ತು ತತ್ತ್ವಗಳನ್ನು ನೀಡಿದ್ದಾರೆ ಎಂದು ಹೇಳಿದರು.

ಆದಿಚುಂಚನಗಿರಿ ಜಗದ್ಗುರು ಡಾ. ಶ್ರೀ ನಿರ್ಮಲಾನಂದನಾಥ ಮಹಾಸ್ವಾಮಿಗಳು, ಗುರುಗ್ರಾಮ್ ರಾಮಕೃಷ್ಣ ಮಿಷನ್‌ನ ಶ್ರೀ ಸ್ವಾಮಿ ಶಾಂತಾತ್ಮಾನಂದಜೀ, ಶ್ರೀ ಸ್ವಾಮಿ ಮುಕ್ತಿದಾನಂದ ಮಹಾರಾಜ್, ಹಿರಿಯ ವಕೀಲರಾದ ಶ್ರೀ ಶ್ರೀನಿವಾಸಮೂರ್ತಿ ಮೊದಲಾದವರು ಉಪಸ್ಥಿತರಿದ್ದರು. ಶ್ರೀ ಸ್ವಾಮಿ ಮಹಿಪಾಲಾನಂದಜೀ ಸ್ವಾಗತಿಸಿದರು. ಶ್ರೀ ಸ್ವಾಮಿ ಯುಕ್ತೇಶಾನಂದಜೀ ವಂದಿಸಿದರು.

**ಕ್ರೀಡೆಗಳಿಂದ ಚಾರಿತ್ರ್ಯ ನಿರ್ಮಾಣ ಸಾಧ್ಯ**

ಕ್ರೀಡೆಗಳಿಂದ ಚಾರಿತ್ರ್ಯ ನಿರ್ಮಾಣ ಸಾಧ್ಯ ಎಂದು ಮಹಾನಿರ್ದೇಶಕರು, ಆರಕ್ಷಕ ಮಹಾನಿರೀಕ್ಷಕರು ಮತ್ತು ಪೊಲೀಸ್ ಪಡೆ ಮುಖ್ಯಸ್ಥರಾದ ಡಾ. ಎಂ. ಎ. ಸಲೀಂರವರು ಪರಮಪೂಜ್ಯ ಜಗದ್ಗುರು ಡಾ. ಶ್ರೀ ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳವರ ಸಂಸ್ಮರಣೆಯ ಅಂಗವಾಗಿ ನವೆಂಬರ್ 25ರಂದು ಜೆಎಸ್‌ಎಸ್ ಅಂತರ–ಸಂಸ್ಥೆಗಳ ಕ್ರೀಡಾಕೂಟವನ್ನು ಉದ್ಘಾಟಿಸಿ ಮಾತನಾಡುತ್ತಾ ತಿಳಿಸಿದರು. ಕ್ರೀಡೆಗಳು ದೃಢವ್ಯಕ್ತಿತ್ವ ನಿರ್ಮಾಣಕ್ಕೆ ಸಹಕಾರಿಯಾಗಿದ್ದು, ಸೋಲು ಗೆಲುವುಗಳನ್ನು ಸಮನಾಗಿ ಸ್ವೀಕರಿಸುವ ಮನೋಭಾವವನ್ನು ಬೆಳೆಸುತ್ತವೆ. ಶ್ರೇಷ್ಠ ಕ್ರೀಡಾ ಸಾಧಕರು ಸಣ್ಣ ಸಣ್ಣ ಗೆಲುವುಗಳ ಮೂಲಕವೇ ಮಹತ್ತರವಾದ ಸಾಧನೆಗಳನ್ನು ಮಾಡಿದ್ದಾರೆ. ಬದುಕಿನಲ್ಲಿ ಶ್ರದ್ಧೆ, ಪರಿಶ್ರಮದಿಂದ ಪ್ರಯತ್ನಪಟ್ಟರೆ ಫಲ ದೊರೆಯುತ್ತದೆ. ಜೆಎಸ್‌ಎಸ್ ಸಂಸ್ಥೆಗಳಲ್ಲಿ ಏರ್ಪಡಿಸುವ ಕಾರ್ಯಕ್ರಮಗಳಲ್ಲಿರುವ ಶಿಸ್ತು ಮತ್ತು ವ್ಯವಸ್ಥಿತ ಸಂಘಟನೆಗಳು ರಾಷ್ಟ್ರಕ್ಕೆ ಮಾದರಿಯಾಗಿವೆ. ಶಿಕ್ಷಣ ವ್ಯಾಪಾರೀಕರಣ ವಾಗುತ್ತಿರುವ ಇಂದಿನ ದಿನಗಳಲ್ಲಿ ಶ್ರೀಮಠವು ಸಾಮಾಜಿಕವಾಗಿ ಹಾಗೂ ಆರ್ಥಿಕವಾಗಿ ಹಿಂದುಳಿದ ವಿದ್ಯಾರ್ಥಿಗಳ ಶ್ರೇಯೋಭಿವೃದ್ಧಿಗೆ ಶ್ರಮಿಸುತ್ತಿರುವುದು ಶ್ರೇಷ್ಠ ಸಾಧನೆಯೇ ಸರಿ ಎಂದು ತಿಳಿಸಿದರು.

ಪರಮಪೂಜ್ಯ ಜಗದ್ಗುರುಗಳವರು ಆಶೀರ್ವಚನ ನೀಡುತ್ತಾ, ಶೈಕ್ಷಣಿಕ ಹಾಗೂ ಸಾಂಸ್ಕೃತಿಕವಾಗಿ ಆಧುನಿಕ ವಿದ್ಯಮಾನಕ್ಕೆ ತಕ್ಕಂತೆ ಪರಮಪೂಜ್ಯ ಜಗದ್ಗುರು ಡಾ. ಶ್ರೀ ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳವರು ಹಲವಾರು ಸಂಸ್ಥೆಗಳನ್ನು ನಿರ್ಮಿಸಿದರು. ಶಿಕ್ಷಣವನ್ನು ನೀಡಲು ಅವರು ಮಾಡಿದ ಸಂಕಲ್ಪ ಜೆಎಸ್‌ಎಸ್ ಮಹಾವಿದ್ಯಾಪೀಠದ ಕಾರ್ಯವ್ಯಾಪ್ತಿ ವಿಸ್ತಾರವಾಗಲು ಕಾರಣವಾಗಿದೆ. ವಿದ್ಯಾರ್ಥಿಗಳಿಗಾಗಿ ಅವರ ಸಂಸ್ಮರಣಾರ್ಥ ಕ್ರೀಡಾಕೂಟವನ್ನು ಆಯೋಜಿಸಿದೆ. ಗ್ರಾಮೀಣ ಆಟಗಳನ್ನು ಪ್ರೋತ್ಸಾಹಿಸುವ ದೃಷ್ಟಿಯಿಂದ ಜಾತ್ರಾ ಮಹೋತ್ಸವದ ಸಂದರ್ಭದಲ್ಲಿ ದೇಸಿ ಆಟಗಳನ್ನು ಸಹ ಏರ್ಪಡಿಸಲಾಗುತ್ತಿದೆ. ದ್ವೇಷ, ಅಸೂಯೆಗಳಿಲ್ಲದ ಕ್ಷೇತ್ರವೆಂದರೆ ಕ್ರೀಡೆ. ಇಲ್ಲಿ ಗೆದ್ದವರನ್ನು ಪ್ರೋತ್ಸಾಹಿಸುತ್ತಾ, ಸೋತವರನ್ನು ಸಂತೈಸುತ್ತಾ ಮುನ್ನಡೆಸಲಾಗುತ್ತದೆ. ಕ್ರೀಡೆಯು ಮನುಜನ ಅವಿಭಾಜ್ಯ ಸಂಗಾತಿಯಾಗಿದ್ದು, ಶ್ರದ್ಧೆಯಿಂದ ತೊಡಗಿಕೊಂಡರೆ ಸಾಧನೆ ಸಾಧ್ಯ ಎಂದು ತಿಳಿಸಿದರು.

ಕ್ರೀಡಾಪಟುಗಳ ಪರವಾಗಿ ಸುತ್ತೂರು ಜೆಎಸ್‌ಎಸ್ ಪ್ರೌಢಶಾಲೆಯ ರಾಜ್ಯಮಟ್ಟದ ಕ್ರೀಡಾಪಟು ಕು. ಯೋಗಿಣಿ ಹಾಗೂ ಕ್ರೀಡಾಧಿಕಾರಿಗಳ ಪರವಾಗಿ ದೈಹಿಕ ಶಿಕ್ಷಣ ಶಿಕ್ಷಕರಾದ ಶ್ರೀ ಕೆ.ಎಸ್. ಮಲ್ಲರಾಜೇ ಅರಸ್ ಪ್ರತಿಜ್ಞಾವಿಧಿ ಸ್ವೀಕರಿಸಿದರು.

ಮೈಸೂರು ದಕ್ಷಿಣ ವಲಯದ ಆರಕ್ಷಕ ಉಪ ಮಹಾನಿರೀಕ್ಷಕರಾದ ಡಾ.ಎಂ.ಬಿ. ಬೋರಲಿಂಗಯ್ಯರವರು ಅಧ್ಯಕ್ಷತೆಯನ್ನು ವಹಿಸಿದ್ದರು. ವಾಟಾಳು ಮಠದ ಶ್ರೀ ಸಿದ್ಧಲಿಂಗ ಶಿವಾಚಾರ್ಯ ಸ್ವಾಮಿಗಳು, ಜಿಲ್ಲಾ ಪೊಲೀಸ್ ಅಧೀಕ್ಷಕರಾದ ಶ್ರೀ ಎನ್. ವಿಷ್ಣುವರ್ಧನ್‌ರವರು, ಅಂತಾರಾಷ್ಟ್ರೀಯ ವಾಲಿಬಾಲ್ ಕ್ರೀಡಾಪಟುಗಳಾದ ಶ್ರೀ ವಿ.ಆರ್. ಸನೋಜ್‌ರವರು ಉಪಸ್ಥಿತರಿದ್ದರು. ವಿವಿಧ ಜೆಎಸ್‌ಎಸ್ ಸಂಸ್ಥೆಗಳಿಂದ ಆಗಮಿಸಿದ್ದ ಕ್ರೀಡಾ ತಂಡಗಳು ಅತಿಥಿಗಳಿಗೆ ಗೌರವ ವಂದನೆ ಸಲ್ಲಿಸಿ, ಪಥಸಂಚಲನ ನಡೆಸಿದರು. ಮೂರು ದಿನಗಳ ಕ್ರೀಡಾಕೂಟದಲ್ಲಿ 130 ಸಂಸ್ಥೆಗಳ 3588 ವಿದ್ಯಾರ್ಥಿಗಳು ವಿವಿಧ ಆಟೋಟ ಸ್ಪರ್ಧೆಗಳಲ್ಲಿ ಭಾಗವಹಿಸಿದ್ದರು. ಇದೇ ಸಂದರ್ಭದಲ್ಲಿ ಸುತ್ತೂರಿನ ಜೆಎಸ್‌ಎಸ್ ವಸತಿ ಶಾಲಾ ಮಕ್ಕಳು ಮಲ್ಲಕಂಬ ಪ್ರದರ್ಶನ ನೀಡಿದರು. ಸುತ್ತೂರು ಶಾಲಾ ವಿದ್ಯಾರ್ಥಿಗಳು ಪ್ರಾರ್ಥಿಸಿದರು. ಶ್ರೀ ಎಂ.ಎನ್. ಶಿವಕುಮಾರ್ ಸ್ವಾಗತಿಸಿದರು. ಶ್ರೀ ಎಲ್.ಎಂ. ನಂದೀಶ್ ವಂದಿಸಿದರು. ಶ್ರೀ ಡಿ.ಎಂ. ಸಿದ್ಧಲಿಂಗಸ್ವಾಮಿ ಕಾರ್ಯಕ್ರಮ ನಿರೂಪಿಸಿದರು.

**ಪರಮಪೂಜ್ಯ ಜಗದ್ಗುರು ಡಾ. ಶ್ರೀ ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳವರ ಪುಣ್ಯಾರಾಧನೆ**

ಸುತ್ತೂರು ಶ್ರೀಕ್ಷೇತ್ರದಲ್ಲಿ ನವೆಂಬರ್ 25ರಂದು ಪರಮಪೂಜ್ಯ ಜಗದ್ಗುರು ಡಾ. ಶ್ರೀ ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳವರ 39ನೆಯ ಪುಣ್ಯಾರಾಧನೆಯ ಅಂಗವಾಗಿ ಪ್ರಾತಃಕಾಲ ಆದಿ ಜಗದ್ಗುರು ಶ್ರೀ ಶಿವರಾತ್ರೀಶ್ವರ ಶಿವಯೋಗಿಗಳವರ ಕರ್ತೃಗದ್ದುಗೆ ಹಾಗೂ ರಾಜೇಂದ್ರ ಶ್ರೀಗಳವರ ಗದ್ದುಗೆಗೆ ರುದ್ರಾಭಿಷೇಕ, ಅಷ್ಟೋತ್ತರ ಮೊದಲಾದ ವಿಶೇಷ ಪೂಜೆಗಳು ಪರಮಪೂಜ್ಯ ಜಗದ್ಗುರು ಶ್ರೀ ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮಿಗಳವರ ದಿವ್ಯ ಸಾನ್ನಿಧ್ಯದಲ್ಲಿ ನೆರವೇರಿದವು.

2026 ಜನವರಿ 15ರಿಂದ 20ರವರೆಗೆ ಶ್ರೀಕ್ಷೇತ್ರದಲ್ಲಿ ಜರುಗುವ ಆದಿ ಜಗದ್ಗುರು ಶ್ರೀ ಶಿವರಾತ್ರೀಶ್ವರ ಶಿವಯೋಗಿಗಳವರ ಜಾತ್ರಾ ಮಹೋತ್ಸವದ ಮಂಟಪಗಳ ಭೂಮಿ ಪೂಜೆಯನ್ನು ನೆರವೇರಿಸಲಾಯಿತು. ಇದೇ ಸಂದರ್ಭದಲ್ಲಿ ಜಾತ್ರಾಮಹೋತ್ಸವದ ಪೂರ್ವಭಾವಿ ಸಮಾಲೋಚನಾ ಸಭೆ ನಡೆಯಿತು.

ವಾಟಾಳು, ಹೊಸಮಠ, ಹುಲಿಯೂರುದುರ್ಗ, ಕುದೇರು, ನೀಲಕಂಠಸ್ವಾಮಿಮಠ, ಪಡುಗೂರು, ನಂಜನಗೂಡು, ಹುಲ್ಲಹಳ್ಳಿ, ಆಲಮಟ್ಟಿ, ಮಾದಾಪುರ, ಶಿರಮಹಳ್ಳಿ, ಚಿಲಕವಾಡಿ, ಬೆಟ್ಟದಪುರ, ದಂಡಿಕೆರೆ, ಸಾಲೂರು, ಹಲಗೂರು, ಹರವೆ, ಚಿಕ್ಕತುಪ್ಪೂರು, ಚುಂಚನಹಳ್ಳಿ, ಕುಂದೂರು, ಮುಡಿಗುಂಡ, ದೊಡ್ಡಬಳ್ಳಾಪುರ, ಅರಕೆರೆ, ಮಾದಳ್ಳಿ,

ರಾಗಿಬೊಮ್ಮನಹಳ್ಳಿ, ಕಸುವಿನಹಳ್ಳಿ, ಬಸವೇಶ್ವರ ಮಠದ ಶ್ರೀಗಳು, ಹರಗುರು ಚರಮೂರ್ತಿಗಳು, ಸಂಸ್ಥೆಯ ಅಧಿಕಾರಿಗಳು ಹಾಗೂ ಭಕ್ತಾದಿಗಳು ಪಾಲ್ಗೊಂಡಿದ್ದರು.

ಸುತ್ತೂರು ಶಾಲೆಯ ಮಕ್ಕಳು ಪ್ರಾರ್ಥನೆ ಸಲ್ಲಿಸಿದರು. ಪ್ರೊ. ಸುಬ್ಬಪ್ಪನವರು ಸ್ವಾಗತಿಸಿದರು. ಶ್ರೀ ಸಿ.ವಿ. ಬಸವರಾಜು ವಂದಿಸಿದರು. ಶ್ರೀ ಹೆಚ್.ಎಲ್. ಪ್ರಕಾಶ್ ಕಾರ್ಯಕ್ರಮ ನಿರೂಪಿಸಿದರು.

**ಜೆಎಸ್‌ಎಸ್ ಆಯುರ್ವೇದ ವೈದ್ಯಕೀಯ ಕಾಲೇಜು ಮೇಲ್ಪಂಕ್ತಿಯಲ್ಲಿದೆ**

ಭಾರತದ ಉತ್ಕೃಷ್ಟ ಗುಣಮಟ್ಟದ ಕೆಲವೇ ಕೆಲವು ಆಯುರ್ವೇದ ಶಿಕ್ಷಣ ಸಂಸ್ಥೆಗಳಲ್ಲಿ ಜೆಎಸ್‌ಎಸ್ ಆಯುರ್ವೇದ ವೈದ್ಯಕೀಯ ಕಾಲೇಜು ಮೇಲ್ಪಂಕ್ತಿಯಲ್ಲಿದೆ ಎಂದು ಬೆಂಗಳೂರು ರಾಜೀವ್ ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯದ ಕುಲಪತಿಗಳಾದ ಡಾ. ಬಿ.ಸಿ. ಭಗವಾನ್‌ರವರು ನವೆಂಬರ್ 27ರಂದು ಮೈಸೂರು ಶ್ರೀ ಸುತ್ತೂರು ಮಠದಲ್ಲಿ ಪರಮಪೂಜ್ಯ ಜಗದ್ಗುರುಗಳವರ ದಿವ್ಯ ಸಾನ್ನಿಧ್ಯದಲ್ಲಿ ನಡೆದ ಜೆಎಸ್‌ಎಸ್ ಆಯುರ್ವೇದ ವೈದ್ಯಕೀಯ ಮಹಾವಿದ್ಯಾಲಯದ ಪದವೀಧರರ ದಿನಾಚರಣೆಯಲ್ಲಿ ಮಾತನಾಡುತ್ತಾ ತಿಳಿಸಿದರು. ಭಾರತದ ಪುರಾತನ ವೈದ್ಯ ಪದ್ಧತಿಗಳು, ಶಾಸನಗಳು, ತಾಳೆಗರಿಗಳು, ಅಮೂಲ್ಯ ಗ್ರಂಥಗಳ ಡಿಜಿಟಲ್ ದಾಖಲೀಕರಣಗಳ ಅಗತ್ಯವಿದೆ. ಇದರಿಂದ ಮುಂದಿನ ಪೀಳಿಗೆಗೆ ಸಹಾಯವಾಗುತ್ತದೆ. ಇಂದಿನ ಯುವಕರು ಮಾದಕ ವಸ್ತುಗಳ ವ್ಯಸನಿಗಳಾಗುತ್ತಿರುವುದು ತುಂಬ ಕಳವಳಕಾರಿಯಾದ ಸಂಗತಿ. ರಾಜೀವ್ ಗಾಂಧಿ ಆರೋಗ್ಯ ವಿಶ್ವವಿದ್ಯಾಲಯವು ಅಲೋಪತಿ, ಆಯುರ್ವೇದ, ಯೋಗ ಪದ್ಧತಿಗಳ ಸಮ್ಮಿಳಿತವಾದ ಚಿಕಿತ್ಸಾ ಕಾರ್ಯಕ್ರಮವನ್ನು ಕರ್ನಾಟಕ ರಾಜ್ಯದ ಎಲ್ಲಾ ವೈದ್ಯಕೀಯ ಶಿಕ್ಷಣ ಸಂಸ್ಥೆಗಳಲ್ಲಿ ಅಳವಡಿಸುತ್ತಿದೆ ಎಂದು ತಿಳಿಸಿದರು. ಆಯುರ್ವೇದ ವೈದ್ಯಕೀಯ ಪದ್ಧತಿಯ ಇಂದಿನ ಹಾಗೂ ಭವಿಷ್ಯದ ವೈದ್ಯಕೀಯ ಸವಾಲುಗಳಿಗೆ ಉತ್ತರವನ್ನು ನೀಡುವಂತಹ ವೈದ್ಯ ಪದ್ಧತಿಯಾಗಿದೆ ಎಂದು ತಿಳಿಸಿದರು

98 ಸ್ನಾತಕ, 43 ಸ್ನಾತಕೋತ್ತರ ವಿದ್ಯಾರ್ಥಿಗಳಿಗೆ ಪದವಿ ಪ್ರದಾನ ಮಾಡಲಾಯಿತು. ಕಾರ್ಯನಿರ್ವಾಹಕ ಕಾರ್ಯದರ್ಶಿಗಳಾದ ಡಾ. ಸಿ.ಜಿ. ಬೆಟಸೂರಮಠ ಅಧ್ಯಕ್ಷತೆ ವಹಿಸಿದ್ದರು. ನಿರ್ದೇಶಕರಾದ ಶ್ರೀ ಆರ್. ಮಹೇಶ್ ಉಪಸ್ಥಿತರಿದ್ದರು. ಕು. ಸಂಪದ ಹಾಗೂ ತಂಡದವರು ಪ್ರಾರ್ಥಿಸಿದರು. ಡಾ. ಸರ್ಬೇಶ್ವರ್‌ಕರ್ ಸ್ವಾಗತಿಸಿದರು. ಡಾ. ಶಿವಪ್ರಸಾದ್ ಹುಡೇದ ಪ್ರತಿಜ್ಞಾ ವಿಧಿ ಬೋಧಿಸಿದರು. ಡಾ. ಎಂ.ಡಿ. ಬೀನಾ, ಡಾ. ಸಂಧ್ಯಾರಾಣಿ, ಡಾ. ದೀಪಾ ಸಿ. ಪಾಟೀಲ್‌ರವರು ಸ್ನಾತಕ ಮತ್ತು ಸ್ನಾತಕೋತ್ತರ ವೈದ್ಯರಿಗೆ ಪದವಿ ಪ್ರದಾನ ಕಾರ್ಯಕ್ರಮವನ್ನು ನಡೆಸಿಕೊಟ್ಟರು. ಡಾ. ಶ್ರೀಹರಿ, ವಂದಿಸಿದರು. ಡಾ. ಪಿ.ಪಿ. ಅಯ್ಯಣ್ಣ ಕಾರ್ಯಕ್ರಮ ನಿರೂಪಿಸಿದರು.

□

## ಪ್ರಸಾದ



### ಕೃತಿ–ಸ್ವೀಕೃತಿ

**ಪಾಶ್ಚಿಮಾತ್ಯ ತತ್ತ್ವದರ್ಶನ ಹಾಗೂ ಲಿಂಗಾಯತ ತತ್ತ್ವದರ್ಶನ**
ಪ್ರೊ. ಸಿದ್ಧಣ್ಣ ಲಂಗೋಟಿ (ಚಾಂದಕವತೆ)
ಪ್ರ: ಬಸವ ಸಮಿತಿ
ಶ್ರೀ ಬಸವೇಶ್ವರ ವೃತ್ತ, ಬೆಂಗಳೂರು
ಪು: 104, ಬೆಲೆ: 75/–

**ಬೆಂಕಿ ಹಚ್ಚುವುದು ಸುಲಭ ಆರಿಸುವುದು ಕಷ್ಟ**
ಶ್ರೀಕಂಠ ಚೌಕೀಮಠ
ಪ್ರ: ಹಾನಗಲ್ ಶ್ರೀ ಕುಮಾರ ಶಿವಯೋಗಿ ಸೇವಾ ಸಮಿತಿ, ನವದೆಹಲಿ ಮತ್ತು ಕರ್ನಾಟಕ
ಪು: 115, ಬೆಲೆ: 100/–

**ನಕುಲ–ಸಹದೇವ (ಮಹಾಭಾರತದಲ್ಲಿ ಪ್ರಜ್ವಲಿಸಿದ ಅನರ್ಘ್ಯ ರತ್ನಗಳು)**
ಪ್ರದೀಪ್ ಬೇಲೂರು
ಪ್ರ: ಪ್ರಣವ ಪ್ರಕಾಶನ
ಗುರುದತ್ತ ಲೇಔಟ್
ಹೊಸಕೆರೆ ಹಳ್ಳಿ, ಬೆಂಗಳೂರು
ಪು: 110, ಬೆಲೆ: 120/–

**ಜಗತ್ಸ್ಫೂರ್ತಿ**
**(ಪ್ರೊ. ಜಗನ್ನಾಥ ಕೆ. ಡಾಂಗೆಯವರ ವ್ಯಕ್ತಿ ಚಿತ್ರಣ)**
ತ್ರಿಮೂರ್ತಿ
ಪ್ರ: ಕಾಲೇಜ್ ಬುಕ್ ಹೌಸ್
ನಾಗರಬಾವಿ, ಬೆಂಗಳೂರು
ಪು: 100, ಬೆಲೆ: 80/–

**ಭಾರತದ ಧರ್ಮ–ದರ್ಶನಗಳು**
ಪ್ರೊ. ಸಿದ್ಧಣ್ಣ ಲಂಗೋಟಿ (ಚಾಂದಕವತೆ)
ಪ್ರ: ಬಸವ ಸಮಿತಿ
ಶ್ರೀ ಬಸವೇಶ್ವರ ವೃತ್ತ, ಬೆಂಗಳೂರು
ಪು: 90, ಬೆಲೆ: 75/–

**ಚನ್ನಬಸವಣ್ಣನವರ ಚರಿತ್ರೆ ಮತ್ತು ಸಿದ್ಧಾಂತ**
ಪ್ರಕಾಶ ಗಿರಿಮಲ್ಲನವರ
ಪ್ರ: ಲಿಂಗಾಯತ ಕ್ರಾಂತಿ ಪ್ರಕಾಶನ
ಶ್ರೀ ಶಿವಾನಂದ ಬಸವರಾಜ ಮೆಟ್ಯಾಲ
ಪು: 216, ಬೆಲೆ: 250/–

**ಸಂಗೀತ ವಿಶಾರದೆ (ಡಾ. ನಂದಾಪಾಟೀಲ–60 ಅಭಿನಂದನ ಗ್ರಂಥ)**
ಸಂ. ಡಾ. ಹರೀಶ್ ಹೆಗಡೆ
ಪ್ರ: ಡಾ. ನಂದಾಪಾಟೀಲ್ ಸಂಗೀತ ಅಕಾಡೆಮಿ, ಸಪ್ತಾಪುರ, ಧಾರವಾಡ
ಪು: 344, ಬೆಲೆ: 400/–

**ಕಾಶ್ಮೀರಾದಿಂದ ಉಪನಿಷತ್ತಿನವರೆಗೆ**
ಡಾ. ಮರುಳಸಿದ್ಧ ಪಂಡಿತಾರಾಧ್ಯ
ಪ್ರ: ಶ್ರೀ ಚನ್ನವೀರ ಚೇತನ ಮರುಳಸಿದ್ಧ ಪ್ರಕಾಶನ, ವೀರಾಪುರ, ಹಿರೇಮಠ
ಪು: 107, ಬೆಲೆ: 200/–

**ಶ್ರೀರಾಮಚಂದ್ರ ಆದರ್ಶಪ್ರಭು (ರಾಮಾಯಣದಿಂದ ಕೆಲವು ಪಾಠಗಳು)**
ಆ್ಯನಿಬೆಸೆಂಟ್
ಕನ್ನಡಕ್ಕೆ : ಡಿ.ಎ. ಶಂಕರ್
ಪ್ರ: ಸಂವಹನ ಪ್ರಕಾಶನ
ಶಿವರಾಂಪೇಟೆ, ಮೈಸೂರು
ಪು: 80, ಬೆಲೆ: 80/–

**ಭಾವಶಂಕರ**
**(ಶ್ರೀ ಶಂಕರ ಭಗವತ್ಪಾದರ ಜೀವನ ಚಿತ್ರ)**
ಎಚ್.ಎಂ. ನಾಗರಾಜ ರಾವ್
ಪ್ರ: ಶಾರದಾ ಪ್ರಕಾಶನ
ಮೈಸೂರು
ಪು: 180, ಬೆಲೆ: 250/–

**ಶ್ರೀ ಪದ್ಮನಾಭಸ್ವಾಮಿ ದೇವಸ್ಥಾನ**
ಅಶ್ವಥಿ ತಿರುನಲ್ ಗೌರಿ ಲಕ್ಷ್ಮಿಬಾಯಿ
ಪ್ರ: ಪಿ.ವಿ. ಶಂಕರ್ ಕುಟ್ಟಿ
ಭಾರತೀಯ ವಿದ್ಯಾಭವನ
ಮುಂಬಯಿ
ಬೆಲೆ: 1000/–

## ಲೇಖಕರ ವಿಳಾಸ

**ಡಾ. ಬಿ. ನಂಜುಂಡಸ್ವಾಮಿ**
ಪಂಡಿತ ತಾರಾನಾಥ ಆಯುರ್ವೇದ
ಚಿಕಿತ್ಸಾಲಯ ಬಿ.ಹೆಚ್. ರಸ್ತೆ
ತುಮಕೂರು 572 102
ಮೊ : 98809 96196

**ಡಾ. ಆರ್.ಬಿ. ಚಿಲಮಿ**
ಹಿರಿಯ ಸಾಹಿತಿಗಳು
**"ಹೊಂಬೆಳಕು"** ಮ.ನಂ.03
ಓಂ ಪಿ.ಯು. ಕಾಲೇಜ್ ಎದುರಿಗೆ
ಜಲದರ್ಶಿನಿನಗರ
ಧಾರವಾಡ 580 003
ಮೊ : 98802 06032

**ಶ್ರೀ ಧರ್ಮಣ್ಣ ಮ. ಕುಂಬಾರ**
ಶ್ರೀ ವೀರಭದ್ರೇಶ್ವರ ನಿಲಯ
ಡೇರಿ ರಸ್ತೆ, ಮದಿಹಾಳ
ಧಾರವಾಡ 580 006
ಮೊ : 96322 68605

**ಶ್ರೀ ನಗರ್ಲೆ ಶಿವಕುಮಾರ**
ಬಿನ್ ಲೇ. ರಾಜಶೇಖರ
ನಗರ್ಲೆ ಗ್ರಾಮ & ಅಂಚೆ
ನಂಜನಗೂಡು ತಾ.
ಮೈಸೂರು ಜಿಲ್ಲೆ
ಮೊ: 98456 09652

ಹಿಂಬದಿ ಪುಟದ ಚಿತ್ರ

ಸುತ್ತೂರು ಶ್ರೀಕ್ಷೇತ್ರದಲ್ಲಿ ಪರಮಪೂಜ್ಯ ಜಗದ್ಗುರು ಡಾ. ಶ್ರೀ ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳವರ ಸಂಸ್ಮರಣ ಮೂರು ದಿನಗಳ ಜೆಎಸ್‌ಎಸ್ ಅಂತರ-ಸಂಸ್ಥೆಗಳ ಕ್ರೀಡಾಕೂಟವನ್ನು ಪರಮಪೂಜ್ಯ ಜಗದ್ಗುರುಗಳವರ ದಿವ್ಯ ಸಾನ್ನಿಧ್ಯದಲ್ಲಿ ಡಾ. ಎಂ.ಎ. ಸಲೀಂರವರು ಉದ್ಘಾಟಿಸಿದರು. ಡಾ. ಎಂ.ಬಿ. ಬೋರಲಿಂಗಯ್ಯ, ಶ್ರೀ ಎನ್. ವಿಷ್ಣುವರ್ಧನ, ಶ್ರೀ ವಿ.ಆರ್. ಸನೋಜ್ ಮೊದಲಾದವರಿದ್ದಾರೆ. (25 ನವೆಂಬರ್ 2025)




ಮೈಸೂರಿನಲ್ಲಿ ವಿಶ್ವ ಆಯುರ್ವೇದ ಪರಿಷತ್ತಿನಿಂದ ಆಯೋಜಿಸಿದ್ದ 'ಸಂಯೋಜನಂ–2025' ರಾಷ್ಟ್ರೀಯ ವಿಚಾರಸಂಕಿರಣವನ್ನು ಪರಮಪೂಜ್ಯ ಜಗದ್ಗುರುಗಳವರ ದಿವ್ಯ ಸಾನ್ನಿಧ್ಯದಲ್ಲಿ ಉದ್ಘಾಟಿಸಲಾಯಿತು. ಡಾ. ಬಿ.ಆರ್. ರಾಮಕೃಷ್ಣ, ಡಾ. ಸಿ.ಎನ್. ಮಂಜುನಾಥ್, ಗೌ.ನ್ಯಾ. ಶ್ರೀ ಬಿ.ಎ. ಪಾಟೀಲ್, ಡಾ. ಎನ್.ಕೆ. ಮಂಜುನಾಥ್ ಶರ್ಮಾ, ಪ್ರೊ. ಎಸ್.ಕೆ. ನವೀನ್‌ಕುಮಾರ್, ಡಾ. ಗಜಾನನ ಹೆಗ್ಡೆ, ಡಾ. ಸರ್ಬೇಶ್ವರ್ ಕರ್ ಮೊದಲಾದವರುಗಳಿದ್ದಾರೆ (7 ನವೆಂಬರ್ 2025)




ಮೈಸೂರು ಜಯಲಕ್ಷ್ಮೀಪುರಂನಲ್ಲಿ ಶ್ರೀ ಸತ್ಯ ಸಾಯಿಬಾಬಾರವರ ಜನ್ಮ ಶತಮಾನೋತ್ಸವ ಹಾಗೂ ಸಾಯಿ ಸುಧಾ ಮತ್ತು ಡಾ. ಸಿ.ಎನ್. ಮೃತ್ಯುಂಜಯಪ್ಪ ನೂತನ ಹಾಸ್ಟೆಲ್ ಕಟ್ಟಡದ ಉದ್ಘಾಟನೆಯು ಪರಮಪೂಜ್ಯ ಜಗದ್ಗುರುಗಳವರ ದಿವ್ಯ ಸಾನ್ನಿಧ್ಯದಲ್ಲಿ ನೆರವೇರಿತು. ಶ್ರೀ ಶೈಲೇಂದ್ರ ಮೃತ್ಯುಂಜಯಪ್ಪ, ಶ್ರೀಮತಿ ಸುಧಾ ಮೃತ್ಯುಂಜಯಪ್ಪ, ಡಾ. ಎಂ.ಎನ್. ಸುಂದರೇಶನ್, ಡಾ. ಪಿ. ಶಿವರಾಜು ಮತ್ತು ಶ್ರೀ ತ್ರಿಮೂರ್ತಿಯವರುಗಳಿದ್ದಾರೆ (24 ನವೆಂಬರ್ 2025)




ಕುಶಾಲನಗರದ ನಳಂದ ಗುರುಕುಲದ 'ಲರ್ನಿಂಗ್ ಸ್ಪೇಸ್' ಅನ್ನು ಪರಮಪೂಜ್ಯ ಜಗದ್ಗುರುಗಳವರ ದಿವ್ಯ ಸಾನ್ನಿಧ್ಯದಲ್ಲಿ ಉದ್ಘಾಟಿಸಲಾಯಿತು. ಶ್ರೀ ಎಫ್.ಎ.ಎಸ್. ಸುರೇಂದರ್, ಡಾ. ಅಶೋಕ್ ಎಸ್. ಆಲೂರ್, ಶ್ರೀ ಎಸ್.ಎಲ್.ಎನ್. ಸಾತಪ್ಪನ್, ಶ್ರೀ ದೇವಿ ಪೂಣಚ್ಚ, ಶ್ರೀ ನಾಮ್ಗ್ಯಾಲ್ ನ್ಗೊಡುಪ್ ಹಾಗೂ ಸಂಸ್ಥೆಯ ಪದಾಧಿಕಾರಿಗಳಿದ್ದಾರೆ (13 ನವೆಂಬರ್ 2025)



ಸುತ್ತೂರು ಶ್ರೀಕ್ಷೇತ್ರದಲ್ಲಿ 2026ರ ಆದಿಜಗದ್ಗುರು ಶ್ರೀ ಶಿವರಾತ್ರೀಶ್ವರ ಶಿವಯೋಗಿಗಳವರ ಜಾತ್ರಾ ಮಹೋತ್ಸವದ ಮಂಟಪಗಳ ಭೂಮಿ ಪೂಜೆಯನ್ನು ಪರಮಪೂಜ್ಯ ಜಗದ್ಗುರುಗಳವರ ದಿವ್ಯ ಸಾನ್ನಿಧ್ಯದಲ್ಲಿ ನೆರವೇರಿಸಲಾಯಿತು. ವಿವಿಧ ಮಠಾಧೀಶರುಗಳಿದ್ದಾರೆ (25 ನವೆಂಬರ್ 2025)



ಮೈಸೂರು ಶ್ರೀ ಸುತ್ತೂರು ಮಠದಲ್ಲಿ ಪರಮಪೂಜ್ಯ ಜಗದ್ಗುರುಗಳವರ ದಿವ್ಯ ಸಾನ್ನಿಧ್ಯದಲ್ಲಿ ನಡೆದ ಜೆಎಸ್‌ಎಸ್ ಆಯುರ್ವೇದ ವೈದ್ಯಕೀಯ ಮಹಾವಿದ್ಯಾಲಯದ ಪದವೀಧರರ ದಿನಾಚರಣೆಯಲ್ಲಿ ಬೆಂಗಳೂರು ರಾಜೀವ್ ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯದ ಕುಲಪತಿಗಳಾದ ಡಾ. ಬಿ.ಸಿ. ಭಗವಾನ್‌ರವರು ಬಹುಮಾನ ವಿಜೇತ ಪದವೀಧರರಿಗೆ ಚಿನ್ನದ ಪದಕಗಳನ್ನು ವಿತರಿಸಿದರು. ಡಾ. ಶಿವಪ್ರಕಾಶ್ ಹುಡೇದ, ಶ್ರೀ ಆರ್. ಮಹೇಶ್, ಡಾ. ಸಿ.ಜಿ. ಬೆಟಸೂರಮಠ, ಡಾ. ಸರ್ಬೇಶ್ವರ್ ಕರ್ ಹಾಗೂ ಡಾ. ಎಸ್. ಶ್ರೀಹರಿಯವರುಗಳಿದ್ದಾರೆ (27 ನವೆಂಬರ್ 2025)



ಕೊಳ್ಳೇಗಾಲದ ಮಾನಸ ಶಿಕ್ಷಣ ಸಂಸ್ಥೆಯ 'ಮಾನಸೋತ್ಸವ–2025'ರ ಅಂಗವಾಗಿ ನೂತನ ಗ್ರಂಥಾಲಯವನ್ನು ಪರಮಪೂಜ್ಯ ಜಗದ್ಗುರುಗಳವರ ದಿವ್ಯ ಸಾನ್ನಿಧ್ಯದಲ್ಲಿ ಶಾಸಕರಾದ ಶ್ರೀ ಎ.ಆರ್. ಕೃಷ್ಣಮೂರ್ತಿಯವರು ಉದ್ಘಾಟಿಸಿದರು. ಶ್ರೀ ಎಸ್. ನಾಗರಾಜು, ಸಾಲೂರು ಮಠದ ಶ್ರೀಗಳು, ಪ್ರೊ. ಎಸ್. ಶಿವರಾಜಪ್ಪ ಹಾಗೂ ಡಾ. ಎಸ್. ದತ್ತೇಶ್‌ಕುಮಾರ್ ಮೊದಲಾದವರಿದ್ದಾರೆ (29 ನವೆಂಬರ್ 2025)



ಬೆಂಗಳೂರಿನ ಕೆಂಗೇರಿಯಲ್ಲಿ ಬಿಜಿಎಸ್ ಸಮೂಹ ಶಿಕ್ಷಣ ಸಂಸ್ಥೆಗಳ 17ನೇ ಸಂಸ್ಥಾಪಕರ ದಿನಾಚರಣೆ ಬಿಜಿಎಸ್ ಉತ್ಸವವನ್ನು ಸುತ್ತೂರು ಮತ್ತು ಆದಿಚುಂಚನಗಿರಿ ಜಗದ್ಗುರುಗಳವರ ದಿವ್ಯ ಸಾನ್ನಿಧ್ಯದಲ್ಲಿ ಕೇಂದ್ರ ಸಚಿವರಾದ ಶ್ರೀ ಹೆಚ್.ಡಿ. ಕುಮಾರಸ್ವಾಮಿಯವರು ಉದ್ಘಾಟಿಸಿದರು. ಶ್ರೀ ಪ್ರಕಾಶನಾಥ ಸ್ವಾಮಿಗಳು ಹಾಗೂ ಶ್ರೀ ಹೆಚ್.ಆರ್. ರಂಗನಾಥ್‌ರವರುಗಳಿದ್ದಾರೆ. (21 ನವೆಂಬರ್ 2025)




ಮೈಸೂರು ಶ್ರೀ ಸುತ್ತೂರು ಮಠದಲ್ಲಿ ನವೆಂಬರ್ 5ರಂದು ನಡೆದ 285ನೇ ಬೆಳದಿಂಗಳ ಸಂಗೀತ ಕಾರ್ಯಕ್ರಮದಲ್ಲಿ ವಿದುಷಿಯರಾದ ಎಸ್. ಐಶ್ವರ್ಯ ಮತ್ತು ಎಸ್. ಸೌಂದರ್ಯರವರು ದ್ವಂದ್ವಗಾಯನ ಪ್ರಸ್ತುತಿಪಡಿಸಿದರು. ಪಕ್ಕವಾದ್ಯದಲ್ಲಿ ವಿದ್ವಾನ್ ಹೆಚ್. ಹರಿಹರನ್, ವಿದ್ವಾನ್ ಶಮಿತ್ ಎಸ್. ಗೌಡ ಹಾಗೂ ವಿದುಷಿ ಅದಿತಿ ಕೃಷ್ಣಪ್ರಕಾಶ್‌ರವರುಗಳಿದ್ದಾರೆ.



ಬೆಂಗಳೂರಿನಲ್ಲಿ ಆಯೋಜಿಸಿದ್ದ ಬಸವೋತ್ಸವ ಹಾಗೂ ಅಥಣಿ ಶ್ರೀ ಮುರುಘೇಂದ್ರ ಶಿವಯೋಗಿಗಳವರ ಜಯಂತ್ಯೋತ್ಸವದ ಸಮಾರೋಪವು ಪರಮಪೂಜ್ಯ ಜಗದ್ಗುರುಗಳವರ ದಿವ್ಯ ಸಾನ್ನಿಧ್ಯದಲ್ಲಿ ನೆರವೇರಿತು. ಡಾ. ಶ್ರೀ ಬಸವಮೂರ್ತಿ ಮಾದಾರ ಚೆನ್ನಯ್ಯ ಸ್ವಾಮಿಗಳು, ಶ್ರೀ ಇಮ್ಮಡಿ ಸಿದ್ಧರಾಮೇಶ್ವರ ಸ್ವಾಮಿಗಳು ಹಾಗೂ ಶ್ರೀ ಶಿವಬಸವ ಸ್ವಾಮಿಗಳು, ಶ್ರೀ ಬಿ. ಮಲ್ಲಿಕಾರ್ಜುನ್, ಶ್ರೀ ಎಸ್.ಪಿ. ದಯಾನಂದ್ ಮೊದಲಾದವರಿದ್ದಾರೆ (16 ನವೆಂಬರ್ 2025)

Registered with the Registrar of Newspapers in India Under No. 50622 / 1986
'Prasada' Monthly, Vol. 40 Issue No. 11, November 2025



ISSN 2583-7

ಬಿಡಿ ಪ್ರತಿ : ರೂ.10/–

e-mail: prasada@jssonline.org * www.jssonline.org